

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ 43 ಅತ್ಯುತ್ತಮ ಪತ್ರಿಕೋದ್ಯಮ


ಮೇ 12 ಗುರುವಾರ 2022

ಸಂಪುಟ: 43 | ಸಂಚಿಕೆ: 26 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com



ಅವಧೂತ ದತ್ತ ಪೀಠದ ಸಂಸ್ಥಾಪಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನಾಚರಣೆಗೆ ಮುನ್ನುಡಿ

ಮೇಕೆದಾಟುವಿನಿಂದ ಮೈಸೂರುವರೆಗೆ 6 ದಿನಗಳ ಕಾಲ 'ವಿಶ್ವಶಾಂತಿ ಪಾದಯಾತ್ರೆ'


- ಮೇ 13ರಿಂದ 18ರವರೆಗೆ ಮಹಾಯಾತ್ರೆ
- ಮೇ 22ರಿಂದ 31ರವರೆಗೆ ವರ್ಧಂತ್ಯುತ್ಸವ
- ದೊಡ್ಡ ಆಲಹಳ್ಳಿ, ಸಾತನೂರು, ಹಲಗೂರು, ಮಳವಳ್ಳಿ, ಬನ್ನೂರು ಹಾದು ಮೈಸೂರು ಆಶ್ರಮ
- ಪಾದಯಾತ್ರೆಯಲ್ಲಿ ಸುಮಾರು 200 ಮಂದಿ ಭಾಗಿ ಸಾಧ್ಯತೆ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು, ಮೇ 11 (ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠದ ಸಂಸ್ಥಾಪಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಹತ್ತು ದಿನಗಳ 80ನೇ ಜನ್ಮದಿನಾಚರಣೆಯ ಪೂರ್ವಭಾವಿಯಾಗಿ ದತ್ತಪೀಠದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಮೇ 13ರಿಂದ 18ರವರೆಗೆ ಆರು ದಿನಗಳ 'ವಿಶ್ವಶಾಂತಿ ಪಾದಯಾತ್ರೆ' ಕೈಗೊಳ್ಳಲಿದ್ದಾರೆ.

ಸ್ವತಃ ಈ ವಿಷಯವನ್ನು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಬುಧವಾರ ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಮೈಸೂರಿನ ಅವಧೂತ ದತ್ತ ಪೀಠದಲ್ಲಿ ನಡೆದ ಗೋಷ್ಠಿಯಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತ್ಯುತ್ಸವದ ಆಹ್ವಾನ ಪತ್ರಿಕೆಯನ್ನು ದತ್ತಪೀಠದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು. ಕಾರ್ಯನಿರ್ವಾಹಕ ಟ್ರಸ್ಟಿ ಹೆಚ್.ವಿ.ಪ್ರಸಾದ್ ಇದ್ದಾರೆ.

ಅವಧೂತ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತ್ಯುತ್ಸವ ಮೇ 22ರಿಂದ 31ರವರೆಗೆ ನಡೆಯಲಿವೆ. ಇದರ ಅಂಗವಾಗಿ ಮೇ 13ರಿಂದ 18ರವರೆಗೆ ವಿಶ್ವಶಾಂತಿ ಪಾದಯಾತ್ರೆ ಕೈಗೊಳ್ಳಲಾಗುತ್ತಿದೆ. ಕಾವೇರಿ ನದಿ ಹರಿಯುವ ಮೇಕೆದಾಟುವಿನಿಂದ ಮೇ 13ರಂದು ಪಾದಯಾತ್ರೆ ಆರಂಭವಾಗಲಿದ್ದು, ದೊಡ್ಡ ಆಲಹಳ್ಳಿ, ಸಾತನೂರು, ಹಲಗೂರು, ಮಳವಳ್ಳಿ ಹಾಗೂ ಬನ್ನೂರು ಮಾರ್ಗವಾಗಿ ಸುಮಾರು 80 ಕಿಲೋಮೀಟರ್, ನಾಮ ಸಂಕೀರ್ತನೆಯೊಂದಿಗೆ 18ರಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮವನ್ನು ಪಾದಯಾತ್ರೆ ತಲುಪಲಿದೆ ಎಂದರು.

ಯಾತ್ರೆಯ ನಡುವೆ ಬರುವ ನರಸಿಂಹ ಜಯಂತಿ ಸಂದರ್ಭದಲ್ಲಿ ಮಳವಳ್ಳಿ ಬಳಿಯ ಪ್ರಸಿದ್ಧ ಶ್ರೀ ನರಸಿಂಹಸ್ವಾಮಿ ದೇವಾಲಯಕ್ಕೂ ಭೇಟಿ ನೀಡಿ, ಅಲ್ಲಿ ನರಸಿಂಹಸ್ವಾಮಿ ದರ್ಶನ ಪಡೆಯಲಾಗುವುದು. ಪಾದಯಾತ್ರೆಯಲ್ಲಿ 80 ಮಂದಿ ಪಾಲ್ಗೊಳ್ಳುವ ಸಂಕಲ್ಪ ಮಾಡಲಾಗಿತ್ತು. ಭಕ್ತರ ಬೇಡಿಕೆ ಹಿನ್ನೆಲೆ ಅದನ್ನು 200ಕ್ಕೆ ಹೆಚ್ಚಿಸಲಾಯಿತು ಎಂದರು.



ವಿಜಯ ಹನುಮ ಗೋಪುರ

ಮೇ 18ರಂದು ಮೈಸೂರು ತಲುಪಿದ ನಂತರ ಮೇಕೆದಾಟಿನಿಂದ ತರಲಾದ ಕಾವೇರಿ ನೀರನ್ನು ದತ್ತಪೀಠದಲ್ಲಿರುವ ಶ್ರೀ ದತ್ತಾತ್ರೇಯ ಸ್ವಾಮಿಗೆ ಅಭಿಷೇಕ ಹಾಗೂ ▶ 5ನೇ ಪುಟಕ್ಕೆ

ಸಮುದ್ರದಲ್ಲಿ ತೇಲಿ ಬಂದ ಚಿನ್ನದ ರಥ



ಅಮರಾವತಿ: ಅಸನಿ ಚಂಡಮಾರುತದ ಪ್ರಭಾವಕ್ಕೆ ಸಿಲುಕಿರುವ ಆಂಧ್ರ ಪ್ರದೇಶದಲ್ಲಿ ಭಾರೀ ಬಿರುಗಾಳಿ ಸಹಿತ ಮಳೆಯಾಗುತ್ತಿದ್ದು, ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿದೆ. ಇದೇ ಅಬ್ಬರದ ಅಲೆಗಳಲ್ಲಿ ಚಿನ್ನದ ರಥವೊಂದು ತೇಲಿ ಬಂದಿದೆ. ಆಂಧ್ರಪ್ರದೇಶದ ಶ್ರೀಕಾಕುಳಂ, ಕಾಕಿನಾಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದೆ. ಸಮುದ್ರ ಪ್ರಕ್ಷುಬ್ಧವಾಗಿದ್ದು, ಇಂದು ಮುಂಜಾನೆ ವೇಳೆ ನಿಗೂಢ ಚಿನ್ನದ ರಥವೊಂದು ಶ್ರೀಕಾಕುಳಂನ ಸುನ್ನಪಲ್ಲಿ ಬಂದರಿನ ದಡಕ್ಕೆ ಬಂದು ತಲುಪಿದೆ. ಈ ಚಿನ್ನದ ರಥದ ರಕ್ಷಣಾ ಕಾರ್ಯಾಚರಣೆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು, ರಥವನ್ನು ಮೀನುಗಾರರು, ಸ್ಥಳೀಯರು ದಡಕ್ಕೆ ಎಳೆದು ತಂದಿದ್ದಾರೆ.

ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆ

ಮೂರ್‍ನಾಲ್ಕು ದಿನದಲ್ಲಿ ಸಂದೇಶ

- ದೆಹಲಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ
- ಪ್ರಧಾನಿ ಮೋದಿ ಅವರ ನಿರ್ಧಾರವನ್ನು ಸಿಎಂಗೆ ಮುಟ್ಟಿಸಿದ ಅಮಿತ್ ಶಾ: ಅಡ್ಡಗೋಡೆ ಮೇಲೆ ದೀಪ ಇಟ್ಟಂತಹ ಪರಿಸ್ಥಿತಿ

ಬೆಂಗಳೂರು, ಮೇ 11 (ಕೆಎಂಶಿ)–ಕರ್ನಾಟಕ ರಾಜಕೀಯಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ತೆಗೆದುಕೊಂಡಿರುವ ನಿರ್ಧಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮುಟ್ಟಿಸಿದ್ದಾರೆ. ಈ ಮಧ್ಯೆ ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆ ಸಂಬಂಧ ಯಾವಾಗ ಏನು ಬೇಕಾದರೂ ಆಗಬಹುದು. ಮೂರ್‍ನಾಲ್ಕು ದಿನದಲ್ಲಿ ವರಿಷ್ಠರು ಈ ಬಗ್ಗೆ ಸಂದೇಶ ಕಳುಹಿಸುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪ್ರಧಾನಿ ನಿರ್ಧಾರ ಏನೆಂಬುದು ಇನ್ನೂ ಬಹಿರಂಗವಾಗಿಲ್ಲ. ಆಡಳಿತ ಮತ್ತು ಪಕ್ಷದಲ್ಲಿನ ನಾಯಕತ್ವ ಗೊಂದಲ ಪರಿಹರಿಸಿಕೊಳ್ಳಲು ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದ ಸಿಎಂ ಅವರು, ಇಂದು ಶಾ ಅವರನ್ನು ಭೇಟಿ ಮಾಡಿ ಸುಮಾರು 30 ನಿಮಿಷ ಸಮಾಲೋಚನೆ ನಡೆಸಿದರು. ಗೃಹ ಸಚಿವರನ್ನು ಭೇಟಿ ಮಾಡುವುದಕ್ಕೂ ಮುನ್ನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಸಂಪರ್ಕಿಸಿ ಅವರ ಭೇಟಿಗೆ ಅವಕಾಶ ಕೋರಿದ್ದರು. ತಾವು ಗುಜರಾತ್ ಪ್ರವಾಸ ಕೈಗೊಳ್ಳುತ್ತಿರುವುದರಿಂದ ತಮ್ಮ ಭೇಟಿಗೆ ▶ 5ನೇ ಪುಟಕ್ಕೆ



ವರಿಷ್ಠರ ಚಿಂತನೆ

5+5 ಸೂತ್ರದಡಿ ಸಂಪುಟ ಪುನರ್ರಚನೆಗೆ ವರಿಷ್ಠರು ಚಿಂತನೆ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಈಗಾಗಲೇ 5 ಸಚಿವ ಸ್ಥಾನ ಖಾಲಿ ಇದ್ದು, ಇದರ ಜೊತೆಗೆ ಹಾಲಿ ಐವರು ಸಚಿವರಿಗೆ ಕೊಕ್ ನೀಡಿ ಹೊಸದಾಗಿ 10 ಮಂದಿ ಸೇರ್ಪಡೆಗೊಳಿಸಲು ಉದ್ದೇಶಿಸಿದ್ದಾರೆ ಎಂದೂ ಬಲ್ಲ ಮೂಲಗಳು ತಿಳಿಸಿವೆ.

ಸಂಪುಟ ಸೇರುವ ಸಾಧ್ಯತೆ

ಹೊನ್ನಾಳಿಯ ಎಂ.ಪಿ.ರೇಣುಕಾಚಾರ್ಯ, ಚಿತ್ರದುರ್ಗದ ತಿಪ್ಪಾರೆಡ್ಡಿ, ಗೋಕಾಕ್‌ನ ರಮೇಶ್ ಜಾರಕಿಹೊಳಿ, ಕೃಷ್ಣರಾಜ ಕ್ಷೇತ್ರದ ಎಸ್.ಎ.ರಾಮದಾಸ್, ಮಡಿಕೇರಿಯ ಅಪ್ಪಚ್ಚು ರಂಜನ್, ಶಿವಮೊಗ್ಗದ ಬಿ.ವೈ.ವಿಜಯೇಂದ್ರ, ಕುಡಚಿಯ ಪಿ.ರಾಜೀವ್, ಹಿರಿಯೂರು ಪೂರ್ಣಿಮಾ, ವಿಜಯಪುರ ಸಿಟಿ ಬಸನಗೌಡ ಪಾಟೀಲ್ ಯತ್ನಾಳ್, ಕಲಬುರಗಿ ದಕ್ಷಿಣದ ದತ್ತಾತ್ರೇಯ ರೇವೂರ.

ಸಂಪುಟದಿಂದ ಕೊಕ್ ಸಾಧ್ಯತೆ

ಮುರುಗೇಶ್ ನಿರಾಣಿ, ಸಿ.ಸಿ.ಪಾಟೀಲ್, ಪ್ರಭು ಚವ್ಹಾಣ್, ನಾರಾಯಣಗೌಡ ಸೇರಿದಂತೆ ಹಲವರು.

ಪಿಎಸ್‌ಐ ನೇಮಕಾತಿ ಹಗರಣ

ಹೊಳೆನರಸೀಪುರದಲ್ಲಿ ಬಂಧಿತ ಶಂಕಿತನ ಸಹೋದರ ಆತ್ಮಹತ್ಯೆ

ಹಾಸನ, ಮೇ 11–ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಭಾಗಿಯಾದ ಆರೋಪದ ಮೇಲೆ ಬಂಧನಕ್ಕೊಳಗಾದ ಅಭ್ಯರ್ಥಿಯ ಸಹೋದರ ನೇಣಿಗೆ ಶರಣಾಗಿರುವ ಘಟನೆ ಜಿಲ್ಲೆಯ ಹೊಳೆನರಸೀಪುರ ತಾಲೂಕು ಗುಂಜೇವು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಜಿ.ಆರ್.ವಾಸು, ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಈ ಘಟನೆ ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಜಿ.ಆರ್.ವಾಸು ಅವರ ಸಹೋದರ ಜಿ.ಆರ್.ಮನುಕುಮಾರ್ ಪಿಎಸ್‌ಐ ಪರೀಕ್ಷೆಯಲ್ಲಿ 50ನೇ ರ್‍ಯಾಂಕ್ ಪಡೆದಿದ್ದ. ಪಿಎಸ್‌ಐ ಹಗರಣವನ್ನು ಭೇದಿಸಿದ ಪೊಲೀಸರಿಗೆ ▶ 5ನೇ ಪುಟಕ್ಕೆ

ಬಂಧಿತ 9 ಅಭ್ಯರ್ಥಿಗಳ ಜಾಮೀನು ಅರ್ಜಿ ವಜಾ

ಕಲ್ಬುರ್ಗಿ: ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತ 9 ಅಭ್ಯರ್ಥಿಗಳ ಜಾಮೀನು ಅರ್ಜಿಯನ್ನು ಕಲ್ಬುರ್ಗಿ ನ್ಯಾಯಾಲಯ ವಜಾಗೊಳಿಸಿದ್ದು, 9 ಅಭ್ಯರ್ಥಿಗಳಿಗೂ ಜೈಲೇ ಗತಿಯಾಗಿದೆ. ಆರೋಪಿಗಳಾದ ವಿಶಾಲ್, ಹಯ್ಯಾಳಿ ದೇಸಾಯಿ, ಶರಣ ಬಸಪ್ಪ, ರುದ್ರೇಗೌಡ, ಮಹಂತೇಶ್ ಪಾಟೀಲ್, ಮಲ್ಲಿಕಾರ್ಜುನ್ ಪಾಟೀಲ್, ಸುರೇಶ್ ಕಟೇಗಾಂ, ಚಾಲಕ ಸದ್ದಾಂ, ಕಾಳಿದಾಸ್ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ ಜಾಮೀನು ನೀಡಿದರೆ ಸಾಕ್ಷಿ ನಾಶಪಡಿಸುವ ಸಾಧ್ಯತೆ ಇದೆ. ಹೀಗಾಗಿ ಜಾಮೀನು ನೀಡದಂತೆ ಸಿಐಡಿ ಮನವಿ ಮಾಡಿತ್ತು. ಇದೀಗ ಕೋರ್ಟ್ ಜಾಮೀನು ಅರ್ಜಿ ವಜಾಗೊಳಿಸಿದೆ ಇನ್ನು ಆರೋಪಿ ದಿವ್ಯಾ ಹಾಗರಗಿ ಪತಿ ರಾಜೇಶ್ ಹಾಗರಗಿ, ಚೇತನ್ ನಂದಗಾಂವ, ಅರುಣ್‌ಕುಮಾರ್, ಸುಮಾ, ಸಿದ್ದಮ್ಮ ಸಲ್ಲಿಸಿದ್ದ ಜಾಮೀನು ಅರ್ಜಿಯೂ ವಜಾಗೊಂಡಿದೆ.

ಅಬಕಾರಿ ಆದಾಯಕ್ಕೆ ಹೊಸ ಮಾರ್ಗ

ಇನ್ನು ಕಡಿಮೆ ದರದಲ್ಲಿ ದುಬಾರಿ ಮದ್ಯದ ಮತ್ತು!

ಬೆಂಗಳೂರು, ಮೇ 11 (ಕೆಎಂಶಿ)– ಸರಕಾರದ ಆದಾಯ ಹೆಚ್ಚಿಸಲು ದುಬಾರಿ ಮದ್ಯದ ಬೆಲೆಯನ್ನು ಶೇ.40ರಿಂದ 50ರಷ್ಟು ಕಡಿಮೆ ಮಾಡಲು ರಾಜ್ಯ ಸರಕಾರ ನಿರ್ಧರಿಸಿದೆ. ಸರಕಾರದ ಈ ನಿರ್ಧಾರದಿಂದ ಅಬಕಾರಿಯಿಂದಲೇ ವಾರ್ಷಿಕ 5000 ಕೋಟಿ ರೂ. ಹೆಚ್ಚುವರಿ ಆದಾಯ ಬೊಕ್ಕಸಕ್ಕೆ ಬರಲಿದೆ.



ಕಡಿಮೆ ಹಾಗೂ ಮಧ್ಯಮ ದರ್ಜೆಯ ಮದ್ಯದ ಬೆಲೆ ಯಥಾಸ್ಥಿತಿ ಮುಂದುವರಿಸಲು ಸರಕಾರ ತೀರ್ಮಾನ ಕೈಗೊಂಡಿದೆ. ಈ ನಿರ್ಧಾರವನ್ನು ಅಬಕಾರಿ ಸಚಿವ ಕೆ.ಗೋಪಾಲಯ್ಯ ಸುದ್ದಿಗಾರರಿಗೆ ತಿಳಿಸಿದರು. ನೆರೆಯ ಮಹಾರಾಷ್ಟ್ರ, ತೆಲಂಗಾಣ ಮತ್ತು ದೆಹಲಿ ಸೇರಿ 4 ರಾಜ್ಯಗಳಲ್ಲಿ ಇಂಥ ನಿರ್ಧಾರ ಕೈಗೊಂಡಿದ್ದರಿಂದ ಅಲ್ಲಿನ ಸರಕಾರಗಳಿಗೆ ವಾರ್ಷಿಕ ಆದಾಯ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ನಮ್ಮಲ್ಲಿನ ಅಬಕಾರಿ ನೀತಿಯಿಂದ ಆದಾಯದ ಕೊರತೆ ಕುಂಠಿತವಾಗಿದ್ದು, ಇದನ್ನು ಸರಿದೂಗಿಸಲು ನಾನೂ ಸೇರಿದಂತೆ ಹಿರಿಯ ಅಧಿಕಾರಿಗಳ ತಂಡ, ▶ 5ನೇ ಪುಟಕ್ಕೆ

'ದೇಶದ್ರೋಹ' ಕಾನೂನಿಗೆ ಸುಪ್ರೀಂ ತಡೆ

ಬ್ರಿಟಿಷ್ ಕಾಲದ ಕಾನೂನನ್ನು ಕೇಂದ್ರ ಮರುಪರಿಶೀಲಿಸುವವರೆಗೆ ದೇಶದ್ರೋಹ ಪ್ರಕರಣ ದಾಖಲಿಸದಂತೆ ಸೂಚನೆ



ನವದೆಹಲಿ, ಮೇ 11– ಬ್ರಿಟಿಷರ ಕಾಲದ ದೇಶದ್ರೋಹ ಕಾನೂನಿನ ಮರುಪರಿಶೀಲನೆ ಪೂರ್ಣಗೊಳ್ಳುವವರೆಗೆ ದೇಶದ್ರೋಹ ಕಾನೂನನ್ನು ಸುಪ್ರೀಂಕೋರ್ಟ್ ತಡೆ ಹಿಡಿದಿದೆ. ಸದ್ಯಕ್ಕೆ ದೇಶ ದ್ರೋಹ ಆರೋಪದಡಿ ಯಾವುದೇ ಹೊಸ ಪ್ರಕರಣಗಳನ್ನು ದಾಖಲಿಸಬಾರದು ಎಂದು ಸುಪ್ರೀಂಕೋರ್ಟ್ ಬುಧವಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ಬಾಕಿ ಉಳಿದಿರುವ ದೇಶದ್ರೋಹ ಪ್ರಕರಣಗಳಲ್ಲಿ, ದೇಶದ್ರೋಹದ ಆರೋಪದಡಿ ಜೈಲಿನಲ್ಲಿ ಇರುವವರು ನ್ಯಾಯಾಲಯಗಳನ್ನು ಸಂಪರ್ಕಿಸಿ ಜಾಮೀನು ಪಡೆಯಬಹುದು ಎಂದು ಸುಪ್ರೀಂಕೋರ್ಟ್ ಹೇಳಿದೆ.

ದೇಶದ್ರೋಹಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಎ ಅಡಿಯಲ್ಲಿ ಯಾವುದೇ ಎಫ್‌ಐಆರ್ ದಾಖಲಿಸುವುದು ಮತ್ತು ಯಾವುದೇ ಪ್ರಕ್ರಿಯೆಗಳನ್ನು ನಡೆಸದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಆದೇಶಿಸಿದೆ. ದೇಶದ್ರೋಹದ ಕಾನೂನು ಮರುಪರಿಶೀಲನೆ ಪೂರ್ಣಗೊಳ್ಳುವವರೆಗೆ ಅದನ್ನು ಬಳಸಲಾಗುವುದಿಲ್ಲ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್‌ವಿ ರಮಣ ನೇತೃತ್ವದ ಪೀಠ ಹೇಳಿದೆ. ಈಗಾಗಲೇ ಐಪಿಸಿ ಸೆಕ್ಷನ್ 124ಎ ▶ 5ನೇ ಪುಟಕ್ಕೆ



ಖಾಸಗಿ ವ್ಯಕ್ತಿಗೆ ಸ್ವಾಧೀನವಾಗಿದ್ದ 2.28 ಎಕರೆ ಭೂಮಿಯ ಖಾತೆ ವರ್ಗಾವಣೆ: ಸಹಕರಿಸಿದ ಮುಡಾ ಅಧಿಕಾರಿಗಳು

● ಎಸ್.ಟಿ.ರವಿಕುಮಾರ್

ಮೈಸೂರು, ಮೇ 11–ಹೊಕ್ಕಿದಷ್ಟೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರದ ದರ್ಶನವಾಗುತ್ತಿದೆ. ಮುಡಾ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡುವ ಮೂಲಕ ಸರ್ಕಾರಕ್ಕೆ ಮಹಾದ್ರೋಹವೆಸಗಿರುವುದು ಬಯಲಾಗುತ್ತಿದೆ. ಈ ಹಿಂದೆ ವಸತಿ ಬಡಾವಣೆಗಳಿಗಾಗಿ ಅಧಿಸೂಚನೆ ಹೊರಡಿಸಿ, ಅವಾರ್ಡ್ ರಚಿಸಿ ಸ್ವಾಧೀನಪಡಿಸಿಕೊಂಡ ಬೆಲೆಬಾಳುವ ಭೂಮಿಯನ್ನು ಡಿ–ನೋಟಿಫೈ ಮಾಡಲಾಗಿದೆ ಎಂದು ದಾಖಲೆ ಸೃಷ್ಟಿಸುವ ಮೂಲಕ ಭಾರೀ ಅಕ್ರಮ ನಡೆಸಿರುವ ಪ್ರಕರಣಗಳು ಒಂದೊಂದಾಗಿ ಬಯಲಾಗುತ್ತಿವೆ.




ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ–2

ಇದೀಗ ವಿಜಯನಗರ 3ನೇ ಹಂತ ಬಡಾವಣೆಗೆಂದು ಅಧಿಸೂಚನೆ ಹೊರಡಿಸಿದ್ದ ಹಿನಕಲ್ ಗ್ರಾಮದ ಸರ್ವೆ ನಂ. 292/3ರಲ್ಲಿ 30 ಗುಂಟೆ ಹಾಗೂ 293ರಲ್ಲಿ 1.38 ಎಕರೆ ಸೇರಿ ಒಟ್ಟು 2.28 ಎಕರೆ ಭೂಮಿ (ಬಸವರಾಜ ಸರ್ಕಲ್ ಬಳಿ)ಯನ್ನು ಮುಡಾ ಅಧಿಕಾರಿಗಳೇ ನಕಲಿ ದಾಖಲೆ ಸೃಷ್ಟಿಸಿ ಭೂ ಸ್ವಾಧೀನವಾಗಿಲ್ಲ ಎಂದು ತಪ್ಪು ಮಾಹಿತಿಯೊಂದಿಗೆ ಎನ್‌ಓಸಿ ನೀಡುವ ಮೂಲಕ ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ ವರ್ಗಾವಣೆ ಮಾಡಲು ಸಹಕರಿಸಿರುವುದು ಬಯಲಾಗಿದೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಕ್ರಮಕ್ಕೆ ಮುಂದಾದ ಮುಡಾ ಹಿಂದಿನ ಆಯುಕ್ತ ಡಾ. ಡಿ.ಬಿ. ನಟೇಶ ಅವರು, 2022ರ ಏ. 29ರಂದು ಜ್ಞಾಪನ ಪತ್ರ ಹೊರಡಿಸಿದ್ದು, ಮೈಸೂರು ತಹಸೀಲ್ದಾರ್‌ಗೆ ಪತ್ರ ಬರೆದು ಆರ್‌ಟಿಸಿಯ 9ನೇ ಕಲಂನಲ್ಲಿ ನಮೂದಾಗಿರುವುದನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಿ ಮುಡಾ ಹೆಸರಿಗೆ ಇಂಡೀ ಕರಿಸುವಂತೆ ನಿರ್ದೇಶನ ನೀಡಿದ್ದಾರೆ.

ಅಲ್ಲದೆ, ಈ ಅಕ್ರಮದಲ್ಲಿ ಭಾಗಿಯಾಗಿರುವ ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ವಿನಂತಿ ಪತ್ರ ಬರೆಯುವಂತೆಯೂ ಸೂಚಿಸಿರುವ ಡಾ.ನಟೇಶ್, ಕೂಡಲೇ ಸಂಬಂಧಪಟ್ಟ ಭೂಸ್ವಾಧೀನದ ಕಡತದೊಂದಿಗೆ ಪೊಲೀಸ್ ರಕ್ಷಣೆ ಪಡೆದು ಜಾಗದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ ಆಸ್ತಿಯನ್ನು ಮುಡಾ ವಶಕ್ಕೆ ಪಡೆಯುವಂತೆಯೂ ಆದೇಶಿಸಿದ್ದಾರೆ. ಹಿನಕಲ್ ಗ್ರಾಮದ ಸರ್ವೆ ನಂ.292/3ರಲ್ಲಿ 1.9 ಎಕರೆ ಮತ್ತು 293ರಲ್ಲಿ 1.38 ಎಕರೆ ಭೂಮಿಗೆ ▶ 5ನೇ ಪುಟಕ್ಕೆ

ಸಚಿವರು, ಕಾರ್ಯದರ್ಶಿಗಳಿಗೆ ಜಿಟಿಡಿ ಮನವಿ

ಹೂಟಗಳ್ಳಿ ನಗರಸಭೆ, ಶ್ರೀರಾಂಪುರ, ಬೋಗಾದಿ, ಕಡಕೊಳ, ರಮ್ಮನಹಳ್ಳಿ ಪಪಂಗಳಲ್ಲಿ ಫಾರಂ ನಂ.3 ನೀಡುವ ಭರವಸೆ



ಬೆಂಗಳೂರು, ಮೇ 11– ಚಾಮುಂಡೇಶ್ವರಿ ಕ್ಷೇತ್ರದ ಹೂಟಗಳ್ಳಿ ನಗರಸಭೆ, ಶ್ರೀರಾಂಪುರ, ಬೋಗಾದಿ, ಕಡಕೊಳ ಮತ್ತು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳಲ್ಲಿ ಫಾರಂ ನಂ. 3 ನೀಡುವ ಸಂಬಂಧ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಅವರನ್ನು ಶಾಸಕ ಜಿ.ಟಿ.ದೇವೇಗೌಡ ಭೇಟಿ ಮಾಡಿ, ಚರ್ಚಿಸಿದ್ದಾರೆ.

ಗ್ರಾಮ ಪಂಚಾಯಿತಿಗಳು, ಈಗ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿದ ನಂತರ ಈ ಹಿಂದೆ ಪಂಚಾಯಿತಿಗಳಿಂದ ನೀಡಲಾಗಿದ್ದ 11ಬಿ ನಮೂನೆಗಳಿಗೆ ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ಸಭೆಗಳಲ್ಲಿ ಫಾರಂ ನಂ.3 ಅನ್ನು ನೀಡದೇ ಇರುವುದರಿಂದ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿತ್ತು. ಇದನ್ನು ಮನಗಂಡ ಶಾಸಕ ಜಿ.ಟಿ.ದೇವೇಗೌಡ, ಸಚಿವರುಗಳು ಹಾಗೂ ಕಾರ್ಯದರ್ಶಿಯನ್ನು ಭೇಟಿ ಮಾಡಿ ಈ ಮೊದಲು ಗ್ರಾಮ ಪಂಚಾಯಿತಿಗಳು ನೀಡಿದ್ದ 11ಬಿ ನಮೂನೆಗಳಿಗೆ ಫಾರಂ ನಂ.3 ಅನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಸಚಿವರು ಹಾಗೂ ಕಾರ್ಯದರ್ಶಿಗಳು ಕೂಡಲೇ ಈ ಸಂಬಂಧ ಆದೇಶ ಹೊರಡಿಸುವುದಾಗಿ ಹೇಳಿರುವುದಾಗಿ ಜಿ.ಟಿ.ದೇವೇಗೌಡರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬ್ಯಾಂಕ್ ನೋಟ್ ಪೇಪರ್ ಮಿಲ್‌ನಿಂದ ಸರ್ಕಾರಿ ಪಿಯು ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ವ್ಯವಸ್ಥೆ



ಮೈಸೂರು, ಮೇ 11 (ಆರ್‌ಕೆ)– ಮೈಸೂರಿನ ಬ್ಯಾಂಕ್ ನೋಟ್ ಪೇಪರ್‌ಮಿಲ್ ಇಂಡಿಯಾ ವತಿಯಿಂದ ಸಿಎಸ್‌ಆರ್(ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ) ನಿಧಿಯಡಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಡಳಿತ, ಪದವಿಪೂರ್ವ ಶಿಕ್ಷಣ ಮತ್ತು ವೃತ್ತಿ ತರಬೇತಿ ಇಲಾಖೆಗಳ ಕೋರಿಕೆಗೆ ಸ್ಪಂದಿಸಿರುವ ಬ್ಯಾಂಕ್ ನೋಟ್ ಪೇಪರ್‌ಮಿಲ್ ವತಿಯಿಂದ ಜಿಲ್ಲೆಯ ಸರ್ಕಾರಿ ಪಿಯು ಕಾಲೇಜುಗಳಿಗೆ 70 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಿಎಸ್‌ಆರ್ ನಿಧಿಯಡಿ ವಿತರಣೆ ಮಾಡಲಾಗುತ್ತಿದೆ. ಮೊದಲ ಹಂತದಲ್ಲಿ ಮೈಸೂರಿನ ಮಹಾರಾಣಿ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿಗೆ ಸಾಂಕೇತಿಕವಾಗಿ ಬಿಸಿನೀರು ಮತ್ತು ತಣ್ಣೀರು ಘಟಕವನ್ನು ವಿತರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಬಿಎನ್‌ಪಿಎಂ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ.ವಿಶ್ವನಾಥನ್, ಸರ್ಕಾರಿ ಶಾಲಾ ಕಾಲೇಜುಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಸಲುವಾಗಿ ಕಾರ್ಪೊರೇಟ್ ಕಂಪನಿಗಳು ಸಿಎಸ್‌ಆರ್ ನಿಧಿಯಲ್ಲಿ ಅನುದಾನ ಮೀಸಲಿರಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದ್ದು, ಇದರಿಂದ ಸರ್ಕಾರಕ್ಕೂ ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದರು.

ಅಗತ್ಯವಿರುವ ಕಾಲೇಜುಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ತಮ್ಮ ಸಂಸ್ಥೆಯು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನೀಡುತ್ತಿದ್ದು, ಹೀಗೆ ಜಿಲ್ಲೆಯಲ್ಲಿ 70 ಘಟಕ ವಿತರಿಸಲು ಉದ್ದೇಶಿಸಲಾಗಿದೆ ಎಂದರು. ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ಆಸಕ್ತಿ ವಹಿಸಿ ಜಿಲ್ಲಾಡಳಿತದ ಸಹಯೋಗದಲ್ಲಿ ಬ್ಯಾಂಕ್ ನೋಟ್ ಪೇಪರ್ ಮಿಲ್‌ನವರು ಸಿಎಸ್‌ಆರ್ ನಿಧಿಯನ್ನು ಉತ್ತಮ ಕೆಲಸಕ್ಕೆ ವಿನಿಯೋಗ ಮಾಡುತ್ತಿರುವುದು ಶ್ಲಾಘನೀಯ ಎಂದು ಪಪೂ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಿ.ಕೆ.ಶ್ರೀನಿವಾಸ ಮೂರ್ತಿ, ಬಿಎನ್‌ಪಿಎಂ ಜನರಲ್ ಮ್ಯಾನೇಜರ್ (ತಾಂತ್ರಿಕ) ಅನಂತ ಹೆಗ್ಡೆ, ಅಭಯ ಕುಮಾರ್ ಮಹಾಪಾತ್ರ, ಕಂಪನಿ ಕಾರ್ಯದರ್ಶಿ ಲಕ್ಷ್ಮೀಶ ಬಾಬು, ಡೆಪ್ಯುಟಿ ಮ್ಯಾನೇಜರ್ ಗೋಪಾಲಕೃಷ್ಣ, ಪ್ರಾಂಶುಪಾಲ ಪಿ.ಸೋಮಣ್ಣ, ಪಿಯು ಕಾಲೇಜು ಪ್ರಾಂಶುಪಾಲರುಗಳ ಸಂಘದ ಅಧ್ಯಕ್ಷ ಶಿವೇಗೌಡ, ಉಪನ್ಯಾಸಕರುಗಳ ಸಂಘದ ಅಧ್ಯಕ್ಷ ಎಂ.ಎಂ. ಮಹದೇವ, ಉಪನ್ಯಾಸಕರಾದ ಮಂಜೇಗೌಡ, ಅನಿತಾ ಹಾಗೂ ಇತರರು ಪಾಲ್ಗೊಂಡಿದ್ದರು.



ಮೈಸೂರು ಪ್ರಾಂತೀಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಬೆಂಗಳೂರು ದಕ್ಷಿಣ ವಿಭಾಗದ ಅಬಕಾರಿ ಜಂಟಿ ಆಯುಕ್ತ ಎ.ಎಲ್. ನಾಗೇಶ್, ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ಡಾ.ಬಿ.ಸಿ.ವಿಜಯಕುಮಾರ್, ಮೈಸೂರು ಗ್ರಾಮಾಂತರ ವಿಭಾಗದ ಅಬಕಾರಿ ಉಪ ಆಯುಕ್ತ ಎ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು. ಸೊಸೈಟಿ ಅಧ್ಯಕ್ಷ ಚಂದ್ರಶೇಖರ್, ರಾಮಾರಾಧ್ಯ, ಲಕ್ಷ್ಮಣ್, ದೊಡ್ಡನಾಯಕ, ರಾಜಶೇಖರ ಕದಂಬ, ಹನುಮಂತೇಗೌಡ, ಶೇಖರ್ ಇನ್ನಿತರರಿದ್ದರು.

'ಮಾನವರಾಗೋಣ' ಬೀದಿ ನಾಟಕ ಪ್ರದರ್ಶನ

ಮೈಸೂರು, ಮೇ 11– ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ವತಿಯಿಂದ ಮೈಸೂರು ಕೇಂದ್ರ ಕಾರಾಗೃಹ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಂಯುಕ್ತಾಶ್ರಯದಲ್ಲಿ, ರಂಗಾಯಣದ ವಿಶೇಷ ಘಟಕ ಯೋಜನೆಯಡಿ, ಕಾರಾಗೃಹದ ಬಂದಿಗಳಲ್ಲಿ ಅನಕ್ಷರತೆ, ಜಾತಿ ವ್ಯವಸ್ಥೆ, ಜೀತ ಪದ್ಧತಿ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಪಿಡುಗುಗಳ ಕುರಿತು ಬಂದಿಗಳಿಗೆ ಜಾಗೃತಿ ಮೂಡಿಸುವ ಸಲುವಾಗಿ 'ಮಾನವರಾಗೋಣ' ಎಂಬ ಬೀದಿ ನಾಟಕವನ್ನು ರಂಗಾಯಣದ ಹತ್ತು ಜನ ಕಲಾವಿದರು ಪ್ರದರ್ಶನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ವಹಿಸಿದ್ದು, ಮುಖ್ಯ ಅತಿಥಿಗಳಾಗಿ ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಭಾಗವಹಿಸಿದ್ದರು. ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಗಾಯನದ ಇತರ ಕಲಾವಿದರು ಹಾಗೂ ಮೈಸೂರು ಕೇಂದ್ರ ಕಾರಾಗೃಹದ ಅಧಿಕಾರಿ ಅಥವಾ ಸಿಬ್ಬಂದಿ ವರ್ಗದವರು ಮತ್ತು ಬಂದಿ ನಿವಾಸಿಗಳು ಉಪಸ್ಥಿತರಿದ್ದರು.

ನಿಧನ

ರಮೇಶ್ ಎಸ್. ಜೈನ್



ಮೈಸೂರು, ಮೇ 11–ಮೈಸೂರಿನ ನಜರ್‌ಬಾದ್ ನಿವಾಸಿ ರಮೇಶ್ ಎಸ್. ಜೈನ್ (59) ಬುಧವಾರ ನಿಧನರಾದರು. ಇವರು ಮೈಸೂರು ಪಿಂಜ್ರಾಪೋಲ್ ಸೊಸೈಟಿ ಉಪಾಧ್ಯಕ್ಷರಾಗಿದ್ದರು. ಮೃತರು ತಾಯಿ, ಪತ್ನಿ, ಸಹೋದರ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಲೀಂ ಪಾಷಾ



ಮೈಸೂರಿನ ಉದಯಗಿರಿ ನಿವಾಸಿ ಸಲೀಂ ಪಾಷ (57) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಸಹೋದರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ನಮಾಜ್–ಇ–ಜನಾಜ್ ನಡೆದ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಎನ್.ಸುರೇಶ್



ಮೈಸೂರು ಒಂಟಿಕೊಪ್ಪಲು ನಿವಾಸಿ ಟೈಲರ್ ವೃತ್ತಿನಿರತ ಎನ್.ಸುರೇಶ್ (47) ಅವರು ಬುಧವಾರ ನಿಧನರಾದರು. ಮೃತರು ಇಬ್ಬರು ಸಹೋದರರು, ನಾಲ್ವರು ಸಹೋದರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಒಂಟಿಕೊಪ್ಪಲು ಪತ್ರಿಕಾ ವಿತರಕ ಪ್ರಕಾಶ್ ಮೃತರ ಸಹೋದರರಲ್ಲಿ ಒಬ್ಬರು. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ನಕಲಿ ಜಾತಿ ಪ್ರಮಾಣಪತ್ರದ ವಿರುದ್ಧ ಕ್ರಮ ಕೈಗೊಂಡಿದ್ದಕ್ಕೆ

ಡಾ.ರವೀಂದ್ರನಾಥ್ ವರ್ಗಾವಣೆ ಮಾಡಿದ್ದರೆ ದೊಡ್ಡ ಅಪರಾಧ

ರಾಜ್ಯದಲ್ಲಿ ದುರ್ಬಲ ಮುಖ್ಯಮಂತ್ರಿ, ಭ್ರಷ್ಟ ಸರ್ಕಾರ; ಸಿದ್ದರಾಮಯ್ಯ ಕಿಡಿನುಡಿ



ಮೈಸೂರು,ಮೇ 11(ಪಿಎಂ)– ನಕಲಿ ಜಾತಿ ಪ್ರಮಾಣಪತ್ರ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದ ಕಾರಣಕ್ಕೆ ಡಿಸಿಆರ್‌ಇ ಡಿಜಿಪಿ ಹುದ್ದೆಯಿಂದ ನನ್ನನ್ನು ವರ್ಗಾವಣೆ ಮಾಡಲಾಯಿತೆಂದು ಡಾ.ಪಿ.ರವೀಂದ್ರನಾಥ್ ಸ್ವತಃ ಹೇಳಿಕೆ ನೀಡಿದ್ದು, ಹಾಗೆ ಮಾಡಿದ್ದರೆ ಸರ್ಕಾರ ದೊಡ್ಡ ಅಪರಾಧ ಮಾಡಿದಂತೆ ಎಂದು ಮಾಜಿ ಮುಖ್ಯಮಂತ್ರಿಗಳೂ ಆದ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ನಿವೇದಿತನಗರದ ಕನ್ವೆನ್ಷನ್ ಸೆಂಟರ್‌ವೊಂದರಲ್ಲಿ ಬುಧವಾರ ನಡೆದ ಸಂಬಂಧಿಕರ ಬೀಗರ ಊಟಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಳಿಕ ಐಪಿಎಸ್ ಅಧಿಕಾರಿ ಡಾ.ರವೀಂದ್ರನಾಥ್ ರಾಜೀನಾಮೆ ನೀಡಿರುವ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಹಿರಿಯ ಐಪಿಎಸ್ ಅಧಿಕಾರಿ ಡಾ. ರವೀಂದ್ರನಾಥ್ ಅವರು ಡಿಸಿಆರ್‌ಇ (ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ) ಡಿಜಿಪಿ ಆಗಿದ್ದರು. ಅವರನ್ನು ಇತ್ತೀಚೆಗಷ್ಟೇ ಪೊಲೀಸ್ ತರಬೇತಿ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ನಕಲಿ ಜಾತಿ ಪ್ರಮಾಣಪತ್ರ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದ ಕಾರಣಕ್ಕೆ ವರ್ಗಾವಣೆ ಮಾಡಲಾಯಿತು ಎಂದು ಅವರೇ ಹೇಳಿದ್ದಾರೆ. ಅದೇ ಹಾಗಿದ್ದಲ್ಲಿ ಸರ್ಕಾರ ದೊಡ್ಡ ಅಪರಾಧ ಮಾಡಿದಂತೆ ಎಂದರು.

ಶಾಸಕ ಎಂ.ಪಿ.ರೇಣುಕಾಚಾರ್ಯ ಪುತ್ರಿಗೆ 'ಬೇಡ ಜಂಗಮ' ಜಾತಿ ಪ್ರಮಾಣ ಪತ್ರ ಪಡೆಯಲಾಗಿದೆ. ವಿಧಾನಸಭೆಯಲ್ಲೂ ಇದು ಚರ್ಚೆಯಾಗಿದೆ. ಅವರು ಅರ್ಹರಲ್ಲವಾದರೂ ಹೀಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ತೆಗೆದುಕೊಂಡಿರುವುದು ಅಪರಾಧ. ಅಂತಹವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕಲ್ಲವೇ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯದಲ್ಲಿ ಅಧಿಕಾರಿಗಳಿಗೆ ಪಾರದರ್ಶಕ ಆಡಳಿತ ನಡೆಸಲು ಸ್ವಾತಂತ್ರ್ಯವಿಲ್ಲವೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಭ್ರಷ್ಟಾಚಾರ ಇರುವೆಡೆ ದುರಾಡಳಿತ ಇರುತ್ತದೆ. ಭ್ರಷ್ಟಾಚಾರ ವ್ಯಾಪಕವಾಗಿರುವಲ್ಲಿ ಸಮರ್ಪಕ ಆಡಳಿತವಿರಲು ಸಾಧ್ಯವಿಲ್ಲ. ಅಂತೆಯೇ ಇಂದು ಬಹಳ ದುರ್ಬಲ ಮುಖ್ಯಮಂತ್ರಿ ಇದ್ದು, ಭ್ರಷ್ಟ ಸರ್ಕಾರ ಆಡಳಿತ ನಡೆಸುತ್ತಿದೆ. ಇಂತಹ ಸರ್ಕಾರದಲ್ಲಿ ನ್ಯಾಯ ಎಲ್ಲಿ ದೊರೆಯಲಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಕುಟುಕಿದರು.

ಓಬಿಸಿ ಮೀಸಲು ಉಳಿಸಲು ಮೇಲ್ಮನವಿ ಸಲ್ಲಿಸಲಿ

ಮಧ್ಯಪ್ರದೇಶ ಸಂಬಂಧ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ ಮಂಗಳವಾರ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಕುರಿತು ಪ್ರತಿಕ್ರಿಯಿಸಿ, ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಕಳೆದ ವರ್ಷವೇ ತೀರ್ಪು ನೀಡಿತ್ತು. ನಮ್ಮ ರಾಜ್ಯ ಸರ್ಕಾರದವರು ಆಗಲೇ ಕ್ರಮ ವಹಿಸಬಹುದಿತ್ತು. ರಾಜ್ಯದಲ್ಲಿ ಸಿದ್ಧವಾಗಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ವರದಿಯನ್ನು ಕೋರ್ಟಿಗೆ ಸಲ್ಲಿಸಿ ಚುನಾವಣೆ ನಡೆಸಬಹುದಿತ್ತು. ಆದರೆ ಸರ್ಕಾರ ನಿರ್ಲಕ್ಷ್ಯ ತಾಳಿತು ಎಂದು ಸಿದ್ದರಾಮಯ್ಯ ದೂರಿದರು.

ಅವಧಿ ಮುಗಿದ ಕೂಡಲೇ ಚುನಾವಣೆ ಮಾಡಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ. ಮೂರು ಹಂತದ ಪರಿಶೀಲನೆ ಅಗತ್ಯ, ಅಲ್ಲಿಯವರೆಗೆ ಮೀಸಲಾತಿ ಇರುವುದಿಲ್ಲವೆಂದು ಕೋರ್ಟ್ ತಿಳಿಸಿದೆ. ಮೂರು ಹಂತದ ಪರಿಶೀಲನೆಗೆ ಪ್ರತ್ಯೇಕ ಆಯೋಗ ರಚನೆಗೆ ಸೂಚನೆ ಸಹ ನೀಡಿದ್ದು, ಆಯೋಗ ವರದಿ ನೀಡಿದ ಬಳಿಕ ಮೀಸಲಾತಿ ನಿಗದಿ ಮಾಡಲು ತಿಳಿಸಿದೆ ಎಂದರು.

ಈಗಲೂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ, ಈ ಹಿಂದೆ ನನ್ನ ಅವಧಿಯಲ್ಲಿ ನಡೆಸಲಾದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ವರದಿ ಮೂಲಕ ಹಿಂದುಳಿದ ವರ್ಗಗಳ ಮೀಸಲಾತಿ ಉಳಿಸಲು ಅವಕಾಶವಿದೆ. ಆದರೆ ಇವರಿಗೆ ಅದನ್ನು ಮಾಡಲು ಮನಸ್ಸು ಇರಬೇಕು. ಇದನ್ನು ಬಿಟ್ಟು ಚುನಾವಣೆ ನಡೆಸಿದರೆ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕೈತಪ್ಪುವ ಮೂಲಕ ಅನ್ಯಾಯವಾಗಲಿದೆ. ನನ್ನ ಪ್ರಕಾರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಲ್ಲದೇ ಚುನಾವಣೆ ನಡೆಸಬಾರದು. ಕೂಡಲೇ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು ಎಂದು ಒತ್ತಾಯಿಸಿದರು.



ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರ 75ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಕೆಆರ್ ನಗರ ತಾಲೂಕಿನಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಶಾಸಕ ವಾಸು ಭಾಗವಹಿಸಿ, ವಿಶ್ವನಾಥ್‌ರಿಗೆ ಶುಭಾಶಯ ಕೋರಿದರು. ಶಾಸಕರಾದ ಎಚ್.ಪಿ.ಮಂಜುನಾಥ್, ಸಾರಾ ಮಹೇಶ್, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಪುರಸಭೆ ಅಧ್ಯಕ್ಷ ಪ್ರಕಾಶ್, ಮೆಹಬೂಬ್ ಖಾನ್, ಮೋಹನ್ ಇನ್ನಿತರರಿದ್ದಾರೆ.

ಮನುಷ್ಯ ನಿಸ್ವಾರ್ಥದಿಂದ ಬೇರೆಯವರಿಗಾಗಿ ಬದುಕಿದರೆ ದೇವರು ಒಳ್ಳೆಯದು ಮಾಡ್ತಾನೆ...

ಬದುಕಿನ ಸಾರ್ಥಕತೆ ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ಅಭಿಮತ



ಮೈಸೂರು, ಮೇ 11– ಮನುಷ್ಯ ಸ್ವಾರ್ಥ ಬಿಟ್ಟು, ನಿಸ್ವಾರ್ಥದಿಂದ ಬೇರೆಯವರಿಗೋಸ್ಕರ ಬದುಕಲು ಪ್ರಯತ್ನ ಮಾಡಿದಾಗ ಮಾತ್ರ ದೇವರು ಒಳ್ಳೆಯದನ್ನು ಮಾಡುತ್ತಾನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಹೊಸಕಾಮನಕೊಪ್ಪಲು ಗ್ರಾಮದಲ್ಲಿ 'ಶ್ರೀಲಕ್ಷ್ಮಿ ದೇವಮ್ಮ ಕಂತಮ್ಮ' ದೇವಸ್ಥಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇವರ ಮೇಲೆ ಮನುಷ್ಯರಿಗೆ ಅಪಾರ ನಂಬಿಕೆ ಇದೆ. ಕಷ್ಟ ಬಂದಾಗ ನಮಗೆ ಸಹಾಯ ಮಾಡುತ್ತಾನೆಂದು. ಆದ್ದರಿಂದ ದೇವರಿಗೆ ಶ್ರದ್ಧೆ, ಭಕ್ತಿ, ನಿಸ್ವಾರ್ಥದಿಂದ ಪೂಜೆ ಮಾಡಬೇಕು. ಮೊದಲು ಬೇರೆಯವರಿಗೆ ಒಳ್ಳೆಯದು ಮಾಡಿ, ನಂತರ ನನಗೆ ಒಳ್ಳೆಯದು ಮಾಡಲಿ ಎಂದು ಪೂಜಿಸಿದಾಗ ಮಾತ್ರ ದೇವರು ಒಳ್ಳೆಯದನ್ನು ಮಾಡುತ್ತಾನೆ. ದೇವರು ಸರ್ವಾಂತರ್ಯಾಮಿ ಎಲ್ಲಾ ಕಡೆ ಇದ್ದಾನೆ. ಎಲ್ಲರಲ್ಲೂ ಇದ್ದಾನೆ. ಭಕ್ತಪ್ರಹ್ಲಾದನಿಗೆ ಕಂಬದಲ್ಲಿ ದೇವರು ಪ್ರತ್ಯಕ್ಷವಾಗಲಿಲ್ಲವೇ? ಅದಕ್ಕೆ ಬಸವಣ್ಣನವರು ಹೇಳುತ್ತಾರೆ 'ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಳಸವಯ್ಯ'ಎಂದರು. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಸ್ವರ್ಗ–ನರಕ ಎಲ್ಲಾ ಈ ಭೂಮಿ ಮೇಲೆಯೇ ಇದೆ. ಒಳ್ಳೆಯದನ್ನು ಮಾಡಿದರೆ ಒಳ್ಳೆಯದಾಗುತ್ತದೆ, ಕೆಟ್ಟದನ್ನು ಮಾಡಿದರೆ ಕೆಟ್ಟದಾಗುತ್ತದೆ ಎಂದರು.

ಸಮಾಜದಲ್ಲಿ ಎರಡು ವರ್ಗದ ಜನರಿದ್ದಾರೆ. 1. ಅವರಿಗೋಸ್ಕರ, ತಮ್ಮ ಕುಟುಂಬಕೋಸ್ಕರ ಬದುಕುವವರು 2. ಬೇರೆಯವರಿಗೋಸ್ಕರ ಬದುಕುವವರು. ಬೇರೆಯವರಿಗೋಸ್ಕರ ಬದುಕುವವರು ಸತ್ತಮೇಲೂ ಬದುಕಿರುತ್ತಾರೆ. ಏಕೆಂದರೆ, ಜನ ಅವರನ್ನು ಸದಾ ನೆನಪಿಸಿಕೊಳ್ಳುತ್ತಾರೆ. 1983ರಿಂದಲೂ ಕ್ಷೇತ್ರದ ಜನರಿಗೆ ನಾನು ಪರಿಚಯವಿಲ್ಲದಿದ್ದರೂ 5 ಬಾರಿ ಗೆಲ್ಲಿಸಿ ಎಂ.ಎಲ್.ಎ ಮಾಡಿ. ರಾಜಕೀಯ ಶಕ್ತಿ ಕೊಟ್ಟಿದ್ದರಿಂದ ನಾನು ಮುಖ್ಯಮಂತ್ರಿಯಾಗಲೂ ಸಾಧ್ಯವಾಯಿತು. ಆದ್ದರಿಂದ ಚಾಮುಂಡೇಶ್ವರಿ ಕ್ಷೇತ್ರದ ಜನರ ಪ್ರೀತಿಗೆ ಬೆಲೆಕಟ್ಟಲು ಸಾಧ್ಯವಿಲ್ಲ ಎಂದ ಅವರು, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಈ ದೇವಸ್ಥಾನಕ್ಕೆ ಗುದ್ದಲಿ ಪೂಜೆ ಮಾಡಿದ್ದೆ. ಮುಖ್ಯಮಂತ್ರಿಯಾಗಿ ಮತ್ತೆ ವಿರೋಧ ಪಕ್ಷದ ನಾಯಕನಾಗಿ ಉದ್ಘಾಟನೆ ಮಾಡಿದ್ದೇನೆ. ನಿಮ್ಮ ಋಣ ನನ್ನ ಮೇಲೆ ತುಂಬಾ ಇದೆ. ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದರು.

ಸಮಾರಂಭದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಳವಳ್ಳಿ ಶಿವಣ್ಣ, ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿ.ಪಂ. ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ, ಅರುಣ್ ಕುಮಾರ್, ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಶಿವಪ್ಪಕೋಟೆ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹಿನಕಲ್ ಹೊನ್ನಪ್ಪ, ಹುಯಿಲಾಳು ಗ್ರಾ.ಪಂ ಸದಸ್ಯ ಕುಮಾರ್, ಗ್ರಾ.ಪಂ. ಅಧ್ಯಕ್ಷ ನಾಗವಾಲ ನರೇಂದ್ರ, ಮಹೇಶ್ ಮುಖಂಡರಾದ ಬೆಳವಾಡಿ ಶಿವಮೂರ್ತಿ, ಜೆ.ಜೆ. ಆನಂದ, ಹಿನಕಲ್ ಶ್ರೀನಿವಾಸ್, ಚಂದ್ರಶೇಖರ್, ಸೀಗಳ್ಳಿ ಕುಮಾರ್, ಹುಯಿಲಾಳು ರಾಘವೇಂದ್ರ ನಾಡನಹಳ್ಳಿ ರವಿ, ಪಿರಿಯಾಪಟ್ಟಣ ನಾಗೇಂದ್ರ ಆನಂದೂರು ರಾಮೇಗೌಡ, ಶ್ರೀಕಂಠೇಗೌಡ, ಸ್ವಾಮಿ, ರಘು, ನಾಗರಾಜು, ಮಂಜುನಾಥ್, ರವಿಚಂದ್ರ, ಮಹೇಶ್, ತಾ.ಪಂ. ಮಾಜಿ ಸದಸ್ಯ ಮಹಾದೇವ, ರಾಮು ಹಾಜರಿದ್ದರು.

ಬೆಳವಾಡಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ

ನಾಳೆಯಿಂದ 4,372 ದಿನಗಳ ನಿತ್ಯ ಮಹಾಯಜ್ಞ

ಮೈಸೂರು, ಮೇ 11(ಆರ್‌ಕೆಬಿ)– ಶ್ರೀರಂಗಪಟ್ಟಣ ತಾಲೂಕು ಬೆಳವಾಡಿಯಲ್ಲಿನ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ 13ರಿಂದ ಸುಮಾರು 4,372 ದಿನಗಳ ಕಾಲ ದೇಶ ಹಾಗೂ ಜಗತ್ತಿನ ಎಲ್ಲ ಜನರ ಸುಖ, ನೆಮ್ಮದಿಗೆ ಪ್ರಾರ್ಥಿಸಿ ನಿತ್ಯ ಮಹಾಯಜ್ಞ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಸೇವಾ ಟ್ರಸ್ಟ್ ಅಧ್ಯಕ್ಷ ಲಕ್ಷ್ಮಿನಾರಾಯಣ್ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಷ್ಟು ದೀರ್ಘ ಕಾಲದ ಯಜ್ಞವನ್ನು ಇದುವರೆಗೆ ಯಾರೂ ಆಯೋಜಿಸಿರುವ ದಾಖಲೆಯಿಲ್ಲ. ಹೀಗಾಗಿ ಇದೇ ಮೊದಲಾಗಿದೆ. ಮಹಾಯಜ್ಞವನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಉದ್ಘಾಟಿಸಲಿದ್ದಾರೆ ಎಂದರು.

ಬಳಿಕ ದೇಶದ ಎಲ್ಲ ಪಂಗಡಗಳಿಗೆ ಸೇರಿದ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಮಠಾಧಿಪತಿಗಳು ಸಹ ಆಗಮಿಸಿ, ಯಜ್ಞದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ತಮ್ಮ ಸಮಿತಿ ವತಿಯಿಂದ ಬೆಳಗೊಳದಲ್ಲಿನ ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವುದರೊಡನೆ ಇನ್ನಿತರ ಸಮಾಜ ಸೇವಾ ಕಾರ್ಯಕ್ರಮ ಸಹ ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿ.ಎಸ್. ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

ಪದವೀಧರ ಕ್ಷೇತ್ರ: ಮೈ.ವಿ.ರವಿಶಂಕರ್ ಪರ ಶಾಸಕ ರಾಮದಾಸ್ ಮತಯಾಚನೆ



ಮೈಸೂರು, ಮೇ 11(ಆರ್‌ಕೆಬಿ)–ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಬುಧವಾರ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಶಿಕ್ಷಕರಲ್ಲಿ ಮತಯಾಚಿಸಿದರು. ಬಿಜೆಪಿ ಅಭ್ಯರ್ಥಿ ಪರವಾಗಿ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು. ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಸಿಕೊಳ್ಳದೇ ಇರುವವರು ನೋಂದಣಿ ಮಾಡಿಸಿಕೊಳ್ಳುವಂತೆಯೂ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೃಷ್ಣರಾಜ ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ಕ್ಷೇತ್ರದ ಪದವೀಧರ ಚುನಾವಣಾ ಸಂಚಾಲಕ ಜೆ.ರವಿ, ಸಹ ಸಂಚಾಲಕ ನಾಗಶಂಕರ್, ವಿನಯ್ ಪಾಂಚಜನ್ಯ ಉಪಸ್ಥಿತರಿದ್ದರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಲ್ಲಿ ಮೇ 14ರಂದು ರಾಷ್ಟ್ರೀಯ ಸಮ್ಮೇಳನ

ಮೈಸೂರು, ಮೇ 11(ಆರ್‌ಕೆಬಿ)– ವಿದ್ಯಾವರ್ಧಕ ಸಂಘದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮೇ 14 ರಂದು ಕಾಲೇಜಿನಲ್ಲಿ ಮೈಸೂರು ವಿವಿ ಯುಜಿಸಿ ಕೇಂದ್ರದ ಸಹಯೋಗದಲ್ಲಿ 'ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಡಿಜಿಟಲ್ ಪ್ರವೃತ್ತಿಗಳು ಮತ್ತು ತಂತ್ರಜ್ಞಾನ' ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಎಸ್.ಮರೀಗೌಡ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ಇಂದಿನ ದಿನಗಳಲ್ಲಿ ತಂತ್ರಜ್ಞಾನ ಬೆಳವಣಿಗೆ ಕಾರಣದಿಂದಾಗಿ ನಾವು ನಡೆಸುವ ಸಂವಹನ ವಿಧಾನ, ವ್ಯಾಪಾರ, ಶಾಪಿಂಗ್, ವಾಸಿಸುವ ಮತ್ತು ಕೆಲಸ ಮಾಡುವ ವಿಧಾನ ಬದಲಾಗಿದೆ.

ಡಿಜಿಟಲೀಕರಣದ ವೇಗ ಆಶ್ಚರ್ಯವುಂಟು ಮಾಡುತ್ತಿದೆ. ಅಂತರ್ಜಾಲದ ಮೇಲಿನ ಅವಲಂಬನೆ ಹೆಚ್ಚುತ್ತಿದೆ. ಹೀಗಾಗಿ ಕಾರ್ಯಾಚರಣೆ ವೆಚ್ಚ ಕಡಿಮೆ ಮಾಡುವುದು ಹೇಗೆ, ಗ್ರಾಹಕ ಸೇವೆಯ ಸುಧಾರಣೆ ಮೊದಲಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಅಂದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು ಇನ್ನಿತರರು ಭಾಗವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಸಿದ್ದರಾಜು, ಡಾ.ಜಿ.ಎಂ.ರಾಜೇಶ್ವರಿ, ಎಸ್.ಸಿದ್ದರಾಜು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.05.2022 ಗುರುವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022

ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ

ತಿಥಿ: ಏಕಾದಶಿ, ನಕ್ಷತ್ರ: ಉಫ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನೆ, ನಿತ್ಯಹೋಮ, ಅಷ್ಟಲಕ್ಷ್ಮಿ ಹೋಮ, ಡೋಲೋತ್ಸವ, ಸಂಜೆ 6ಕ್ಕೆ ರಾಮತಾರಕ ಹೋಮ, ಪಂಚಮುಖಿ ಹನುಮಾನ್ ಮಂತ್ರಹೋಮ, ಹನುಮಂತೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಶ್ರೀ ಶೃಂಗೇರಿ ಜಗದ್ಗುರು ಸ್ವಾಗತ ಸಮಿತಿ, ಅಭಿನವ ಶಂಕರಾಲಯ :** ಪರಮಪೂಜ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರ ವಿಜಯಯಾತ್ರೆ, ಬೆಳಿಗ್ಗೆ 7.30ಕ್ಕೆ ಮಹಾಪವಿತ್ರ ಇಷ್ಟಿ ಶ್ರೌತಯಾಗ ಶ್ರೀ ಶ್ರೀ ಜಗದ್ಗುರುಗಳವರಿಂದ ಶ್ರೀ ಶಾರದಾಂಬ ಅಮ್ಮನವರಿಗೆ, ರಾಜಗೋಪುರ, ವಿಮಾನ ಗೋಪುರಗಳ ಕುಂಭಾಭಿಷೇಕ, ಪೂರ್ಣಾಹುತಿ, ಶ್ರೀ ಶ್ರೀ ಜಗದ್ಗುರುಗಳವರ ದರ್ಶನ, ಭಕ್ತಾದಿಗಳಿಂದ ಪಾದಪೂಜೆ, ಭಿಕ್ಷಾವಂದನೆ. ಸ್ಥಳ: ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.

■ **ತಾರಾ ಪ್ರಕಾಶನ ಮತ್ತು ಕನ್ನಡ ಸಾಹಿತ್ಯ ಕೂಟ:** ಸಂಪಥ ಸಂಚಿಕೆ–1, ಸಂಶೋಧನಾ ನಿಯತಕಾಲಿಕ ಬಿಡುಗಡೆ ಕಾರ್ಯಕ್ರಮ, ಪ್ರಾಸ್ತಾವಿಕ ನುಡಿ: ವಿಮರ್ಶಕ ಡಾ.ವಾಸಯ್ಯ, ಉದ್ಘಾಟನೆ: ಕಾಲೇಜು ಶಿಕ್ಷಣ ಆಯುಕ್ತಾಲಯ ನಿರ್ದೇಶಕ ಡಾ. ಬಿ.ಎಸ್.ಅಪ್ಪಾಜಿಗೌಡ, ನಿಯತಕಾಲಿಕ ಬಿಡುಗಡೆ: ಸರ್ ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮಂಡ್ಯ ನಿರ್ದೇಶಕ ಡಾ.ವೆಂಕಟೇಶಮೂರ್ತಿ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಪ್ರೊ.ವೀರಭದ್ರಯ್ಯ, ಸ್ಥಳ: ನಮನ ಕಲಾ ಮಂಟಪ ಬೆಳಗ್ಗೆ 10.30ಕ್ಕೆ.

■ **ಸುಯೋಗ್ ಆಸ್ಪತ್ರೆ:** ಅಂತಾರಾಷ್ಟ್ರೀಯ ಶುಶ್ರೂಷಕ ದಿನಾಚರಣೆ, ಮುಖ್ಯ ಅತಿಥಿಗಳು: ಫಾರ್ಮಾಸ್ಯುಟಿಕಲ್ ಗ್ರೂಪ್ ಉಪಾಧ್ಯಕ್ಷ ಡಾ.ಸುನಿಲ್ ಚಿಪ್ಳುಂಕರ್, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ವಿಶೇಷ ಅತಿಥಿಗಳು: ಡಾ.ರಾಮೇಗೌಡ, ಡಾ.ಸುಧಾ ಯೋಗಣ್ಣ, ಡಾ.ರಾಜೇಂದ್ರಪ್ರಸಾದ್, ಡಾ.ಸೀಮಾ ಯೋಗಣ್ಣ, ಡಾ.ಸುಯೋಗ್ ಯೋಗಣ್ಣ, ಡಾ.ಯಶಿತಾರಾಜ್, ಸ್ಥಳ: ಸುಯೋಗ್ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ.

■ **ಹಸ್ತಶಿಲ್ಪಿ :** ಸಿಲ್ಕ್ ಇಂಡಿಯಾ–2022, ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10.30ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಎಜುಕೇಷನ್ ಸೆಂಟರ್ :** ಮಹಾಜನೋತ್ಸವ–2022, ಉದ್ಘಾಟನೆ : ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಅಧ್ಯಕ್ಷತೆ: ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ, ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಸ್ಥಳ: ಟೂರಿಸಂ ಸಭಾಂಗಣ, ಬೆಳಗ್ಗೆ 11ಕ್ಕೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪದವೀಧರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಬೆಟಸೂರ್‌ಮಠ, ಮುಖ್ಯ ಅತಿಥಿಗಳು: ಬೆಂಗಳೂರಿನ ಶೈಕ್ಷಣಿಕ ವಿಷಯ ಅಭಿವೃದ್ಧಿ ಮತ್ತು ಮೌಲ್ಯ ಗುಣಮಟ್ಟ ಮಾಪನ ಸಂಸ್ಥೆ ಮುಖ್ಯಸ್ಥ ಡಾ.ಕುಮಾರ್, ಜೆಎಸ್‌ಎಸ್ ಉನ್ನತ ಶಿಕ್ಷಣ–ಸಂಶೋಧನಾ ಅಕಾಡೆಮಿ ಸಮ ಕುಲಾಧಿಪತಿ ಡಾ. ಬಿ.ಸುರೇಶ್, ಕುಲಪತಿ ಡಾ.ಸುರಿಂಧರ್‌ಸಿಂಗ್, ಸ್ಥಳ: ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಆವರಣ, ಸಂಜೆ 4.30ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸಂಚಲನ ಮೈಸೂರು:** ಸಂಚಲನ ರಂಗೋತ್ಸವ, ಉಪಸ್ಥಿತರು: ಪ್ರಗತಿಪರ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ, ಕೇಂದ್ರ ಕಾರಾಗೃಹ ಮುಖ್ಯ ಅಧೀಕ್ಷಕಿ ದಿವ್ಯಾಶ್ರೀ, ಹಿರಿಯ ರಂಗ ನಿರ್ದೇಶಕ ಪ್ರಸಾದ್ ಕುಂದೂರು, ಸಂಚಲನದ ಅಧ್ಯಕ್ಷ ದೀಪಕ್ ಮೈಸೂರು, ನಿರಂತರ ರಂಗ ತಂಡದಿಂದ ಜಯರಾಮ್ ರಾಯಪುರ ಅವರ ವಾರಸುದಾರ ನಾಟಕ ಪ್ರದರ್ಶನ, ಸಂಗೀತ: ಬಿ.ಕೆ.ಕಿರಣ್, ನಿರ್ದೇಶನ: ಪ್ರಸಾದ್ ಕುಂದೂರು, ಬೆಳಕು: ಜೀವನ್‌ಕುಮಾರ್ ಹೆಗ್ಗೋಡು, ಸ್ಥಳ:ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ಅಂತಾರಾಷ್ಟ್ರೀಯ ಶುಶ್ರೂಷಕ ದಿನಾಚರಣೆ ಅಂಗವಾಗಿ ಮ್ಯಾರಥಾನ್, ಮುಖ್ಯ ಅತಿಥಿಗಳು: ಎಸ್ಪಿ ಆರ್.ಚೇತನ್, ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ, ಬೆಳಗ್ಗೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ದೀಪಿಕಾ ಪಾಂಡುರಂಗಿ, ಎಸ್.ಸಂಗೀತಾ, ಜಯಂತಿ ವಿ.ಭಟ್, ವ್ಯಾಖ್ಯಾನ– ಡಾ.ಸಿ.ನಾಗಣ್ಣ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಪ್ರೊ.ಆರ್.ವಿಶ್ವೇಶ್ವರನ್– ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರ ನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ–ಹೆಚ್.ಆರ್. ಲೀಲಾವತಿ, 3.00 ರಾಗಲಹರಿ–ರಾಗ ಚಂದ್ರಜ್ಯೋತಿ, ಪ್ರಸ್ತುತಿ– ಜಿ. ಪುಷ್ಪಲತಾ, 4.00 ಹಳ್ಳಿ ಹಾಡು–ಸಿದ್ದಮ್ಮ ಮತ್ತು ತಂಡ, 6.50 ಕೃಷಿರಂಗ –ಕಿಸಾನ್‌ವಾಣಿ, ದಾಳಿಂಬೆ ಕೃಷಿಗೆ ಇರುವ ಅವಕಾಶಗಳು ಕುರಿತು ಡಾ.ಜಿ. ಮಂಜುನಾಥ್ ಅವರೊಡನೆ ಸಂದರ್ಶನ, 7.45 ದುಡಿಯೋಣು ಬಾ–ಮೈಸೂರು ಜಿಲ್ಲಾ ಪಂಚಾಯತ್ ಪ್ರಾಯೋಜಿತ ಕಾರ್ಯಕ್ರಮ, ವಿಷಯ– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, 9.30 ಕನ್ನಡ ಭಾರತಿ–ಗೀತ ರೂಪಕ 'ಯಕ್ಷ ಭಾವಗೀತೆ', ರಚನೆ ಮತ್ತು ಪ್ರಸ್ತುತಿ– ಅನಂತ ಪದ್ಮನಾಭ ಫಾಟಕ್, 10.00 ನಾಟಕ "ಬಾಳೆ ಹೊನ್ನೂರಿನ ಬ್ರಹ್ಮ ರಾಕ್ಷಸ", ರಚನೆ– ಅಪರಂಜಿ ಶಿವು, ನಿರ್ದೇಶನ– ಉಮೇಶ್ ಎಸ್.ಎಸ್.

ಆನ್‌ಲೈನ್ ಸಂಪಾದನೆ ಆಸೆಗೆ ಬಿದ್ದು 14.96 ಲಕ್ಷ ಕಳೆದುಕೊಂಡ ನರ್ಸಮ್ಮ!

ಗುಂಡ್ಲುಪೇಟೆ, ಮೇ 11– 'ಗೃಹಿಣಿಯರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಮನೆಯಲ್ಲೇ ಇದ್ದು, ಕೆಲಸ ಮಾಡಿ ಸಾವಿರಾರು ರೂ. ಸಂಪಾದನೆ ಮಾಡಿ' ಎಂಬ ಜಾಹೀರಾತುಗಳನ್ನು ಅಲ್ಲಲ್ಲಿ ಕಾಣಬಹುದಾಗಿದೆ. ತನ್ನ ಮೊಬೈಲ್‌ಗೆ ಇಂತಹುದ್ದೇ ಮೆಸೇಜ್‌ವೊಂದು ಬಂದಿದ್ದನ್ನು ನಂಬಿ ಸರ್ಕಾರಿ ಆಸ್ಪತ್ರೆಯ ಸ್ಟಾಫ್ ನರ್ಸ್‌ವೊಬ್ಬರು 14.96 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ವರದಿಯಾಗಿದೆ.

ಹನೂರು ತಾಲೂಕು ಕೌದಳ್ಳಿ ನಿವಾಸಿಯಾಗಿದ್ದು, ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿರುವ ಶ್ರೀಮತಿ ಲಲಿತಾ ಹಣ ಕಳೆದುಕೊಂಡವರಾಗಿದ್ದು, ವಂಚಕರು ಹೇಳಿದಂತೆ ಅವರ ಅಕೌಂಟ್‌ಗೆ ಹಣ ಕಳುಹಿಸುತ್ತಿದ್ದ ಇವರು, ಒಂದು ಹಂತದಲ್ಲಿ ಹಣ ಕಳುಹಿಸುವುದನ್ನು ಸ್ಥಗಿತಗೊಳಿಸಿದಾಗ ಬ್ಲಾಕ್‌ಮೇಲ್‌ಗೂ ಒಳಗಾಗಿದ್ದಾರೆ.

ವಿವರ: ಲಲಿತ ಅವರ ಮೊಬೈಲ್‌ಗೆ 2021ರ ನವೆಂಬರ್ 2ರಂದು 'ಮನೆಯಿಂದಲೇ ಕೆಲಸ ಮಾಡಿ, ತಿಂಗಳಿಗೆ 20 ಸಾವಿರ ರೂ.ಗಳಷ್ಟು ಗಳಿಸಬಹುದು' ಎಂಬ ಮೆಸೇಜ್‌ವೊಂದು ಬಂದಿದ್ದು, ಅದನ್ನು ನಂಬಿದ ಅವರು, ಅದೇ ನಂಬರ್‌ಗೆ ವಾಟ್ಸಾಪ್ ಮೂಲಕ ಪ್ರತಿಕ್ರಿಯಿಸಿದ್ದಾರೆ. ನಂತರ ತನ್ನನ್ನು ಫ್ಲಿಪ್ ಕಾರ್ಟ್ ಫ್ಲಾಟ್‌ಫಾರಂನ ಅಸಿಸ್ಟೆಂಟ್ ಯಾಶಿಕಾ ಎಂಬ ಹೆಸರಿನಲ್ಲಿ ಪರಿಚಯಿಸಿಕೊಂಡ ಯುವತಿಯೋರ್ವಳು ಲಲಿತಾ ಅವರ ಮೊಬೈಲ್‌ಗೆ ಕರೆ ಮಾಡಿ, ಮನೆಯಿಂದಲೇ ಕೆಲಸ ಮಾಡಿದಲ್ಲಿ ದಿನಕ್ಕೆ 500 ರಿಂದ 5 ಸಾವಿರದವರೆಗೆ ಸಂಪಾದನೆ ಮಾಡಬಹುದು. ಇಂಟರ್ ನ್ಯಾಷನಲ್ ಆನ್‌ಲೈನ್ ಶಾಪಿಂಗ್ ಫ್ಲಾಟ್‌ಫಾರಂ ಮರ್ಚೆಂಟ್ಸ್‌ಗಳಿಂದ ವಸ್ತುಗಳನ್ನು ಖರೀದಿಸುವ ಮೂಲಕ ಕಮಿಷನ್ ರೂಪದಲ್ಲಿ ಹಣ ಗಳಿಸಬಹುದು ಎಂದು ನಂಬಿಸಿದ್ದಾಳೆ.


ಆಕೆ ಹೇಳಿದಂತೆ ಲಲಿತಾ ಅವರು ಸದರಿ ಫ್ಲಾಟ್‌ಫಾರಂನಲ್ಲಿ ರಿಜಿಸ್ಟರ್ ಮಾಡಿಕೊಂಡು ಅವರ ಎಲ್ಲಾ ವಿವರಗಳನ್ನು ರವಾನಿಸಿದ್ದಾರೆ. ಅವರ ಮೊಬೈಲ್‌ಗೆ ಆನ್‌ಲೈನ್‌ನಲ್ಲಿ ವಸ್ತುಗಳನ್ನು ಖರೀದಿ ಮಾಡುವ ಗೇಮ್‌ಗಳನ್ನು ಕಳುಹಿಸಿ, ಅದಕ್ಕೆ ಇಂತಿಷ್ಟು ಹಣ ಸಂದಾಯ ಮಾಡುವಂತೆ ಹೇಳಲಾಗುತ್ತಿತ್ತು. ಇವರು ಅದೇ ರೀತಿ ಹಣ ಸಂದಾಯ ಮಾಡಿದಾಗ ಲಲಿತಾ ಅವರು ಗಳಿಸಿರುವ ಕಮಿಷನ್ ಎಂದು Suyoglalitha ಎಂಬ ಅವರ ಹೆಸರಿನ ಅಕೌಂಟ್‌ಗೆ ಹಣ ಜಮೆಯಾದಂತೆ ತೋರಿಸಲಾಗುತ್ತಿತ್ತು. ಒಂದು ಹಂತದಲ್ಲಿ ಅವರು ತಮಗೆ ಹಣ ವಾಪಸ್ ನೀಡುವಂತೆ ಕೇಳಿದಾಗ ಅವರು ಹಣವನ್ನು ನೀಡಲಿಲ್ಲ. ಹೀಗಾಗಿ ಲಲಿತಾ ವಾಟ್ಸಾಪ್ ಮಾಡುವುದನ್ನು ನಿಲ್ಲಿಸಿದ್ದಾರೆ. ಆಗ ರಾಶಿನಿ ಎಂಬ ಹೆಸರಿನಲ್ಲಿ ಕರೆ ಮಾಡಿದ ಯುವತಿಯೋರ್ವಳು 'ವಾಟ್ಸಾಪ್ ಮೆಸೇಜ್ ಮೂಲಕ ನಮ್ಮ ಷರತ್ತುಗಳನ್ನು ನೀವು ಒಪ್ಪಿದ್ದು, ಈಗ ವ್ಯವಹಾರ ನಿಲ್ಲಿಸಿ ಷರತ್ತುಗಳನ್ನು ಉಲ್ಲಂಘಿಸಿದರೆ ಕೇಸ್ ಹಾಕುತ್ತೇವೆ' ಎಂದು ಬ್ಲಾಕ್‌ಮೇಲ್ ಮಾಡಿದ್ದಾಳೆ.

ಅದಕ್ಕೆ ಹೆದರಿದ ಲಲಿತಾ ಮತ್ತೆ ಅವರು ಹೇಳಿದ ಅಕೌಂಟ್‌ಗಳಿಗೆ ಗೂಗಲ್ ಪೇ, ಪೇಟಿಎಂ ಮತ್ತು ಯೆನೋ ಆ್ಯಪ್‌ಗಳಿಂದ ಹಣ ಕಳುಹಿಸಿದ್ದಾರೆ. ಹೀಗೆ ಈವರೆಗೆ ಒಟ್ಟಾರೆ 14,96,283 ರೂ.ಗಳನ್ನು ಸಂದಾಯ ಮಾಡಿದ್ದಾರೆ. ನಂತರ ತನ್ನ ಹಣ ಮತ್ತು ಕಮಿಷನ್ ನೀಡುವಂತೆ ಕೇಳಿದಾಗ ಇವರ ಸಂಪರ್ಕಕ್ಕೆ ಬಂದಿದ್ದ ವ್ಯಕ್ತಿಗಳು ಹಣ ನೀಡಲು ನಿರಾಕರಿಸಿದ್ದಾರೆ. ತಾವು ಮೋಸ ಹೋಗಿರುವುದು ಮನವರಿಕೆಯಾದ ನಂತರ ಲಲಿತಾ ಅವರು ಮೇ 5ರಂದು ಚಾಮರಾಜನಗರ ಸೆನ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮೈಸೂರಲ್ಲಿ ಧೋ ಸುರಿದ ಮಳೆ

ಕೆರೆಯಂತಾದ ರಸ್ತೆಗಳು, ವಾಹನ ಸವಾರರ ಪರದಾಟ

● ಧರೆಗುರುಳಿದ ಮರದ ರೆಂಬೆಗಳು ● ತಂಪಾದ ವಾತಾವರಣ



ಮೈಸೂರು,ಮೇ11(ಜಿಎ)– ಕಳೆದ ಎರಡು ದಿನಗಳಿಂದ ಬಿಡುವು ನೀಡಿದ್ದ ಮಳೆ ಬುಧವಾರ ರಾತ್ರಿ ಮೈಸೂರಿನಲ್ಲಿ ಧಾರಾಕಾರವಾಗಿ ಸುರಿಯಿತು.

ಸಂಜೆ ತುಂತುರು ಹನಿಗಳೊಂದಿಗೆ ಶುರುವಾದ ಮಳೆ ಕ್ರಮೇಣ ಜೋರಾಗುತ್ತ ರಾತ್ರಿಯಿಡಿ, ನಿರಂತರವಾಗಿ ಸುರಿಯಿತು. ಇದರಿಂದ ಟಿ.ಕೆ.ಲೇಔಟ್ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಮರಗಳು, ಮರದ ಕೊಂಬೆಗಳು ಮುರಿದು ಬಿದ್ದಿವೆ. ರಸ್ತೆಗಳು ಕೆರೆಯಂತಾಗಿದ್ದು, ವಾಹನ ಸವಾರರು ಪರಡುವಂತಾಯಿತು.

ಕಳೆದ ಎರಡು ದಿನಗಳಿಂದ ಮೋಡ ಮುಸುಕಿದ ವಾತಾವರಣದಿಂದ ಕೂಡಿದ್ದ ಮೈಸೂರಿನಲ್ಲಿ ಮಳೆಸುರಿದು ತಂಪೆರೆಯಿತು.

ಕುವೆಂಪುನಗರ, ಜಯನಗರ, ವಿದ್ಯಾರಣ್ಯಪುರಂ, ಜೆಪಿ ನಗರ, ಬನ್ನಿಮಂಟಪ, ಒಂಟಿಕೊಪ್ಪಲು, ಅಗ್ರಹಾರ, ವಿಜಯನಗರ, ಬೋಗಾದಿ, ದಟ್ಟಗಳ್ಳಿ ಸೇರಿದಂತೆ ವಿವಿಧೆಡೆ ತಡರಾತ್ರಿಯವರೆಗೂ ಮಳೆ ಸುರಿಯಿತು. ನಗರದ ಟಿ.ಕೆ.ಲೇಔಟ್ ಬಳಿಯ ಪಡುವಣ ರಸ್ತೆಯಲ್ಲಿ ಮರ ಮುರಿದು ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪಾಲಿಕೆ ಅಭಯ–3ರ ಸಿಬ್ಬಂದಿ ಮರವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

10ನೇ ವರ್ಷದ ಸವಿನೆನಪು



ಶ್ರೀ ನಾಗರಾಜು

ಅವರ ನೆನಪಿನಲ್ಲಿ ಶ್ರೀಮತಿ ನಾಗರತ್ನ, ಮಕ್ಕಳು ಹಾಗೂ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಪತ್ರಿಕೆ



ಹೆಚ್.ಸಿ.ಕೃಷ್ಣಶೆಟ್ಟಿ

ಜನನ: 08.07.1944
ನಿಧನ: 03.05.2022

ಇವರು ದಿನಾಂಕ 03.05.2022 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 13.05.2022 ಶುಕ್ರವಾರ ಮೃತರ ಸ್ವಗೃಹ ಹೆಚ್.ಡಿ.ಕೋಟೆ ತಾ॥, ಹೆಬ್ಬಲಗುಪ್ಪೆ ಗ್ರಾಮದ, ಹಾಲಿ ಹ್ಯಾಂಡ್‌ಪೋಸ್ಟ್ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು:
ಶ್ರೀಮತಿ ಕೃಷ್ಣಮ್ಮ ಮತ್ತು ಮಕ್ಕಳು , ಅಳಿಯಂದಿರು ಹಾಗೂ ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ನನ್ನ, ಕಕ್ಷಿದಾರರಾದ ಶ್ರೀ.ಗೀತಾ ಗೋಪಾಲ್ರರವರು ಗೌರವಾನ್ವಿತ ಮೈಸೂರಿನ ಮೂರನೇಯ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಆರ್.ಎ. ಸಂಖ್ಯೆ ನಂ.137/2019ರ ಪ್ರಕರಣವನ್ನು ನಿಂಗಮ್ಮ ಮತ್ತು ಇತರರು ವಿರುದ್ಧ ದಾಖಲಿಸಿ ಹಾಗೂ ಒಂದನೇಯ ಎದುರುದಾರರಾದ ಶ್ರೀ. ಬಸವೇಗೌಡನ ಹೆಂಡತಿಯಾದ ಶ್ರೀಮತಿ ನಿಂಗಮ್ಮ ವಾಸ ಕಲಿಯನಹುಂಡಿ ಗ್ರಾಮ, ಹಂಪಾಪುರ ಹೋಬಳಿ, ಎಚ್.ಡಿ.ಕೋಟೆ ತಾಲೂಕು ಮೈಸೂರು ಇವರು ಮೃತರಾಗಿದ್ದು, ಅವರ ವಾರಸುದಾರರು ಯಾರಾದರೂ ಇದ್ದರೆ ಅಥವಾ ಅವರಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಿತಾಸಕ್ತಿ ಮತ್ತು ತಕರಾರು ಇದ್ದಲ್ಲಿ ಸದರಿ ಮೇಲ್ಕಂಡ ನ್ಯಾಯಾಲಯದಲ್ಲಿ ದಿನಾಂಕ 25–05–2022 ರಂದು ಬೆಳಗ್ಗೆ 11.00 ಗಂಟೆಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತಿನ ವಿವರ : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬಲ್ಲಹಳ್ಳಿ ಗ್ರಾಮಕ್ಕೆ ಸೇರಿದ 1) ಸರ್ವೆ ನಂ.1/1 ರಲ್ಲಿರುವ 1 ಎಕರೆ 38 ಗಂಟೆ, 2) ಸರ್ವೆ ನಂ.1/3 ರಲ್ಲಿರುವ 39 ಗಂಟೆ, 3) ಸರ್ವೆ ನಂ.12 ರಲ್ಲಿರುವ 1 ಎಕರೆ, 4) ಸರ್ವೆ ನಂ.36/1 ರಲ್ಲಿರುವ 1 ಎಕರೆ, 5) ಸರ್ವೆನಂ.48/7ಎ ರಲ್ಲಿರುವ 1 ಎಕರೆ 14 ಗಂಟೆ, 6)ಸರ್ವೆ ನಂ.49/1 ರಲ್ಲಿರುವ 1 ಎಕರೆ 03 ಗಂಟೆ,7) ಸರ್ವೆ ನಂ.49/2 ರಲ್ಲಿರುವ 2 ಎಕರೆ 22 ಗಂಟೆ, 8) ಸರ್ವೆ ನಂ.49/3 ರಲ್ಲಿರುವ 1 ಎಕರೆ 13 ಗಂಟೆ

ಸಹಿ/– ಎಂ.ಎಲ್.ಶಶಿಭೂಷಣ್, ವಕೀಲರು
ಓಂ ಶ್ರೀ ಸಾಯಿ ಅಡ್ವಕೇಟ್ ಮತ್ತು ಅಸೋಸಿಯೇಟ್ಸ್
#2776, 1ನೇ ಮಹಡಿ, ರೈಲ್ವೆ ಗೇಟ್ ರಸ್ತೆ,
ಕೆ.ಜಿ.ಕೊಪ್ಪಲ್, ಮೈಸೂರು–570009
ಮೊ: 9980630714, 8217660796

ರೈಲ್ವೆಯ ಮಹಿಳಾ ಕಲ್ಯಾಣ ಸಂಸ್ಥೆಯಿಂದ ಕಾರ್ಮಿಕ ದಿನಾಚರಣೆ

ಭಾರತೀಯ ರೈಲ್ವೆಗೆ ಸಿಬ್ಬಂದಿ ದೊಡ್ಡ ಆಸ್ತಿ



ಮೈಸೂರು,ಮೇ 11(ಪಿಎಂ)– ಭಾರತೀಯ ರೈಲ್ವೆಗೆ ಸಿಬ್ಬಂದಿ ಅತ್ಯಂತ ದೊಡ್ಡ ಆಸ್ತಿ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಮಹಿಳಾ ಕಲ್ಯಾಣ ಸಂಸ್ಥೆಯ ಅಧ್ಯಕ್ಷೆ ಪೂಜಾ ಅಗರ್ವಾಲ್ ಅಭಿಪ್ರಾಯಪಟ್ಟರು.

ಸಂಸ್ಥೆ ಅಧ್ಯಕ್ಷೆ ಪೂಜಾ ಅಗರ್ವಾಲ್ ಅಭಿಮತ

ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ವ್ಯವಸ್ಥಾಪಕರ ಕಚೇರಿಯ ಸಭಾಗೃಹದ ಆವರಣದಲ್ಲಿ ಸಂಸ್ಥೆ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆಯಲ್ಲಿ 25 ವರ್ಷ ಸೇವೆ ಪೂರ್ಣಗೊಳಿಸಿದ ಹಾಗೂ ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಪುರುಷರು ಮತ್ತು ಮಹಿಳೆಯರು ಸೇರಿದಂತೆ 35 ರೈಲ್ವೆ ಸಿಬ್ಬಂದಿಯನ್ನು ಸನ್ಮಾನಿಸಿ ಅವರು ಮಾತನಾಡಿದರು. ಸಿಬ್ಬಂದಿ ರೈಲ್ವೆಯ ಅತ್ಯಂತ ದೊಡ್ಡ ಆಸ್ತಿ. ರೈಲ್ವೆಯ ಅಭಿವೃದ್ಧಿಗೆ ಅವರು ಸಲ್ಲಿಸುತ್ತಿರುವ ಗಮನಾರ್ಹ ಸೇವೆ ಪ್ರಶಂಸನೀಯ ಎಂದು ಧನ್ಯವಾದ ಅರ್ಪಿಸಿದ ಅವರು, ತಮ್ಮ ಉತ್ತಮ ಕೆಲಸ ಹೀಗೆ ಮುಂದುವರೆಯಲಿ ಎಂದು ಪ್ರೋತ್ಸಾಹದ ಮಾತುಗಳನ್ನಾಡಿದರು. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕರಾದ ಎ.ದೇವಸಹಾಯಂ, ಬುಡತಿ ಶ್ರೀನಿವಾಸುಲು, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿಗಳಾದ ಪ್ರಶಾಂತ್ ಮಾಸ್ತಿಹೊಳಿ ಸೇರಿದಂತೆ ಸಂಸ್ಥೆಯ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಮೇ 16ರಿಂದ ರಾಜ್ಯ ಮಿನಿ ಒಲಿಂಪಿಕ್ಸ್

ಬೆಂಗಳೂರು: ಮೇ 16ರಿಂದ 22ರವರೆಗೆ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ರಾಜ್ಯ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ ನಡೆಯಲಿದೆ. ಮೇ 16ರಂದು ಸಂಜೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಕ್ರೀಡಾಕೂಟಕ್ಕೆ ಸರ್ಕಾರದಿಂದ ಎರಡೂವರೆ ಕೋಟಿ ರೂ. ಬಿಡುಗಡೆಯಾಗಿದೆ. 21 ಕ್ರೀಡಾ ಸ್ಪರ್ಧೆಗಳು ಇರಲಿವೆ. ಮಿನಿ ಒಲಿಂಪಿಕ್ ಕ್ರೀಡಾಕೂಟ ಆಯೋಜನೆಯಾಗುತ್ತಿರುವುದು ಇದು 2ನೇ ಬಾರಿ ಎಂದು ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದರಾಜ್ ಹೇಳಿದರು. ಅಥ್ಲೆಟಿಕ್ಸ್, ಅರ್ಚರಿ, ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಪುಟ್ಬಾಲ್, ಜಿಮ್ನಾಸ್ಟಿಕ್ಸ್, ಹ್ಯಾಂಡ್ ಬಾಲ್, ಹಾಕಿ, ಜೂಡೋ, ಖೋಖೋ, ಲಾನ್ ಟೆನ್ನಿಸ್, ನೆಟ್ ಬಾಲ್, ರೈಫಲ್ ಶೂಟಿಂಗ್, ಸ್ವಿಮ್ಮಿಂಗ್, ಟೇಬಲ್ ಟೆನ್ನಿಸ್, ಟೇಕ್ವಾಂಡೋ, ವೇಟ್ ಲಿಫ್ಟಿಂಗ್ ಸ್ಪರ್ಧೆಗಳು ಇರಲಿವೆ.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ
ದೂ.ಸಂ.: 08223–262824 ಇ–ಮೇಲ್: eokrntp@gmail.com
ಸಂಖ್ಯೆ:ತಾಪಂಕೃ/ಎಂ–ನರೇಗಾ/ವಾಹನ ಟೆಂಡರ್/ಅ3/2022–23/150
ದಿನಾಂಕ:11.05.2022

ಟೆಂಡರ್ ಪ್ರಕಟಣೆ

ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ ಇಲ್ಲಿನ ಸಹಾಯಕ ನಿರ್ದೇಶಕರು (ಗ್ರಾ.ಉ), ರವರು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಸರ್ಕಾರಿ ಅಧಿಕೃತ ಕೆಲಸ ಕಾರ್ಯಗಳಿಗಾಗಿ 2022–23ನೇ ಸಾಲಿನ ದಿ: 01.06.2022 ರಿಂದ ದಿ: 31.03.2023ರ ಮಾಹೆಯವರೆಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಸ್ವಿಫ್ಟ್ ಡಿಸೈರ್/ಟಯೋಟಾ ಇಟಿಎಸ್ ವಾಹನವನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಅರ್ಹ ಟ್ರಾವೆಲ್ ಏಜೆನ್ಸಿ/ಸಂಸ್ಥೆಯವರು ದಿ: 12.05.2022 ರಿಂದ ದಿ: 20.05.2022ರ ಸಂಜೆ 4.00 ಗಂಟೆಯೊಳಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕಛೇರಿ, ಕೆ.ಆರ್.ನಗರ ಇಲ್ಲಿ ಟೆಂಡರ್ ಅರ್ಜಿಯನ್ನು ಪಡೆದುಕೊಂಡು ಅಗತ್ಯ ದಾಖಲಾತಿಗಳೊಡನೆ ಸಲ್ಲಿಸಬಹುದಾಗಿರುತ್ತದೆ. ಬಾಡಿಗೆ ವಾಹನವನ್ನು ಒದಗಿಸುವ ಸಂಸ್ಥೆಗಳು ಪಾಲಿಸಬೇಕಾಗಿ ರುವ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ.

DIPR/DDMYS/MCA/87/2022-23

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಟೀಚರ್ : (ಪರೀಕ್ಷೆ ನಡೆಯುತ್ತಿತ್ತು. ಎಲ್ಲರೂ ಬರೆಯುತ್ತಿದ್ದರು. ಓರ್ವ ಮಾತ್ರ ಕುಡೀತಾ ಇದ್ದಾಗ) "ನೀನ್ಯಾಕೋ ಇಲ್ಲಿ ಕುಡೀತಾ ಕುಂತಿದ್ದೀಯಾ?"

ವಿದ್ಯಾರ್ಥಿ : "ನೀವೇ ಹೇಳಿದ್ರಲ್ಲಾ ಟೀಚರ್. ಪರೀಕ್ಷೆಲಿ ಎಲ್ರೂ ನೈಂಟಿ ತಗೋಬೇಕು ಅಂತಾ!"

ಮೈಸೂರು ಮಿತ್ರ

ಗುರುವಾರ, 12 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ವಿದ್ಯೆಯ ಮುಖ್ಯ ಗುರಿಯೆಂದರೆ ಇತರರೊಡನೆ ಕೂಡಿ ಬಾಳುವ ಕಲೆಯನ್ನು ಕಲಿಸುವುದು. –ಡಾ. ಸರ್ವಪಲ್ಲಿ ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಣ ಇದ್ದಾಗ ಹಬ್ಬ ಮಾಡು

ನಿಮ್ಮ ಪತ್ರಗಳು

ವಿಜಯನಗರ ರೈಲ್ವೆ ಬಡಾವಣೆಯಲ್ಲಿ ವಾಹನ ಸವಾರರ ಉಪಟಳ

ಮಾನ್ಯರೆ,

ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆ (ಸೂರ್ಯ ಬೇಕರಿ) ರಸ್ತೆ ಸಂಚಾರ ಅಪರಾಧಗಳ ಹಾಟ್‌ಸ್ಪಾಟ್ ಆಗಿದೆ. ಪ್ರತಿದಿನ ಈ ಬಡಾವಣೆಯಲ್ಲಿ ಹದಿಹರೆಯದವರು ತಮ್ಮ ಜೀವವನ್ನು ಲೆಕ್ಕಿಸದೆ, ಅತಿಯಾದ ವೇಗದಿಂದ ವಾಹನ ಚಾಲನೆ ಮಾಡುವುದುಂಟು. ಇದರಿಂದ ತಮಗೆ ಅಪಾಯ ಉಂಟಾಗುವುದು ಮಾತ್ರವಲ್ಲದೆ, ಇತರರ ಜೀವಕ್ಕೂ ಕಂಟಕವನ್ನುಂಟು ಮಾಡುತ್ತಿದ್ದಾರೆ.

ಇತ್ತೀಚೆಗೆ ಬಡಾವಣೆಯ ಹಿರಿಯ ನಾಗರಿಕರೊಬ್ಬರಿಗೆ ಸುಮಾರು 11 ಗಂಟೆ ಸಮಯದಲ್ಲಿ ಅಪರಿಚಿತ ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ತೀವ್ರತರವಾದ ಗಾಯಗಳಿಂದಾಗಿ ಆಸ್ಪತ್ರೆಗೆ ದಾಖಲಾಗುವಂತಾಯಿತು.

ಇನ್ನೊಂದು ಘಟನೆಯಲ್ಲಿ, ಬೆಳಗಿನ ಜಾವ ಸುಮಾರು 5.30ರ ಸಮಯದಲ್ಲಿ ರೇಸಿಂಗ್ ಬೈಕ್‌ನ ಬೂಮಿಂಗ್ ಶಬ್ದಕ್ಕೆ ಬೆಳಗಿನ ನಿದ್ರೆಯಲ್ಲಿದ್ದ ನಿವಾಸಿಗಳು ದಿಗ್ಭ್ರಮೆಗೊಂಡು ಎಚ್ಚರಗೊಂಡರು. ಇಂತಹ ವಸತಿ ಪ್ರದೇಶದಲ್ಲಿ ಆ ಬೈಕ್ ಗಂಟೆಗೆ 250 ಕಿ.ಮೀ. ವೇಗದಲ್ಲಿ ಸಾಗಿತು. ವಿಪರ್ಯಾಸವೆಂದರೆ, ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿದ್ದರೂ ಆ ದೃಶ್ಯಗಳನ್ನು ಸ್ಪಷ್ಟವಾಗಿ ಸೆರೆ ಹಿಡಿಯಲು ಸಾಧ್ಯವಾಗಲಿಲ್ಲ. ಇದರಿಂದ ದೃಶ್ಯಗಳು ಸರಿಯಾಗಿ ಕಾಣಿಸಲಿಲ್ಲ.

ಈ ಪ್ರದೇಶವು ವಸತಿ ಬಡಾವಣೆಯಾಗಿದ್ದು, ಬಹುಪಾಲು ನಿವೃತ್ತಿ ಹೊಂದಿದವರು ವಾಸವಾಗಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅಮಾಯಕರ ಜೀವ ಭಯವನ್ನು ನಿವಾರಿಸುವಂತೆ ಮನವಿ ಮಾಡುತ್ತೇನೆ.

– ಡಾ. ಸಿ.ಆರ್. ವೆಂಕಟೇಶ್, ವಿಜಯನಗರ ರೈಲ್ವೆ ಬಡಾವಣೆ, ಮೈಸೂರು.

ತಪ್ಪಿತಸ್ಥರಿಗೆ ಶೀಘ್ರವೇ ಶಿಕ್ಷೆಯಾಗಲಿ

ಮಾನ್ಯರೆ,

ಪಿಎಸ್‌ಐ ಪರೀಕ್ಷೆಯಲ್ಲಿ ಭಾರೀ ಅವ್ಯವಹಾರ ನಡೆದಿದೆ. ಇದರಿಂದ ನಿಷ್ಠಾವಂತ ಅಭ್ಯರ್ಥಿಗಳು ಬಲಿಪಶುವಾಗಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಕಾನೂನು ರಕ್ಷಣೆ ಮಾಡಬೇಕಾದವರಿಗೆ ಕಾಸಿನ ಮುಂದೆ ನಿಯತ್ತು ಕಾಣದಾಗಿದೆ. ಪೊಲೀಸರ ಈ ಅವ್ಯವಸ್ಥೆಗೆ ಸಮಾಜವೇ ತಲೆ ತಗ್ಗಿಸಬೇಕಾಗಿದೆ. ಸಮಾಜದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದರೆ ಪಕ್ಷ ಹಾಗೂ ವಿರೋಧ ಪಕ್ಷದವರು ಒಬ್ಬರನ್ನೊಬ್ಬರು ದೂರುವುದರಿಂದ ಸಾರ್ವಜನಿಕರಿಗೆ ನ್ಯಾಯ ಸಿಕ್ಕಂತಾಗುತ್ತದೆಯೇ? ಯಾವುದೇ ಇಲಾಖೆಯಲ್ಲಿ ಭ್ರಷ್ಟಾಚಾರ ಎಸಗಿದರೆ ತಪ್ಪಿತಸ್ಥರಿಗೆ ಮತ್ತೊಂದೆಡೆ ವರ್ಗಾವಣೆ ಮಾಡುತ್ತಾರೆ. ಇದರಿಂದಾಗಿ ಅವರು ತಮ್ಮ ಭ್ರಷ್ಟಾಚಾರವನ್ನು ಮತ್ತೊಂದೆಡೆ ಮುಂದುವರೆಸುತ್ತಾರೆ. ಆದ್ದರಿಂದ ತಪ್ಪಿತಸ್ಥರನ್ನು ಕೂಡಲೇ ಅಮಾನತು ಮಾಡಬೇಕು. ಇದರಿಂದ ಭ್ರಷ್ಟ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಬೇರೆಯವರಿಗೆ ಆಡಳಿತದಲ್ಲಿ ಭಯ ಹುಟ್ಟುತ್ತದೆ. ಇದರಿಂದ ಸಮಾಜದಲ್ಲಿ ನಿಷ್ಠಾವಂತ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತದೆ. ಸಾರ್ವಜನಿಕರಿಗೆ ನೆಮ್ಮದಿ ವಾತಾವರಣ ಸೃಷ್ಟಿಸಿದಂತಾಗುತ್ತದೆ. ತಪ್ಪಿತಸ್ಥರನ್ನು ಬಂಧಿಸುವಲ್ಲಿ ವಿಳಂಬ ಬೇಡ.

–ಎಂ. ಎಸ್. ಉಷಾ ಪ್ರಕಾಶ್, ಎಸ್.ಬಿ.ಎಂ.ಕಾಲೋನಿ, ಮೈಸೂರು.

ಕೋವ್ಯಾಕ್ಸಿನ್ ದರ ಇಳಿಕೆಗೆ ಸ್ವಾಗತ

ಮಾನ್ಯರೆ,

ದೇಶದಲ್ಲಿ ಕೊರೊನಾ ನಾಲ್ಕನೇ ಅಲೆ ಪ್ರಾರಂಭವಾಗಿದ್ದು, ದಿನದಿಂದ ದಿನಕ್ಕೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೊರೊನಾ ಮತ್ತೊಮ್ಮೆ ಆರ್ಭಟಿಸುವ ಮುನ್ನ ತಡೆಯುವುದು ಅವಶ್ಯಕ. ಕೊರೊನಾ ಲಸಿಕೆಗಳನ್ನು ಬಳಸುವುದರಿಂದ ಜನರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿ ಕೊರೊನಾದಿಂದ ರಕ್ಷಣೆ ದೊರಕುತ್ತದೆ.

ಕೊರೊನಾವನ್ನು ತಡೆಗಟ್ಟಲು ವಯಸ್ಕರಿಗೆ ಕೋವಿಡ್ ಲಸಿಕಾ ಅಭಿಯಾನ ಆರಂಭವಾಗಿದ್ದು, 12 ರಿಂದ 18 ವಯಸ್ಸಿನ ಒಳಗಿನ ಮಕ್ಕಳಿಗೆ ಕೋವ್ಯಾಕ್ಸಿನ್ ನೀಡಲಾಗುತ್ತಿದೆ ಮತ್ತು ಕೋವ್ಯಾಕ್ಸಿನ್ ಲಸಿಕೆಯ ದರವನ್ನು ಕಡಿಮೆಗೊಳಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಖಾಸಗಿ ಲಸಿಕಾ ಕೇಂದ್ರಗಳಲ್ಲಿ ಕೋವ್ಯಾಕ್ಸಿನ್ ಲಸಿಕೆಯ ದರವನ್ನು 900 ರಿಂದ 225 ರೂ.ಗೆ ಇಳಿಕೆ ಮಾಡಿರುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹೇಳಿದೆ. ಕೋವ್ಯಾಕ್ಸಿನ್ ದರ ಇಳಿಕೆಯನ್ನು ಕೋವಿನ್ ಪೋರ್ಟ್‌ನಲ್ಲಿ ಅಪ್‌ಡೇಟ್ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದ್ದು, ಕೋವ್ಯಾಕ್ಸಿನ್ ಲಸಿಕೆ ಜನಸಾಮಾನ್ಯರಿಗೆ ಹೊರೆಯಾಗದಂತೆ ದೊರಕುವಂತಾಗಿದೆ.

ಕೋವ್ಯಾಕ್ಸಿನ್ ಲಸಿಕೆಯು ಕೊರೊನಾ ವಿರುದ್ಧ 90% ರಷ್ಟು ಪರಿಣಾಮಕಾರಿಯಾಗಿದ್ದು, ದೇಶದ ಪ್ರತಿ ಕುಟುಂಬದ ಪೋಷಕರು ತಮ್ಮ ಮನೆಯಲ್ಲಿನ 12 ರಿಂದ 18 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ಹಾಕಿಸುವ ಮೂಲಕ ರೋಗ ನಿರೋಧಕ ಶಕ್ತಿ ಹೆಚ್ಚಾಗುವಂತೆ ಮಾಡಿ ಕೊರೊನಾದಿಂದ ಮಕ್ಕಳಿಗೆ ರಕ್ಷಣೆ ಸಿಗುವಂತೆ ಮಾಡಬೇಕು.

ಪ್ರಸ್ತುತ ವಯಸ್ಕರಿಗೆ ಬೂಸ್ಟರ್ ಲಸಿಕೆಯನ್ನು ನೀಡಲಾಗುತ್ತಿದ್ದು, ಖಾಸಗಿಯಲ್ಲಿ ಬೂಸ್ಟರ್ ಲಸಿಕೆಗೆ 300 ರೂ.ಗಳನ್ನು ನಿಗದಿಪಡಿಸಲಾಗಿದೆ. ಬೂಸ್ಟರ್ ಲಸಿಕೆಯ ದರವನ್ನು ಬಡತನ ರೇಖೆಗಿಂತ ಕೆಳಗಿರುವ, ಬಿ.ಪಿ.ಎಲ್ ಕಾರ್ಡ್, ಅಂತ್ಯೋದಯ ಕಾರ್ಡ್‌ಗಳನ್ನು ಹೊಂದಿರುವ ಮತ್ತು ಆರ್ಥಿಕ ಹಿಂದುಳಿದವರಿಗೆ ಉಚಿತವಾಗಿ ಅಥವಾ ಅತ್ಯಂತ ಕಡಿಮೆ ದರದಲ್ಲಿ ಬೂಸ್ಟರ್ ಲಸಿಕೆಯನ್ನು ನೀಡಬೇಕು.

–ರಾಸುಮ ಭಟ್, ಚಿಕ್ಕಮಗಳೂರು.

ಹಾಳಾಗಿರುವ ಬೀದಿದೀಪ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಕಂದಾಯ ನಗರ 3ನೇ ಹಂತ ಬಡಾವಣೆಯಲ್ಲಿ ಬೀದಿ ದೀಪಗಳು ಹಾಳಾಗಿವೆ. ಈ ಬಡಾವಣೆ ಪಶ್ಚಿಮ ದಿಕ್ಕಿನಲ್ಲಿ ಲಿಂಗಾಂಬುದಿ ಕೆರೆ ಮತ್ತು ಅರಣ್ಯ ಪ್ರದೇಶ ಇದ್ದು ರಾತ್ರಿ ಕಾಡು ಪ್ರಾಣಿಗಳು ಮತ್ತು ವಿಷ ಜಂತುಗಳು ಓಡಾಡುತ್ತಿರುತ್ತವೆ. ಈ ಬಡಾವಣೆಯಲ್ಲಿ ಹಿರಿಯ ನಾಗರಿಕರು ಹೆಚ್ಚಾಗಿ ವಾಸವಿದ್ದು, ರಾತ್ರಿ ವೇಳೆ ಬೀದಿ ದೀಪ ವ್ಯವಸ್ಥೆಯಿಲ್ಲದೇ ಮನೆಯಿಂದ ಹೊರ ಬರುವುದೇ ಕಷ್ಟವಾಗುತ್ತಿದೆ. ಸಂಬಂಧಪಟ್ಟವರು ಕೂಡಲೇ ಹಾಳಾಗಿರುವ ಬೀದಿದೀಪವನ್ನು ಸರಿಪಡಿಸುವ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಾಗಿದೆ.

– ಎನ್.ವೆಂಕಟಾಚಲಪ್ಪ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ವನ್ಯಜೀವಿ–ಮಾನವ ಸಂಘರ್ಷ: ಅಪಾಯದ ಅಂಚಿನಲ್ಲಿ ಅರಣ್ಯಗಳು–ಮಾನವ ಸಮುದಾಯಗಳು

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಆಗಾಗ್ಗೆ ಮೂಡಿ ಬರುತ್ತಿರುವ ಆಘಾತಕಾರಿ ಸುದ್ದಿಗಳಲ್ಲಿ ಒಂದೆಂದರೆ ವನ್ಯಜೀವಿಗಳು ಮತ್ತು ಮಾನವರ ನಡುವೆ ಹೆಚ್ಚುತ್ತಿರುವ ಸಂಘರ್ಷ ಮತ್ತು ಈ ಕಾರಣದಿಂದಾಗಿ ಜೀವ ಕಳೆದುಕೊಳ್ಳುತ್ತಿರುವ ಪ್ರಾಣಿಗಳು ಹಾಗೂ ಮನುಷ್ಯರು. ಇದೇನು, ಕಳೆದ 10–15 ವರ್ಷಗಳ ಮುನ್ನ, ಆಗಾಗ್ಗೆ ಮಾತ್ರ ಕೇಳಿ ಬರುತ್ತಿದ್ದ ಈ ಸುದ್ದಿ ಇತ್ತೀಚೆಗಂತೂ ದಿನೇ–ದಿನೆ ದೇಶದ ಯಾವುದಾದರೂ ಭಾಗದಿಂದ ಕೇಳಿ ಬರುತ್ತಲೇ ಇದೆಯಲ್ಲಾ? ಇದಕ್ಕೆ ಕಾರಣಗಳಾದರೂ ಏನು? ವನ್ಯ ಜೀವಿಗಳು ಅರಣ್ಯವನ್ನು ಬಿಟ್ಟು ಮಾನವ ವಾಸಸ್ಥಾನಗಳತ್ತ ಹೆಚ್ಚಿನ ಸಂಖ್ಯೆಯಲ್ಲಿ ಏಕೆ ಬರಲಾರಂಭಿಸಿವೆ? ಈ ಪ್ರಾಣಿಗಳೊಡನೆ ಸಂಪರ್ಕ ಏರ್ಪಾಡಾಗುವಂಥ ಸ್ಥಳಗಳಲ್ಲಿ ಮಾನವ ಚಲನೆ–ಚುಟುವಟಿಕೆಗಳು ಹೆಚ್ಚಾಗುತ್ತಿವೆಯೇ? ವನ್ಯಜೀವಿಗಳ ವಾಸಸ್ಥಾನಗಳು, ಆಹಾರ ಮೂಲಗಳು ಹಾಗೂ ನೆಮ್ಮದಿಯ ಬದುಕು ಮಾನವರ ಆಕ್ರಮಣಕ್ಕೆ ತುತ್ತಾಗಿ ಅಲುಗಾಡುತ್ತಿರುವುದೇತಕ್ಕೆ? ಒಂದೆಡೆ ಕುಗ್ಗುತ್ತಿರುವ ಅರಣ್ಯ ಮತ್ತು ಜೀವವೈವಿಧ್ಯ ಮತ್ತು ನಿಧಾನವಾಗಿ ನಶಿಸುತ್ತಿರುವ ಅನೇಕ ವಿಶಿಷ್ಟ ಪ್ರಾಣಿ ಸಂಕುಲಗಳು, ಮತ್ತೊಂದೆಡೆ ಪ್ರಾಣಿಗಳ ಆಕ್ರಮಣಕ್ಕೆ ತುತ್ತಾಗುತ್ತಿರುವ ಮಾನವರು ಹಾಗೂ ಅವರ ಜೀವ ನೆಲೆಗಳು– ಈ ಸಮಸ್ಯೆಗಳನ್ನು ಎದುರಿಸುವುದು ಹೇಗೆ? ಇವೇ ಮುಂತಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತಲೇ ಬಂದಿವೆ.

> “ಅರಣ್ಯದ ಅತಿಕ್ರಮಣದ ಕಾರಣದಿಂದಾಗಿ ಅನೇಕೆಡೆಗಳಲ್ಲಿ ಅರಣ್ಯದ ಒಳಗೇ ಅಥವಾ ಅರಣ್ಯಕ್ಕೆ ಅಂಟಿಕೊಂಡ ಹಾಗಿರುವ ಜಾಗಗಳಲ್ಲಿ ನೆಡುತೋಪುಗಳ ನಿರ್ಮಾಣ ಹಾಗೂ ಅವುಗಳಲ್ಲಿ ವಾಣಿಜ್ಯ ಬೆಳೆಗಳ ಕೃಷಿ, ಖಾಸಗಿ ಭೂಮಿಯಲ್ಲಿ ವ್ಯವಸಾಯ ಚಟವಟಿಕೆಗಳು ಹಾಗೂ ಇತ್ತಿಚಿನ ದಿನಗಳಲ್ಲಿ ಪ್ರವಾಸಿ ತಾಣಗಳು ಹೆಚ್ಚಲಾರಂಭಿಸಿದ್ದು- ಇವೇ ಮುಂತಾದ ಕಾರಣಗಳಿಂದಾಗಿ ವನ್ಯಜೀವಿಗಳ ಮುಕ್ತ ಬದುಕಿಗೆ ಅಡ್ಡಿಯುಂಟಾಗತೊಡಗಿ ಅವುಗಳ ಭೂ ಪ್ರದೇಶ ಸೀಮಿತವಾಗತೊಡಗಿತು. ತಮ್ಮ ನೆರೆಹೊರೆಯಲ್ಲಿ ಆಹಾರ ದೊರೆಯದಿದ್ದಾಗ ವನ್ಯಜೀವಿಗಳು ಕಾಡಿನಿಂದ ಆಹಾರ ಅನ್ವೇಷಣೆಗಾಗಿ ಅರಣ್ಯದ ಸಮೀಪದಲ್ಲಿದ್ದ ಮಾನವ ವಾಸಸ್ಥಾನಗಳಿಗೆ ದಾಳಿಯಿಡಲಾರಂಭಿಸಿದವು.



ಮೊದಲಿಗೆ ವನ್ಯಜೀವಿ–ಮಾನವ ಸಂಘರ್ಷ ಯಾವ ಸಂದರ್ಭಗಳಲ್ಲಿ ಉಂಟಾಗುತ್ತದೆ ಎಂಬುದನ್ನು ತಿಳಿಯುವುದು ಅವಶ್ಯ. ವನ್ಯಜೀವಿಗಳಿಂದ ಮಾನವರ ಜೀವ ಮತ್ತು ಜೀವನಾಧಾರಗಳಿಗೆ ನಿರಂತರ ಅಪಾಯವಿದ್ದಾಗ ಅವು ಮಾನವರ ಮೇಲೆ ಆಕ್ರಮಣ ಮಾಡಿ ಜೀವ ಹಾನಿಯನ್ನಾದರೂ ಉಂಟು ಮಾಡಬಹುದು, ಇಲ್ಲ ಮಾರಣಾಂತಿಕ ಗಾಯಗಳನ್ನು ಎಸಗಬಹುದು. ಅರಣ್ಯದ ಒಳಗೆ ಅಥವಾ ಅಜು–ಬಾಜಿನಲ್ಲಿರುವ ಗ್ರಾಮಗಳಲ್ಲಂತೂ ಅವರ ಕೈದೋಟಗಳಲ್ಲಿರುವ ಸೊಪ್ಪು, ತರಕಾರಿ ಮುಂತಾದ ಆಹಾರ ಮೂಲಗಳ ಅಥವಾ ನೆಡುತೋಪುಗಳಿಗೆ ನುಗ್ಗಿ ಅಲ್ಲಿ ವಾಣಿಜ್ಯ ಬೆಳೆಗಳ ನಾಶ ಮಾಡುವುದು ಸಾಮಾನ್ಯವಾಗಿ ಬಿಟ್ಟಿದೆ. ತಮ್ಮ ಜೀವ ರಕ್ಷಣೆಗಾಗಿ ಅಥವಾ ಅವುಗಳನ್ನು ಹೆದರಿಸಲು ಮನುಷ್ಯರು ಆಯುಧಗಳನ್ನು ಅಥವಾ ಮದ್ದು ಗುಂಡುಗಳನ್ನು ಬಳಸಿದಾಗ ಪ್ರಾಣಿಗಳು ಜೀವ ಕಳೆದುಕೊಳ್ಳುತ್ತವೆ, ಇಲ್ಲ ಗಾಯಗೊಳ್ಳುತ್ತವೆ. ಮಾನವರು ಮತ್ತು ಪ್ರಾಣಿಗಳು ಮುಖಾ–ಮುಖಿ ಎದುರಾಗುವಂಥ ಪರಿಸ್ಥಿತಿ ಸೃಷ್ಟಿಯಾದಾಗ ವನ್ಯಜೀವಿ–ಮಾನವ ಸಂಘರ್ಷ ಸಂಭವಿಸುತ್ತದೆ. ಇತ್ತೀಚೆಗಂತೂ ಅರಣ್ಯ ಪ್ರದೇಶಗಳಲ್ಲಿ (ರಕ್ಷಿತ ಅರಣ್ಯಗಳೂ ಸೇರಿದಂತೆ) ಹಾದು ಹೋಗುವ ಪ್ರವಾಸಿಗರನೇಕರು, ಎಚ್ಚರಿಕೆಯ ಫಲಕಗಳನ್ನು ಅಲಕ್ಷಿಸಿ ವಾಹನಗಳನ್ನು ನಿಲ್ಲಿಸಿ ಮೊಬೈಲ್ ಅಥವಾ ಕ್ಯಾಮರಾ ಮೂಲಕ ಚಿತ್ರಗಳನ್ನು ತೆಗೆದುಕೊಳ್ಳಲೆತ್ನಿಸುವಾಗ ಫ್ಲಾಶ್‌ನಿಂದ ವಿಚಲಿತವಾಗಿಯೋ ಅಥವಾ ತಮಗೇನೋ ತೊಂದರೆಯಾಗಬಹುದೆಂಬ ಪ್ರಾಣಿ ಸಹಜ ಮನಸ್ಥಿತಿಯಿಂದಲೋ ವನ್ಯಜೀವಿಗಳು ಈ ಸಂಚಾರಿಗಳ ಮೇಲೆ ಆಕ್ರಮಣ ಮಾಡುವಂಥ ಘಟನೆಗಳು ನಡೆಯುತ್ತಲೇ ಇವೆ. ಆಕಸ್ಮಿಕವೋ, ಅನಿವಾರ್ಯವೋ ಒಟ್ಟಿನಲ್ಲಿ, ವನ್ಯಜೀವಿ–ಮಾನವ ಸಂಘರ್ಷಗಳು ಇತ್ತೀಚೆಗೆ ಭಯ ಹುಟ್ಟಿಸುವ ಪ್ರಮಾಣದಲ್ಲಿ ಹೆಚ್ಚಾಗುತ್ತಿವೆ.

2021ರಲ್ಲಿ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (WWF) ಮತ್ತು ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮ (UNEP) ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಪ್ರಕಟವಾದ ಎ ಫ್ಯೂಚರ್ ಫಾರ್ ಆಲ್– ದಿ ನೀಡ್ ಫಾರ್ ಹ್ಯೂಮನ್ ವೈಲ್ಡ್ ಲೈಫ್ ಕೋ ಎಕ್ಸಿಸ್ಟೆನ್ಸ್ ಎಂಬ ವರದಿ ಜಗತ್ತಿನ ಶೇಕಡಾ 75ರಷ್ಟು ಹುಲಿ, ಚಿರತೆ, ಆನೆ ಹಾಗೂ ಆಯಾ ಪ್ರದೇಶಗಳಲ್ಲಿ ದೊಡ್ಡ ಪ್ರಾಣಿಗಳೆಂದು ಗುರುತಿಸಲ್ಪಟ್ಟಿರುವ ವನ್ಯಜೀವಿಗಳು, ಮಾನವ–ವನ್ಯ ಜೀವಿ ಸಂಘರ್ಷದಿಂದ ಪ್ರಾಣ ಕಳೆದುಕೊಳ್ಳುವ ಅಪಾಯದಲ್ಲಿವೆ ಎಂದು ತಿಳಿಸಿದೆ. ಭಾರತದಲ್ಲಿ 2014–15 ರಿಂದ 2018–19ರ ಅವಧಿಯಲ್ಲಿ 500 ಆನೆಗಳು ಸತ್ತಿದ್ದರೆ, ಅದೇ ಅವಧಿಯಲ್ಲಿ 2361 ಮಂದಿ ನಾಗರಿಕರು ಆನೆಗಳ ದಾಳಿಗೆ ಒಳಗಾಗಿ ಸಾವನಪ್ಪಿದ್ದಾರೆ ಎಂದು ಒಂದು ವರದಿ ಸೂಚಿಸಿದೆ. ಆದರೆ ಈ ಅಂಕಿ–ಸಂಖ್ಯೆಗಳನ್ನು ಸಂಪೂರ್ಣವೆಂದಾಗಲೀ ಪರಿಸ್ಥಿತಿಯ ಸತ್ಯ ಚಿತ್ರಣವನ್ನು ಬಿಂಬಿಸಿದೆ ಎಂದಾಗಲೀ ಅರ್ಥೈಸುವ ಹಾಗಿಲ್ಲ. ಒಂದು ಕಾಲಾವಧಿಯ, ಒಂದು ಪ್ರಾಣಿಯ ಮತ್ತು ದಾಖಲಾಗಿರುವ ಪ್ರಕರಣಗಳ ಬಗ್ಗೆ ಮಾತ್ರ ನಮಗೆ ಒಂದು ಕಲ್ಪನೆಯನ್ನು ಈ ಮಾಹಿತಿ ನೀಡುತ್ತದೆಯಷ್ಟೆ. ಈ ಅಂಕಿ–ಸಂಖ್ಯೆಗಳು ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತಲೇ ಇರುತ್ತವೆ, ಬೆಳೆಯುತ್ತಲೇ ಇರುತ್ತವೆ.

ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷಕ್ಕೆ ಒಂದು ಪ್ರಮುಖ ಕಾರಣವೆಂದರೆ ನಿಧಾನವಾಗಿ ನಶಿಸುತ್ತಿರುವ ಅರಣ್ಯ ಸಂಪತ್ತು. ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ಸಂಪನ್ಮೂಲಗಳನ್ನು ನಾಶಪಡಿಸುತ್ತಾ ಹೋದ ಹಾಗೆಲ್ಲ ವನ್ಯ ಜೀವಿಗಳ ಆಹಾರ ಮೂಲಗಳು ಮಾಯವಾಗುತ್ತಾ ಹೋದವು. ಕಾಡಿನ ಜೀವವೈವಿಧ್ಯ ಕಡಿಮೆಯಾದಾಗ ವನ್ಯ ಜೀವಿಗಳಿಗೆ ತಮ್ಮ ಪರಿಸರದಲ್ಲೇ ಲಭ್ಯವಿದ್ದ ಆಹಾರಯೋಗ್ಯ ಸಸ್ಯ ಮತ್ತು ಪ್ರಾಣಿ ಸಂಪತ್ತು ಮರೆಯಾಗುತ್ತಾ ಹೋಯಿತು. ಅರಣ್ಯ ನೆಡುತೋಪುಗಳಲ್ಲಿ ನೆಟ್ಟ ಅನೇಕ ಬಗೆಯ ಸಸ್ಯ ಜಾತಿಗಳು ಪ್ರಾಣಿಗಳಿಗೆ ಆಹಾರವನ್ನೂ ಒದಗಿಸಲಿಲ್ಲ, ಅರಣ್ಯ ಸಮುದಾಯಗಳ ಜೀವನ ನಿರ್ವಹಣೆಗೂ ಪ್ರಯೋಜನವಾಗಲಿಲ್ಲ. ಪರಿಸರ ರಕ್ಷಣೆಗಿಂತ ಲಾಭ ಗಳಿಕೆಯತ್ತ ಗಮನ ಸರಿದಾಗ ಅರಣ್ಯದ ಮೇಲೆ ನವ–ಬಂಡವಾಳ ಶಾಹಿ ಶಕ್ತಿಗಳ ನಿಯಂತ್ರಣ ಗಟ್ಟಿಯಾಗತೊಡಗಿತು. ಅರಣ್ಯದ ಅತಿಕ್ರಮಣದ ಕಾರಣದಿಂದಾಗಿ ಅನೇಕ ಕಡೆಗಳಲ್ಲಿ ಅರಣ್ಯದ ಒಳಗೇ ಅಥವಾ ಅರಣ್ಯಕ್ಕೆ ಅಂಟಿಕೊಂಡ ಹಾಗಿರುವ ಜಾಗಗಳಲ್ಲಿ ನೆಡುತೋಪುಗಳ ನಿರ್ಮಾಣ ಹಾಗೂ ಅವುಗಳಲ್ಲಿ ವಾಣಿಜ್ಯ ಬೆಳೆಗಳ ಕೃಷಿ, ಖಾಸಗಿ ಭೂಮಿಯಲ್ಲಿ ವ್ಯವಸಾಯ ಚಟವಟಿಕೆಗಳು ಹಾಗೂ ಇತ್ತಿಚಿನ ದಿನಗಳಲ್ಲಿ ಪ್ರವಾಸಿ ತಾಣಗಳು ಹೆಚ್ಚಲಾರಂಭಿಸಿದ್ದು–ಇವೇ ಮುಂತಾದ ಕಾರಣಗಳಿಂದಾಗಿ ವನ್ಯ ಜೀವಿಗಳ ಮುಕ್ತ ಬದುಕಿಗೆ ಅಡ್ಡಿಯುಂಟಾಗ ತೊಡಗಿ ಅವುಗಳ ಭೂ ಪ್ರದೇಶ ಸೀಮಿತವಾಗ ತೊಡಗಿತು. ತಮ್ಮ ನೆರೆಹೊರೆಯಲ್ಲಿ ಆಹಾರ ದೊರೆಯದಿದ್ದಾಗ ವನ್ಯಜೀವಿಗಳು ಕಾಡಿನಿಂದ ಆಹಾರ ಅನ್ವೇಷಣೆಗಾಗಿ ಅರಣ್ಯದ ಸಮೀಪದಲ್ಲಿದ್ದ ಮಾನವ ವಾಸಸ್ಥಾನಗಳಿಗೆ ದಾಳಿಯಿಡಲಾರಂಭಿಸಿದವು.

ವನ್ಯಜೀವಿಗಳು ಆಹಾರವನ್ನರಸಿ ಮಾನವ ವಾಸಸ್ಥಾನಗಳಿಗೆ ಬಂದಾಗ ತಮ್ಮ ಜೀವನಾಧಾರಗಳನ್ನು ಕಳೆದುಕೊಳ್ಳುವವರು, ಯಾವುದೇ ಪರ್ಯಾಯ ಆದಾಯ ಮೂಲಗಳನ್ನಾಗಲಿ, ಕೌಶಲಗಳನ್ನಾಗಲಿ ಹೊಂದಲಾಗದ ಸ್ಥಿತಿಯಲ್ಲಿರುವ ಬಡ ರೈತರು ಮತ್ತು ಮೂಲನಿವಾಸಿಗಳು. ಅವರು ಜೀವನಾಧಾರಕ್ಕಾಗಿ ಬೆಳೆಯುವ ಕಾಯಿ–ಪಲ್ಲೆ ಅಥವಾ ಸಣ್ಣ ಮಟ್ಟಿನ ವ್ಯಾಪಾರ ಮಾಡಲು ಅವರು ಹೆಣೆಯುವ ಬುಟ್ಟಿ, ಚಾಪೆ ಮುಂತಾದ ಅವರ ಸಾಂಪ್ರದಾಯಿಕ ಉದ್ಯೋಗ ಅವಶ್ಯಕತೆಗಳನ್ನು ಪೂರೈಸುವ ಮೂಲಸಾಮಗ್ರಿಗಳು ವನ್ಯಜೀವಿಗಳ ಆಕ್ರಮಣಕ್ಕೆ ಒಳಗಾಗುತ್ತವೆ ಅನೇಕ ಬಾರಿ ಇವರ ಸಾಕು ಪ್ರಾಣಿಗಳನ್ನೂ ವನ್ಯಜೀವಿಗಳು ತಿಂದು ಬಿಡುವುದರಿಂದ ಸಮಾಜದ ಅಂಚಿನಲ್ಲಿರುವ ವರ್ಗಗಳು ಹಸಿವು–ದಾರಿದ್ರ್ಯ ಸ್ಥಿತಿಗಳ ಮತ್ತಷ್ಟು ಸನಿಹಕ್ಕೆ ಹೋಗಿಬಿಡುತ್ತಾರೆ. ಇವರೇ ವನ್ಯ ಜೀವಿಗಳ ನಿರಂತರ ಆಕ್ರಮಣದ ನೆರಳಿನಲ್ಲಿ ಬದುಕುತ್ತಿರುವಂಥ ಸಮುದಾಯಗಳು.

ವನ್ಯಜೀವಿಗಳು ಶ್ರೀಮಂತರ ನೆಡುತೋಪುಗಳಿಗೆ ಅಥವಾ ಕೃಷಿ ಭೂಮಿಗಳಿಗೆ ನುಗ್ಗುವುದಿಲ್ಲವೆಂದಲ್ಲ. ಆದರೆ ಅವರ ವಾಸಸ್ಥಾನಗಳು ಸುರಕ್ಷಿತವಾದ ತಾಣಗಳಲ್ಲಿ ಇರುತ್ತವೆ. ವನ್ಯ ಜೀವಿಗಳನ್ನು ಎದುರಿಸಲು–ಹೆದರಿಸಲು ಅವರು ಆಯುಧಗಳನ್ನೂ ಹೊಂದಿರಬಹುದು. ಹಾಗೆಂದ ಮಾತ್ರಕ್ಕೆ ಅವರಿಗೆ ಜೀವ ಬೆದರಿಕೆ ಇಲ್ಲವೆಂದಾಗಲಿ, ಆರ್ಥಿಕ ನಷ್ಟವಾಗುತ್ತಿಲ್ಲವೆಂದಾಗಲೀ ಹೇಳಲಾಗುವುದಿಲ್ಲ. ಇತ್ತೀಚೆಗಂತೂ ತಮ್ಮ ಪ್ಲಾಂಟೇಷನ್‌ಗಳಲ್ಲೇ ವಾಯುವಿಹಾರಕ್ಕೆ ಹೊರಟ ಮಾಲೀಕರ ಮೇಲೆ ಆನೆಗಳು ದಾಳಿ ಮಾಡಿ ಅವರ ಜೀವ ಹಾನಿ ಮಾಡಿರುವುದು, ಬೆಳೆಗಳ ರಕ್ಷಣೆಗಾಗಿ ಹಾಕಿರುವ ವಿದ್ಯುತ್ ಬೇಲಿಗಳನ್ನೇ ಅವು ಧ್ವಂಸ ಮಾಡುವುದು ಸರ್ವೇಸಾಮಾನ್ಯ ವಾದ ಘಟನೆಗಳಾಗಿ ಬಿಟ್ಟಿವೆ.

ಉಳ್ಳವರ ಮಾತು ಹಾಗಿರಲಿ, ಜೀವನ ನಿರ್ವಹಣೆಗಾಗಿ ಎಲ್ಲಿಂದಲೋ ಕೆಲಸಕ್ಕಾಗಿ ಬಂದು, ಮೂಲ ಭೂತ ಅಗತ್ಯಗಳಿಂದಲೂ ವಂಚಿತವಾದ ವಾಸ ಸ್ಥಾನ ಗಳಲ್ಲಿ ಬದುಕುತ್ತಾ, ನಿರಂತರವಾಗಿ ಅಪಾಯದ ಅಂಚಿ ನಲ್ಲಿ ದಿನಗಳನ್ನು ತಳ್ಳುತ್ತಿರುವ ಕೂಲಿ ಕಾರ್ಮಿಕರ ಬಗ್ಗೆ ಚಿಂತಿಸಬೇಕಲ್ಲವೇ? ವನ್ಯಜೀವಿಗಳ ದಾಳಿಗೆ ತುತ್ತಾಗಿ ಜೀವ ಹಾನಿಯಾದವರಿಗೆ ಅರಣ್ಯ ಇಲಾಖೆ ಹಣದ ರೂಪದಲ್ಲಿ ಪರಿಹಾರವನ್ನೇನೋ ನೀಡಬಹುದು. ಆದರೆ ಕಳೆದು ಹೋದ ಅವರ ಬದುಕನ್ನು ಕಟ್ಟಿ ಕೊಡಲಾಗುವುದಿಲ್ಲ

ವನ್ಯಜೀವಿ–ಮಾನವ ಸಂಘರ್ಷ ಪರಿಸ್ಥಿತಿ ತಂದೊಡ್ಡಿರುವ ತಲ್ಲಣಗಳಿಂದ ಹೊರಬಂದು ಪ್ರಾಣಿಗಳು ಮತ್ತು ಮನುಷ್ಯರು ಸಂಘರ್ಷದಿಂದ ಸಹಬಾಳ್ವೆಯತ್ತ ಚಲಿಸುವುದು ಹೇಗೆ? ಅರಣ್ಯಗಳ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ರಕ್ಷಿಸಲು ರಕ್ಷಿತ ಅರಣ್ಯಗಳನ್ನು ಗುರುತಿಸಿ ಘೋಷಿಸಿದ್ದು ಈ ನಿಟ್ಟಿನಲ್ಲಿ ಇಟ್ಟ ದಿಟ್ಟ ಹೆಜ್ಜೆ ನಿಜ. ಆದರೆ ಅದರಿಂದಾದ ಮಾನವ ಸಮುದಾಯಗಳ ಸ್ಥಳಾಂತರ, ಅರಣ್ಯಾವಲಂಬಿ ಸಮುದಾಯಗಳಿಗೆ ಸೂಕ್ತ ಪರ್ಯಾಯ ನೆಲೆಗಳನ್ನು ಕಲ್ಪಿಸದಿರುವುದು ಹಾಗೂ ಅವರ ಬದುಕಿನ ಗುಣಮಟ್ಟವನ್ನು ಏರಿಸುವಂಥ ಸಾಮಾಜಿಕ–ಆರ್ಥಿಕ ಪರಿವರ್ತನೆಗಳನ್ನು ತರದಿರುವುದು, ಅಭಿವೃದ್ಧಿಯ ನೆಪದಲ್ಲಿ ನಡೆಯುತ್ತಿರುವ ಅರಣ್ಯದ ಗ್ರಾಹಕೀಕರಣವನ್ನು ಪ್ರತ್ಯಕ್ಷವಾಗಿ–ಪರೋಕ್ಷವಾಗಿ ಬೆಂಬಲಿಸುತ್ತಿರುವ ವ್ಯವಸ್ಥೆಗಳನ್ನು ತಡೆಗಟ್ಟಲು ಆಗದಿರುವುದು, ಅರಣ್ಯ ಇಲಾಖೆಯ ತಳ ಸ್ತರದ ಉದ್ಯೋಗಿಗಳ ಕೆಲಸದ ಪರಿಸ್ಥಿತಿಗಳನ್ನು ಉತ್ತಮಗೊಳಿಸದಿರುವುದು,–ಇವೇ ಮುಂತಾದ ಕಾರಣಗಳಿಂದಾಗಿ ವನ್ಯಜೀವಿ– ಮಾನವ ಸಂಘರ್ಷ ಹೆಚ್ಚುತ್ತಿದೆ. ಅರಣ್ಯದ ಜೀವವೈವಿಧ್ಯದ ರಕ್ಷಣೆಯನ್ನು ಸಮಗ್ರ ದೃಷ್ಟಿಕೋನದಿಂದ ನೋಡಿ ಸಸ್ಯ, ಪ್ರಾಣಿ ಮತ್ತು ಮನುಷ್ಯ– ಈ ಮೂರು ಅಂಗಗಳಿಗೂ ಸುಸ್ಥಿರ ಬದುಕಿಗೆ ಅವಕಾಶ ಮಾಡಿಕೊಟ್ಟಾಗ ಮಾತ್ರ ವನ್ಯಜೀವಿ–ಮಾನವ ಸಂಘರ್ಷ ವನ್ನು ನಿರ್ವಹಿಸಲು ಸಾಧ್ಯ.

ಬೆಂಗಳೂರು–ಮೈಸೂರು ದಶಪಥ ರಸ್ತೆ ಕಾಮಗಾರಿ: ಸುರಕ್ಷಿತ ಸಂಚಾರ ದೃಷ್ಟಿಯಿಂದ

ಮುಖ್ಯ ಪಥ, ಸರ್ವೀಸ್ ರಸ್ತೆಯ ಅಂಚಿಗೆ ಕಾಂಕ್ರಿಟ್ ನೆಲಗಟ್ಟು ಕಲ್ಪಿಸಲು ಮನವಿ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷರಿಗೆ ಸಂಸದ ಪ್ರತಾಪ್‌ಸಿಂಹ ಮನವರಿಕೆ



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷೆ ಅಲ್ಕಾ ಉಪಾಧ್ಯಾಯ ಅವರಿಗೆ ಸಂಸದ ಪ್ರತಾಪ್‌ಸಿಂಹ ಮನವಿ ಸಲ್ಲಿಸಿದರು.



ಮೈಸೂರು, ಮೇ 11(ಪಿಎಂ)– ಬೆಂಗಳೂರು–ಮೈಸೂರು ದಶಪಥ ರಸ್ತೆಯ ಮುಖ್ಯ ಪಥ ಹಾಗೂ ಸರ್ವೀಸ್ ರಸ್ತೆಗಳ ಅಂಚಿನಲ್ಲಿ ಸುರಕ್ಷಿತ ಕಾಂಕ್ರಿಟ್ ನೆಲಗಟ್ಟು (ಅರ್ಥನ್ ಸೋಲ್ಡರ್) ಒದಗಿಸುವುದು, ಬಾಕಿ ಉಳಿದಿರುವ ಭೂ ತಕರಾರು ಪರಿಹಾರ ಸೇರಿದಂತೆ ಕಾಮಗಾರಿಗೆ ಎದುರಾಗಿರುವ ಅಡೆತಡೆಗಳನ್ನು ನಿವಾರಿಸಲು ಸಂಬಂಧಿಸಿದವರಿಗೆ ನಿರ್ದೇಶನ ನೀಡುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷೆ ಅಲ್ಕಾ ಉಪಾಧ್ಯಾಯ ಅವರಿಗೆ ಸಂಸದ ಪ್ರತಾಪ್‌ಸಿಂಹ ಮನವಿ ಮಾಡಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಅಲ್ಕಾ ಉಪಾಧ್ಯಾಯ ಅವರನ್ನು ಭೇಟಿ ಮಾಡಿದ ಸಂಸದರು, ಮನವಿ ಸಲ್ಲಿಸಿ ಶೀಘ್ರ ಕಾಮಗಾರಿ ಪೂರ್ಣಗೊಳಿ ಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಪ್ರಗತಿಯಲ್ಲಿರುವ ಬೆಂಗಳೂರು–ಮೈಸೂರು ದಶಪಥ ರಸ್ತೆ (ಎನ್‌ಹೆಚ್–275) ಕಾಮಗಾರಿಯಲ್ಲಿ ಮುಖ್ಯ ಪಥ ಹಾಗೂ ಎರಡು ಬಾಜಿನ ಸರ್ವೀಸ್ ರಸ್ತೆಗಳ ಅಂಚಿನಲ್ಲಿ ಕಾಂಕ್ರಿಟ್ ನೆಲಗಟ್ಟು ನಿರ್ಮಿಸುವುದು ಅವಶ್ಯವಾಗಿದೆ. ಕಾರಣ, ಮಳೆ ಬಂದಂತಹ ಸಂದರ್ಭದಲ್ಲಿ ಚರಂಡಿಯಲ್ಲಿ ನೀರು ನಿಲ್ಲುವ ಸಾಧ್ಯತೆಗಳು ಹೆಚ್ಚಿದ್ದು, ಅದು ಮಣ್ಣಿನ ಭಾಗವನ್ನು (ಎಡ್ಜ್ ಡ್ರಾಪ್) ಮುಳುಗಿಸಿದರೆ, ಪಾದಚಾರಿ ಮಾರ್ಗದ ಅವ್ಯವಸ್ಥೆಗೆ ಕಾರಣವಾಗಲಿದೆ. ಅಲ್ಲದೆ, ಮಣ್ಣು ರಸ್ತೆಗೆ ಹರಡಿ, ವಾಹನಗಳ ಜಾರುವಿಕೆಗೆ ಕಾರಣವೂ ಆಗಬಹುದು. ಇದಲ್ಲದೆ, ಭಾರೀ ಮಳೆಯ ಸಮಯದಲ್ಲಿ ಇನ್ನಷ್ಟು ಅವ್ಯವಸ್ಥೆ ಉಂಟಾಗಬಹುದು.

ರಸ್ತೆ ಅಂಚಿನಲ್ಲಿರುವ ಮಣ್ಣು ಆರ್‌ಸಿಸಿ ಚರಂಡಿಗೆ ಸೇರಿದರೆ, ಚರಂಡಿಯಲ್ಲಿ ಹೂಳು ತುಂಬಿಕೊಳ್ಳಲಿದೆ. ಇದರ ಪರಿಣಾಮ ಚರಂಡಿಯಲ್ಲಿ ಗಿಡಗಂಟಿಗಳು ಬೆಳೆದು ಒಳಚರಂಡಿ ವ್ಯವಸ್ಥೆ ಹದಗೆಡುವ ಸಾಧ್ಯತೆಗಳಿವೆ. ಹಾಗಾಗಿ ಕಾಂಕ್ರೀಟ್ ಬಳಸಿ. ನೆಲಗಟ್ಟು ಒದಗಿಸಲು ಕ್ರಮ ವಹಿಸಬೇಕು. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಸುರಕ್ಷಿತ ಕ್ರಮವಾಗಿದೆ. ಜೊತೆಗೆ ಬಾಕಿ ಉಳಿದಿರುವ ಭೂ ತಕರಾರುಗಳನ್ನು ಸಂಬಂಧಿಸಿದವರೊಂದಿಗೆ ಸಭೆ ನಡೆಸಿ, ಪರಿಹರಿಸುವುದು ಸೇರಿದಂತೆ ಶೀಘ್ರ ಕಾಮಗಾರಿ ಪೂರ್ಣಗೊಳ್ಳಲು ಕ್ರಮ ವಹಿಸಬೇಕೆಂದು ಮನವಿಯಲ್ಲಿ ಸಂಸದರು ಕೋರಿದ್ದಾರೆ.

ವೇಶ್ಯಾವಾಟಿಕೆ: ಮಹಿಳೆ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮೇ 11–ಮೈಸೂರಿನ ಲಕ್ಷ್ಮೀಕಾಂತನಗರ 1ನೇ ಹಂತದ ಮನೆಯೊಂದ ರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಮಹಿಳೆಯೋರ್ವರ ಮೇಲೆ ಪ್ರಕರಣ ದಾಖಲಾಗಿದೆ. ಇಲ್ಲಿನ ಇಡಬ್ಲ್ಯುಎಸ್ ಮನೆಯಲ್ಲಿ ನೆಲೆಸಿರುವ ಮಹಿಳೆ ಹುಡುಗಿಯರನ್ನು ಅಕ್ರಮವಾಗಿಟ್ಟು ಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದಾಳೆ ಎಂದು ಭಾತ್ಮೀದಾರರಿಂದ ಮಾಹಿತಿ ಬಂದಿದ್ದು, ಈ ಮಾಹಿತಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಠಾಣೆ ಸಬ್ ಇನ್ಸ್‌ಪೆಕ್ಟರ್ ಸಯ್ಯದ್ ಅಮ್ರೀನ್ ನೀಡಿದ ದೂರು ದಾಖಲಿಸಿಕೊಂಡ ಹೆಬ್ಬಾಳು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪ್ರೊ. ಶರ್ಮಾ ಸಂಗೀತ ವಿವಿ ಆಹ್ವಾನಿತ ಪ್ರಾಧ್ಯಾಪಕ



ಮೈಸೂರು, ಮೇ 11–ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಆಹ್ವಾನಿತ ಪ್ರಾಧ್ಯಾಪಕರಾಗಿ ನ್ಯಾಕ್ ನಿರ್ದೇಶಕ ಪ್ರೊ. ಎಸ್.ಸಿ. ಶರ್ಮಾ ನೇಮಕಗೊಂಡಿದ್ದಾರೆ.

ಇವರು ಸಂಗೀತ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿವಿ ಪ್ರಕಾಶನ ಸಭೆಯಲ್ಲಿ ತೀರ್ಮಾನಿಸಿದಂತೆ ಈ ನೇಮಕ ಮಾಡಲಾಗಿದೆ ಎಂದು ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ ಹಾಗೂ ಕುಲಸಚಿವ ಪ್ರೊ. ಟಿ.ಎಸ್.ದೇವರಾಜ ತಿಳಿಸಿದ್ದಾರೆ.

ಗ್ರಾಹಕನ ಮೇಲೆ ಹೋಟೆಲ್ ಮಾಲೀಕ, ಪುತ್ರನಿಂದ ಹಲ್ಲೆ

ಮೈಸೂರು, ಮೇ 11–ಗ್ರಾಹಕನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಮೈಸೂರಿನ ಕೆ.ಆರ್.ಮೊಹಲ್ಲಾ ದಲ್ಲಿರುವ ಹೋಟೆಲ್‌ವೊಂದರ ಮಾಲೀಕ ಮತ್ತು ಸಿಬ್ಬಂದಿ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಕೆ.ಆರ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಕುರುಬಾರಹಳ್ಳಿಯ ಗುರುಮೂರ್ತಿ ಎಂಬುವರು ಮೇ 4ರಂದು ರಾತ್ರಿ 10.30ರಲ್ಲಿ ಕೆ.ಆರ್. ಮೊಹಲ್ಲಾದ ಸುಪ್ರಿಯ ಹೋಟೆಲ್‌ಗೆ ಊಟಕ್ಕೆ ತೆರಳಿದ್ದು, ಊಟ ಮಾಡಿದ ನಂತರ ಮತ್ತೆ ಸರ್ವೀಸ್ ಕೇಳಿದಾಗ 'ನಾನು ಏನು ಕೊಡುತ್ತೀನೋ ಅದನ್ನು ತಿನ್ನು, ನೀನು ಹೇಳಿದ ಹಾಗೆ ಕೊಡುವುದಿಲ್ಲ' ಎಂದು ಹೋಟೆಲ್ ಮಾಲೀಕ ಹೇಳಿದನಂತೆ. 'ದುಡ್ಡು ಕೊಡುವುದು ನಾನು. ನಾನು ಏನು ಕೇಳುತ್ತೇನೋ ಅದನ್ನು ಕೊಡು' ಎಂದು ಗುರುಮೂರ್ತಿ ಹೇಳಿದಾಗ ಹೋಟೆಲ್ ಮಾಲೀಕ ಮಹದೇವ, ಅವರ ಪುತ್ರ ಮತ್ತು ಸಿಬ್ಬಂದಿ ಹಲ್ಲೆ ನಡೆಸಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

'ವಿಶ್ವಶಾಂತಿ ಪಾದಯಾತ್ರೆ'

ಗಣಪತಿ ಸಚ್ಚಿದಾನಂದ ಶ್ರೀಗಳ ಪಾದಪೂಜೆಯನ್ನು ನೆರವೇರಿಸಲಾಗುವುದು ಎಂದರು.

ಪಾದಯಾತ್ರೆ ಐದು ಪ್ರಮುಖ ಉದ್ದೇಶಗಳು: ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಮತ್ತು ಸುರಕ್ಷತೆ, ಗೋ ಸಂರಕ್ಷಣೆ, ಆರ್ಥಿಕವಾಗಿ ದುರ್ಬಲವಾಗಿರುವ ಶಾಲೆಗಳು ಮತ್ತು ವೇದ ಪಾಠಶಾಲೆಗಳಿಗೆ ನೆರವು, ಬಡ ರೈತರ ಕಾಳಜಿ ಮತ್ತು 'ಪರ್ಯಾವರಣ', ಅಂದರೆ ಸಸಿಗಳನ್ನು ನೆಡುವ ಮೂಲಕ ಪರಿಸರ ಮತ್ತು ಭೂಮಿ ತಾಯಿಯ ಸಂರಕ್ಷಣೆ ಉದ್ದೇಶ ಹೊಂದಲಾಗಿದೆ ಎಂದರು. ಇದೇ ವೇಳೆ ಪೌರಕಾರ್ಮಿಕರಿಗಾಗಿ ಆಶ್ರಮವು ಬನ್ನಿಮಂಟಪ ಮತ್ತು ವಸಂತ ನಗರದಲ್ಲಿ ನಿರ್ಮಿಸಿರುವ ದೊಡ್ಡಮ್ಮತಾಯಿ ದೇವಾಲಯಗಳು ಮತ್ತು ಆಶ್ರಮದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ 'ವಿಜಯ ಹನುಮ ಗೋಪುರ' ಲೋಕಾರ್ಪಣೆಗೊಳ್ಳಲಿದೆ ಎಂದು ಕಿರಿಯ ಶ್ರೀಗಳು ತಿಳಿಸಿದರು.

ಮೂರ್‍ನಾಲ್ಕು ದಿನದಲ್ಲಿ ಸಂದೇಶ

ಸಮಯ ಹೊಂದಿಕೆ ಆಗುತ್ತಿಲ್ಲ. ನೀವು ಗೃಹ ಸಚಿವರನ್ನು ಭೇಟಿ ಮಾಡಿ. ಪ್ರಧಾನಿ ಅವರ ನಿರ್ಧಾರವನ್ನು ನಿಮಗೆ ತಿಳಿಸುತ್ತಾರೆ ಎಂದು ತಿಳಿಸಿದ್ದರು. ನಡ್ಡಾ ಅವರ ಸಲಹೆಯಂತೆ ಮುಖ್ಯಮಂತ್ರಿಗಳು ಗೃಹ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಆಗಿದೆ. ಆದರೆ, ಅದರ ಒಟ್ಟಾರೆ ಫಲಿತಾಂಶ ಏನೆಂಬುದು ಬಹಿರಂಗವಾಗಿಲ್ಲ.

ಭೇಟಿಯ ನಂತರ ಮಾಧ್ಯಮಗಳ ಜತೆ ಮಾತನಾಡಿದ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯದ ಸ್ಥಿತಿಗತಿಯ ಬಗ್ಗೆ ಎಲ್ಲವನ್ನೂ ವಿವರಿಸಿದ್ದೇನೆ. ಅವರು ತಮ್ಮ ನಿರ್ಧಾರವನ್ನು ಮೂರು ನಾಲ್ಕು ದಿನದಲ್ಲಿ ತಿಳಿಸುವುದಾಗಿ ಹೇಳಿದ್ದಾರೆ.

ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಮುಂದಿನ ಒಂದು ವಾರ ಬಹಳ ಮಹತ್ವದ್ದಾಗಿದೆ. ಇಲ್ಲಿನ ರಾಜಕೀಯ ಸ್ಥಿತಿಗತಿಗಳ ಬಗ್ಗೆ ರಾಷ್ಟ್ರೀಯ ಅಧ್ಯಕ್ಷರೊಟ್ಟಿಗೆ ಚರ್ಚಿಸಿ ತಮಗೆ ತಿಳಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಇಲ್ಲವೇ ಪುನರ್ ರಚನೆಯ ಬಗ್ಗೆಯೂ ಪ್ರತಿಕ್ರಿಯಿಸಿರುವ ಅವರು, ರಾಜ್ಯದ ಸ್ಥಿತಿ ಗತಿಗಳನ್ನು ಆಧರಿಸಿ ಮುಂದಿನ ಮೂರ್‍ನಾಲ್ಕು ದಿನಗಳಲ್ಲಿ ಏನು ಮಾಡಬೇಕು ಎಂದು ತೀರ್ಮಾನಿಸಲಿದ್ದಾರೆ ಎಂದಿದ್ದಾರೆ. ಸಂಪುಟ ವಿಸ್ತರಣೆ,ಪುನರ್ ರಚನೆ ಮತ್ತು ಸದ್ಯದಲ್ಲೇ ನಡೆಯಲಿರುವ ರಾಜ್ಯಸಭೆ, ವಿಧಾನಪರಿಷತ್ ಚುನಾವಣೆಗಳ ಬಗ್ಗೆಯೂ ಇಂದು ಚರ್ಚೆ ನಡೆಸಲಾಗಿದೆ ಎಂದರು ಸಿಎಂ.

ಈ ಬಗ್ಗೆ ಏನೇನು ಮಾಹಿತಿ ನೀಡಬೇಕೋ ನಾನು ನೀಡಿದ್ದೇನೆ. ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರೊಂದಿಗೆ ಮಾತನಾಡಿ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ ಎಂದರು. ಮುಂದಿನ ಮೂರ್‍ನಾಲ್ಕು ದಿನಗಳಲ್ಲಿ ಸಂಪುಟ ವಿಸ್ತರಣೆಯಾ ಪುನರ್ ರಚನೆಯ ಬಗ್ಗೆ ನಿರೀಕ್ಷಿಸಬಹುದೇ ಎಂದು ವರದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಯಾವಾಗ ಏನು ಬೇಕಾದರೂ ಆಗಬಹುದು ಎಂದು ಹೇಳಿದರು.

ಶಂಕಿತನ ಸಹೋದರ ಆತ್ಮಹತ್ಯೆ

ಈತ ಪರೀಕ್ಷೆಯಲ್ಲಿ ಅಕ್ರಮ ನಡೆಸಿರುವುದು ಬಯಲಾಗಿತ್ತು. ಏ.30ರಂದು ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸರು ತಮ್ಮ ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ. ಇತ್ತೀಚೆಗೆ ಪೊಲೀಸರು ಮನುಕುಮಾರ್‌ನನ್ನು ಊರಿಗೆ ಕರೆತಂದು ಸ್ಥಳ ಮಹಜರು ನಡೆಸಿ, ಬಂಧನ ಪ್ರಕ್ರಿಯೆ ನಡೆಸಿದ್ದರು. ತನ್ನ ತಮ್ಮ ಸಬ್ ಇನ್ಸ್‌ಪೆಕ್ಟರ್ ಆಗಬೇಕೆಂದು ವಾಸು, ಸುಮಾರು 40 ಲಕ್ಷ ರೂ.ಗಳಷ್ಟು ಸಾಲ ಮಾಡಿ ಕೊಟ್ಟಿದ್ದನೆಂದು ಹೇಳಲಾಗುತ್ತಿದ್ದು, ಆದರೆ ಸಹೋದರ ಸಬ್ ಇನ್ಸ್‌ಪೆಕ್ಟರ್ ಆಗಿ ಊರಿಗೆ ಬರುವ ಬದಲು ಆರೋಪಿಯಾಗಿ ಬಂದಿದ್ದನ್ನು ನೋಡಿ, ವಾಸು ಮನ ನೊಂದು ನಿನ್ನೆ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಮೃತ ವಾಸುವಿನ ಪತ್ನಿ ಪಲ್ಲವಿ ಹೇಳಿಕೆ ಪ್ರಕಾರ, ನನ್ನ ಪತಿ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಕೋವಿಡ್ ನಿಯಂತ್ರಣಕ್ಕೆ ಬಂದ ಹಿನ್ನೆಲೆಯಲ್ಲಿ ಕಳೆದ ಎರಡು ತಿಂಗಳ ಹಿಂದೆ ಸರ್ಕಾರ ಅವರನ್ನು ಕೆಲಸದಿಂದ ತೆಗೆದುಹಾಕಿತ್ತು. ಇದರಿಂದ ಅವರು ಮನೆಯಲ್ಲಿಯೇ ಇದ್ದರು. ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುತ್ತಿದ್ದಾರೆ.

ಮೃತ ವಾಸು ಅವರ ತಾಯಿ ಶಿವಮ್ಮ, ಸಬ್‌ಇನ್ಸ್‌ಪೆಕ್ಟರ್ ಹಗರಣಕ್ಕೂ ನನ್ನ ಮಗನ ಸಾವಿಗೂ ಸಂಬಂಧವಿಲ್ಲ. ಜೀವನ ನಿರ್ವಹಣೆಗೆ ಸಾಲ ಮಾಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ. ಮನುಕುಮಾರ್ ಪಿಎಸ್‌ಐ ಹಗರಣದಲ್ಲಿ ಓಎಂಆರ್ ಶೀಟ್ ತಿದ್ದಿರುವುದು ತನಿಖೆಯಿಂದ ದೃಢಪಟ್ಟಿರುವುದರಿಂದ ಅವರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಾಸು ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

ಮದ್ಯದ ಮತ್ತು!

ಈ ರಾಜ್ಯಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿ ಬೆಲೆ ಇಳಿಕೆ ನಿರ್ಧಾರ ಕೈಗೊಳ್ಳುತ್ತೇವೆ. ನಮ್ಮಲ್ಲಿ ಕಡಿಮೆ ಮತ್ತು ಮಧ್ಯಮ ದರ್ಜೆಯ ಮದ್ಯ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿದೆ. ಇದರಿಂದಲೇ ನಾವು ಪೂರ್ಣ ಆದಾಯ ನಿರೀಕ್ಷಿಸಲು ಸಾಧ್ಯವಾಗುತ್ತಿಲ್ಲ. ದುಬಾರಿ ಬೆಲೆಯ ಮದ್ಯ ಸೇವಿಸುವವರು ಹಣ ಜಾಸ್ತಿ ಎಂದು ಅದರ ಸೇವನೆಯನ್ನು ಕಡಿಮೆ ಮಾಡಿದ್ದಾರೆ. ಇಂಥ ವರ್ಗವನ್ನು ಮತ್ತೆ ಯಥಾಸ್ಥಿತಿಗೆ ತಂದು ಸರಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯ ತರಲು ಮುಂದಾಗಿದ್ದೇವೆ ಎಂದರು. ದುಬಾರಿ ಬೆಲೆಯ ವಿಸ್ಕಿ, ವೈನ್ ಸೇರಿ ವಿವಿಧ ಮದ್ಯದ ಉತ್ಪನ್ನಗಳ ಮೇಲಿನ ತೆರಿಗೆ ಇಳಿಕೆ ಮಾಡಿ ಮುಂದಿನ ಒಂದೆರಡು ತಿಂಗಳಿನಲ್ಲಿ ದರ ಕಡಿಮೆ ಮಾಡುವ ಬಗ್ಗೆ ನಿರ್ಧಾರ ಮಾಡುತ್ತೇವೆ. ಕರ್ನಾಟಕವನ್ನು ಮಾದರಿಯಾಗಿ ಇಟ್ಟುಕೊಂಡು ಪಶ್ಚಿಮ ಬಂಗಾಳ ಸರಕಾರ ಮದ್ಯದ ಮೇಲಿನ ತೆರಿಗೆ ಪ್ರಮಾಣವನ್ನು ಹೆಚ್ಚಳ ಮಾಡಿದ ಪರಿಣಾಮವಾಗಿ ಅದರ ಅಬಕಾರಿ ಆದಾಯ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದೆ. ಸತತ ಕಳೆದ ಕೆಲ ವರ್ಷಗಳಿಂದ ಅಬಕಾರಿ ಮೇಲೆ ತೆರಿಗೆ ವಿಧಿಸಿದ್ದರಿಂದ ಮದ್ಯದ ಬೆಲೆ ದುಬಾರಿಯಾಗಿದೆ. ನಾವು ಇದನ್ನು ಮನಗಂಡೇ ಕಳೆದ ಮುಂಗಡ ಪತ್ರದಲ್ಲಿ ಬೆಲೆ ಹೆಚ್ಚಳ ಮಾಡುವ ನಿರ್ಧಾರ ಕೈಗೊಳ್ಳಲಿಲ್ಲ.

'ದೇಶದ್ರೋಹ' ಕಾನೂನಿಗೆ ಸುಪ್ರೀಂ ತಡೆ

ಅಡಿಯಲ್ಲಿ ಪ್ರಕರಣ ದಾಖಲಿಸಿದ ಕಾರಣ ಜೈಲಿನಲ್ಲಿರುವವರು ಜಾಮೀನು ಪಡೆಯಲು ನ್ಯಾಯಾಲಯಗಳನ್ನು ಸಂಪರ್ಕಿಸಬಹುದು ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ಸೆಕ್ಷನ್ 124ಎ ಯ ಕಠಿಣತೆಗಳು ಪ್ರಸ್ತುತ ಪರಿಸ್ಥಿತಿಗೆ ಹೊಂದಿಕೆ ಯಾಗುವುದಿಲ್ಲ ಮತ್ತು ಇದು ದೇಶದ ವಸಾಹತುಶಾಹಿ ಕಾನೂನಿನಡಿಯಲ್ಲಿದ್ದ ಸಮಯಕ್ಕೆ ಉದ್ದೇಶಿಸಲಾಗಿತ್ತು ಎಂದು ಕೇಂದ್ರವು ಒಪ್ಪುತ್ತದೆ ಎಂಬುದು ಸ್ಪಷ್ಟವಾಗಿದೆ. ಹೀಗಾಗಿ, ಕೇಂದ್ರವು ಅದನ್ನು ಮರುಪರಿಶೀಲಿಸಬಹುದು ಎಂದು ಕೋರ್ಟ್ ಹೇಳಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124ಎ ಅಡಿಯಲ್ಲಿ ದೇಶದ್ರೋಹದ ಪ್ರಕರಣ ಗಳನ್ನು ದಾಖಲಿಸಲಾಗುತ್ತಿತ್ತು. ಇದಕ್ಕೆ ವ್ಯಾಪಕ ವಿರೋಧವೂ ವ್ಯಕ್ತವಾಗಿತ್ತು.

ಸಹಕರಿಸಿದ ಮುಡಾ ಅಧಿಕಾರಿಗಳು

ಸಂಬಂಧಿಸಿದಂತೆ 1981ರ ಜೂನ್ 25ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿ, ನಂತರ 1984ರ ಮಾರ್ಚ್ 31ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಆ ಪೈಕಿ ಸರ್ವೆ ನಂ.293ರ 1.38 ಎಕರೆ ಭೂಮಿಯು ಯುಎಲ್‌ಎ ಹೆಚ್ಚುವರಿ ನಗರಾಸ್ತಿ ಎಂದು ಘೋಷಿಸಿ 1985ರ ಸೆಪ್ಟೆಂಬರ್ 25ರಂದು ಅಂದಿನ ಡಿಸಿ ಆದೇಶಿಸಿದ್ದರು.

ಸದರಿ ಭೂಸ್ವಾಧೀನ ನಡಾವಳಿ ಪ್ರಶ್ನಿಸಿದ ಭೂ ಮಾಲೀಕರು ಸಲ್ಲಿಸಿದ್ದ ರಿಟ್ ಪಿಟೀಷನ್ ಅನ್ನು ರಾಜ್ಯ ಉಚ್ಚ ನ್ಯಾಯಾಲಯವು 2009ರ ಜನವರಿ 7ರಂದು ವಜಾಗೊಳಿಸಿದೆ. ನಂತರ ಸದರಿ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸುವಂತೆ 2011ರ ಮಾರ್ಚ್ 23ರಂದು ಆಯುಕ್ತರು ಆದೇಶಿಸಿದ್ದರಾದರೂ, ಮುಡಾ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಿನಕಲ್ ಸರ್ವೆ ನಂ.292/3ರಲ್ಲಿ 30 ಗುಂಟೆ, 293ರಲ್ಲಿ 1.38 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಲ್ಲ ಎಂದು ನಿರಾಕ್ಷೇಪಣಾ ಪತ್ರ ನೀಡಿರು ವುದು ದಾಖಲೆಗಳಿಂದ ದೃಢಪಟ್ಟಿದೆ ಎಂದು ಆಯುಕ್ತರು ತಮ್ಮ ಜ್ಞಾಪನದಲ್ಲಿ ತಿಳಿಸಿದ್ದಾರೆ.

> “ಅಧಿಸೂಚಿತ ಜಾಗದಲ್ಲಿ ಅನಧಿಕೃತವಾಗಿ ಸ್ವಾಧೀನದಲ್ಲಿರುವವರನ್ನು ಮುಂದಿನ ವಾರ ಕಾರ್ಯಾಚರಣೆ ನಡೆಸಿ ಸದರಿ ಹಿನಕಲ್ ಗ್ರಾಮದ ಸರ್ವೆ ನಂ. 292/3 ಮತ್ತು 293ಗೆ ಸೇರಿದ 2.28 ಎಕರೆ ಭೂಮಿಯನ್ನು ಪ್ರಾಧಿಕಾರದ ವಶಕ್ಕೆ ಪಡೆಯುತ್ತೇವೆ. ಈಗಾಗಲೇ ಈ ಹಿಂದಿನ ಆಯುಕ್ತರು ಜ್ಞಾಪನದಲ್ಲಿ ಪ್ರಸ್ತಾಪಿಸಿ ಅಗತ್ಯ ಕ್ರಮಕ್ಕೆ ಸೂಚನೆ ನೀಡಿರುವುದರಿಂದ ಮುಡಾ ಆಸ್ತಿ ಸಂರಕ್ಷಿಸುವುದು ನಮ್ಮ ಆದ್ಯ ಕರ್ತವ್ಯವಾಗಿದ್ದು, ಶೀಘ್ರ ಕ್ರಮ ವಹಿಸುತ್ತೇವೆ.
> –ಜಿ.ಟಿ.ದಿನೇಶ್‌ಕುಮಾರ್, ಮುಡಾ ಆಯುಕ್ತ

ಅದರಿಂದಾಗಿ ಎಂಆರ್–63/2006–07ರಂತೆ ಪ್ರಾಧಿಕಾರದ ಹೆಸರಿಗೆ ಇಂಡೀಕರಣವಾಗಿದ್ದು, ನಮೂದುಗಳನ್ನು ಎಸಿ ಕೋರ್ಟ್ ಆದೇಶದಂತೆ 2019ರ ಸೆಪ್ಟೆಂಬರ್ 23ರಂದು ಭೂ ಮಾಲೀಕರಾದ ಬಸಮ್ಮ ಮತ್ತು ಬಸವರಾಜು ಮತ್ತಿತರರ ಹೆಸರಿಗೆ ಜಂಟಿಯಾಗಿ ಖಾತೆ ವರ್ಗಾ ಯಿಸಲಾಗಿದೆ. ಭೂ ಸ್ವಾಧೀನ ನಡಾವಳಿಯಂತೆ ಭೂ ಪರಿಹಾರ ಹಣ ಪಡೆಯಲು ಮಾಲೀಕರಿಗೆ ಅವಕಾಶವಿದೆಯೇ ಹೊರತು, ಸ್ವತ್ತನ್ನು ಅಧಿಸೂಚನೆಯಿಂದ ಕೈಬಿಟ್ಟಿಲ್ಲ ಎಂಬುದು ಸ್ಪಷ್ಟವಾಗಿದ್ದಾಗ್ಯೂ ಸದರಿ ಭೂಮಿ ಸಂಬಂಧಗೊಂದಲ ಸೃಷ್ಟಿಸಿ, ಅಧಿಸೂಚಿತ ಭೂಮಿಯನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ ವರ್ಗಾವಣೆ ಮಾಡಿ ಅಕ್ರಮವೆಸಗಿರುವುದು ದೃಢಪಟ್ಟಿರುವುದರಿಂದ ತಕ್ಷಣವೇ ಕ್ರಮ ಕೈಗೊಂಡು ಮುಡಾ ವಶಕ್ಕೆ ಪಡೆಯಬೇಕೆಂದು ಆಯುಕ್ತರು ಆದೇಶಿಸಿದ್ದಾರೆ. ಅಲ್ಲದೇ ಮೇ 2ರಂದು ಬೆಳಗ್ಗೆ ಕಾರ್ಯಾಚರಣೆ ನಡೆಸಿ ಸದರಿ ಜಾಗದಲ್ಲಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ ಭೂಮಿಯನ್ನು ವಶಕ್ಕೆ ಪಡೆಯಬೇಕೆಂದು ಆಜ್ಞಾಪನವಾಗಿದ್ದರೂ, ಅಂದು ಸರ್ಕಾರ ಸಾರ್ವತ್ರಿಕ ರಜೆ ಘೋಷಿಸಿದ ಕಾರಣ ಅದು ಸಾಕಾರಗೊಳ್ಳಲಿಲ್ಲ ಎಂಬುದಾಗಿ ಮುಡಾ ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ. ಇದೀಗ ಆಯುಕ್ತರಾಗಿದ್ದ ಡಾ. ನಟೇಶ್ ವರ್ಗಾವಣೆಗೊಂಡಿರುವುದರಿಂದ ಈ ವಿಷಯವನ್ನೇ ಮರೆತಿರುವ ಅಧಿಕಾರಿಗಳು, ಖಾಸಗಿ ವ್ಯಕ್ತಿಗಳು ಆಸ್ತಿ ಕಬಳಿಸಲು ಅನುಕೂಲವಾಗುವಂತೆ ದಾಖಲೆಗಳನ್ನು ಮತ್ತೆ ಸೃಷ್ಟಿಸುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ.

ಜೀವನಶೈಲಿ ಬದಲಾವಣೆಯಿಂದ ಸಂಪನ್ಮೂಲ ಕ್ರೋಢೀಕರಿಸಬೇಕು

ಸಿಎಫ್‌ಟಿಆರ್‌ಐನಲ್ಲಿ 'ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ'ಯಲ್ಲಿ ಪ್ರೊ. ಚಿದಾನಂದಗೌಡ ಅಭಿಮತ



ಮೈಸೂರು, ಮೇ 11(ಎಂಕೆ)– ತಂತ್ರಜ್ಞಾನದ ಸದ್ಬಳಕೆಯ ಜೊತೆಗೆ ಮುಂದಿನ ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳುವ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ತಿಳಿಸಿದರು.

ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ(ಸಿಎಫ್‌ಟಿಆರ್‌ಐ)ನಲ್ಲಿ ಬುಧವಾರ ಆಯೋಜಿಸಿದ್ದ 'ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ' ಅಂಗವಾಗಿ 'ಹಸಿರು ತಂತ್ರಜ್ಞಾನ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ ಮತ್ತು ಬ್ಲಾಕ್‌ಚೈನ್' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಮುಂದಿನ 50 ವರ್ಷದಲ್ಲಿ ಉಂಟಾಗುವ ಶಕ್ತಿ, ನೀರು, ಆಹಾರ, ಪರಿಸರ ಇನ್ನಿತರೆ ನೈಸರ್ಗಿಕ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಮರುಚಿಂತನೆ, ಮರುಬಳಕೆ ಹಾಗೂ ಕಡಿಮೆ ಬಳಕೆ ಅತ್ಯಂತ ಅವಶ್ಯವಾಗಿದೆ ಎಂದು ತಿಳಿಹೇಳಿದರು.

ಸದಾ ಸಕಾರಾತ್ಮಕವಾಗಿ ಮೌಲ್ಯಯುತವಾಗಿರುವ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದು ಮುಖ್ಯವಾಗುತ್ತದೆ. ಅರಣ್ಯನಾಶದಿಂದಾಗಿ ಹವಾಮಾನದಲ್ಲಿ ಉಂಟಾಗಿರುವ ಬದಲಾವಣೆ ಕುರಿತು ವಿಶ್ವದ 15 ಸಾವಿರ ವಿಜ್ಞಾನಿಗಳು ಎಚ್ಚರಿಕೆಯ ನೋಟಿಸ್ ನೀಡಿದ್ದು, ಆಹಾರ ಪದಾರ್ಥಗಳ ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕಾಗಿದೆ ಎಂದು ತಿಳಿಸಿದ್ದಾರೆ. ಕ್ರಿಯೆ, ಖ್ಯಾತಿ ಮತ್ತು ನಂಬಿಕೆಯುಳ್ಳ ಬ್ಲಾಕ್‌ಚೈನ್ (ಪರಸ್ಪರ ಅವಲಂಬನೆ) ಮಾದರಿಯನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಸಿಎಫ್‌ಟಿಆರ್‌ಐನ ತಂತ್ರಜ್ಞಾನ ಬಳಕೆ ಮೂಲಕ ಉದ್ದಿಮೆ ಆರಂಭಿಸುತ್ತಿರುವ ಉದ್ಯಮಿಗಳಿಗೆ ತಂತ್ರಜ್ಞಾನ ಪರವಾನಗಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು. ಸಿಎಫ್‌ಟಿಆರ್‌ಐನ ತಂತ್ರಜ್ಞಾನ ವರ್ಗಾವಣೆ ಮತ್ತು ವ್ಯಾಪಾರ ಅಭಿವೃದ್ಧಿ ವಿಭಾಗದ ಮುಖ್ಯಸ್ಥ ಡಾ.ಬಿ.ವಿ.ಸತ್ಯೇಂದ್ರರಾವ್ ಮತ್ತಿತರರು ಉಪಸ್ಥಿತರಿದ್ದರು.

ಉಚಿತ ಸಿಇಟಿ ತರಬೇತಿ

ಮೈಸೂರು, ಮೇ 11 – ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ಮೈಸೂರು ನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಲಕ್ಷ್ಮೀಪುರಂನ ನಂಜುಮಳಿಗೆ ಸರ್ಕಲ್‌ನಲ್ಲಿರುವ ಗೋಪಾಲಸ್ವಾಮಿ ಶಿಶುವಿಹಾರದಲ್ಲಿ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿ ಗಾಗಿ ಮೇ 20 ರಿಂದ ಉಚಿತ ಸಿಇಟಿ ತರಬೇತಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 6360746358, 9900285550 ಮೂಲಕ ಸಂಪರ್ಕಿಸಬಹುದು.

ಒತ್ತಡ ನಿರ್ವಹಣಾ ಚಿಕಿತ್ಸಾ ಶಿಬಿರ

ಮೈಸೂರು, ಮೇ 11– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 21ರ ವರೆಗೆ ಒತ್ತಡ ನಿರ್ವಹಣಾ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 8722821894, 8086822405 ಸಂಪರ್ಕಿಸಬಹುದು.

ರಂಗಭೂಮಿಗಳ ನಡುವಿನ ತಾರತಮ್ಯ ನಿವಾರಣೆಯಾಗಬೇಕು

ಮೈಸೂರು, ಮೇ 11(ಜಿಎ)– ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ನಡುವಿನ ತಾರತಮ್ಯ ನಿವಾರಣೆಯಾಗಬೇಕು ಎಂದು ಬೆಂಗಳೂರು ವಿವಿ ಪ್ರದರ್ಶಕ ಕಲಾ ವಿಭಾಗದ ಅತಿಥಿ ಉಪನ್ಯಾಸಕ ಡಾ. ಪ್ರಭುರಾಜ ಅಭಿಪ್ರಾಯಪಟ್ಟಿದ್ದಾರೆ.

ಸಂಚಲನ ಮೈಸೂರು ತಂಡದ ವತಿಯಿಂದ ನಗರದ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಏರ್ಪಡಿಸಿರುವ ಸಂಚಲನ ರಂಗೋತ್ಸವದಲ್ಲಿ ಭಾಗವಹಿಸಿದ್ದ ಅವರು ಮಾತನಾಡುತ್ತಿದ್ದರು. ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ನಡುವಿನ ತಾರತಮ್ಯ ನಿವಾರಣೆಯಾಗಬೇಕು. ಹವ್ಯಾಸಿ ರಂಗಭೂಮಿಯವರು ನಾವೇ ನಾಟಕೋತ್ಸವ ಮಾಡುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅಲೆದು ಅನುದಾನ ಪಡೆಯುವ ಸ್ಥಿತಿ ಹೋಗಬೇಕು ಎಂದ ಅವರು, ಕನ್ನಡನಾಡಿನಲ್ಲಿ ಪ್ರಾದೇಶಿಕ ಭಾಷಾ ವೈವಿಧ್ಯತೆ ಇರುವುದರಿಂದ ಭಾಷಾ ಪ್ರಯೋಗದಲ್ಲಿ ಏರಿಳಿತಗಳಿವೆ. ಇದನ್ನೇ ದೊಡ್ಡದು ಮಾಡಬಾರದು. ಎಲ್ಲರೂ ಒಟ್ಟಾಗಿ ರಂಗಭೂಮಿಯ ಬೆಳವಣಿಗೆಗೆ ಶ್ರಮಿಸಬೇಕು ಎಂದರು.

ಮೊದಲು ಬೆಂಗಳೂರು ವಿವಿಯಲ್ಲಿ ಮಾತ್ರ ರಂಗಭೂಮಿಯ ಕೋರ್ಸ್ ಇತ್ತು. ಹೋರಾಟದ ನಂತರ ರಾಣಿಚೆನ್ನಮ್ಮ, ಶ್ರೀಕೃಷ್ಣದೇವರಾಯ, ಕಲಬುರಗಿ ಹಾಗೂ ಸಂಗೀತ ವಿವಿಯಲ್ಲಿ ಆರಂಭಿಸಲಾಗಿದೆ ಎಂದ ಅವರು, ವಿವಿಗಳು ರಂಗಭೂಮಿ ಕೋರ್ಸು ಆರಂಭ ಮಾಡುತ್ತವೆ. ಆದರೆ ಕೆಲವು ಹಿರಿಯ ರಂಗಕರ್ಮಿಗಳೇ ಸುಮ್ಮನಿರುವುದಿಲ್ಲ. ರಂಗಭೂಮಿಯ ಬಗ್ಗೆ ಅವರಿಗೇನು ಗೊತ್ತು? ಎಂದು ಕೊಂಕು ತೆಗೆದು ಅಡ್ಡಿಪಡಿಸುತ್ತಾರೆ ಎಂದು ಅವರು ವಿಷಾದಿಸಿದರು. ನಂತರ ಜೋಗಿ ಅವರ ವಿಶ್ವಾಮಿತ್ರ ಮೇನಕೆ ಡ್ಯಾನ್ಸ್ ಮಾಡೋದು ಏನಕೆ? ನಾಟಕ ಪ್ರದರ್ಶಿಸಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ವಕೀಲ ಪ್ರವೀಣ್, ಸಂಚಲನ ಮೈಸೂರು ಮುಖ್ಯಸ್ಥ ದೀಪಕ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಜೂ.3, ಪಿಂಚಣಿ ಅದಾಲತ್

ಮೈಸೂರು, ಮೇ 11– ಮೈಸೂರು ವಿಭಾಗ ಅಂಚೆ ಇಲಾಖೆಯ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಜೂ.3 ರಂದು ಬೆಳಗ್ಗೆ 11 ಗಂಟೆಗೆ ಪಿಂಚಣಿ ಅದಾಲತ್ ಏರ್ಪಡಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಅಹವಾಲುಗಳೇನಾದರೂ ಇದ್ದಲ್ಲಿ ಮೇ 27ರೊಳಗೆ ಸಲ್ಲಿಸಲು ಅವಕಾಶವಿರುತ್ತದೆ. ಆಸಕ್ತಿಯುಳ್ಳ ಪಿಂಚಣಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 15, ಕವಿಗೋಷ್ಠಿ

ಮೈಸೂರು, ಮೇ 11– ಮೈಸೂರಿನ ಅಭಿರುಚಿ ಬಳಗದ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಮೇ 15 ರಂದು ಬೆಳಗ್ಗೆ 11.30ಕ್ಕೆ 'ಕವಿಗೋಷ್ಠಿ' ಏರ್ಪಡಿಸಲಾಗಿದ್ದು, ಆಸಕ್ತ ಕವಿಗಳು 'ತಾಯಿ, ಬುದ್ಧ, ವ್ಯಾಸ ಪೂರ್ಣಿಮಾ' ವಿಷಯ ಕುರಿತು ಕವನ ವಾಚಿಸಲು ಮೇ 13ರ ಮಧ್ಯಾಹ್ನ 3 ಗಂಟೆಯೊಳಗೆ ಮೊ.ನಂ. 9845565238ಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಮೇ 11– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಮೇ 15 ರಂದು ಮಧ್ಯಾಹ್ನ 2 ರಿಂದ ಸಂಜೆ 6 ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ.

ಆಸಕ್ತಿಯುಳ್ಳವರು ಮೇ 14ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9972703737, 9686205346 ಸಂಪರ್ಕಿಸಬಹುದು.

ಚಾ.ನಗರ, ಹೆಬ್ಬಸೂರಿನಲ್ಲಿ ಶೃಂಗೇರಿ ಶ್ರೀಗಳಿಗೆ ಅದ್ಧೂರಿ ಸ್ವಾಗತ

ಚಾಮರಾಜನಗರ, ಮೇ 11(ಎಸ್‌ಎಸ್)– ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಬುಧವಾರ ಚಾಮರಾಜನಗರ ಮತ್ತು ಹೆಬ್ಬಸೂರು ಗ್ರಾಮಕ್ಕೆ ಆಗಮಿಸಿದಾಗ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಮೈಸೂರಿನಿಂದ ನಂಜನಗೂಡು ಮಾರ್ಗವಾಗಿ ಚಾಮರಾಜನಗರಕ್ಕೆ ಬುಧವಾರ ಸಂಜೆ ಆಗಮಿಸಿದ ಶ್ರೀಗಳನ್ನು ನಗರದ ಪಾಲಿಟೆಕ್ನಿಕ್ ಕಾಲೇಜಿನ ಮುಂಭಾಗ ಪೂರ್ಣಕುಂಭದೊಂದಿಗೆ ಬರಮಾಡಿಕೊಳ್ಳಲಾಯಿತು.

ನಂತರ ಶ್ರೀಗಳು ನಗರದ ಅಗ್ರಹಾರ ಬೀದಿಯಲ್ಲಿರುವ ಶ್ರೀಪಟ್ಟಾಭಿ ರಾಮ ಮಂದಿರಕ್ಕೆ ಭೇಟಿ ನೀಡಿದರು. ಈ ವೇಳೆ ಶ್ರೀಗಳು ದೀಪ ಬೆಳಗಿಸುವ ಮೂಲಕ ಪಟ್ಟಾಭಿರಾಮ ಮಂದಿರದ ಅಮೃತ ಮಹೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಹಾಜರಿದ್ದ ಭಕ್ತರಿಗೆ ಫಲ ಮಂತ್ರಾಕ್ಷತೆಯನ್ನು ನೀಡಿ ಆಶೀರ್ವದಿಸಿದರು.

ಹೆಬ್ಬಸೂರಿಗೆ ಭೇಟಿ: ಚಾಮರಾಜನಗರ ತಾಲೂಕಿನ ಹೆಬ್ಬಸೂರಿಗೆ ರಾತ್ರಿ ಆಗಮಿಸಿದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರನ್ನು ಮಂಗಳವಾದ್ಯ ಸಮೇತ ಪೂರ್ಣ ಕುಂಭದೊಂದಿಗೆ ಬರಮಾಡಿಕೊಳ್ಳಲಾಯಿತು. ನಂತರ ಧೂಳಿ ಪಾದಪೂಜೆ ನೆರವೇರಿಸಲಾಯಿತು. ಬಳಿಕ, ಶ್ರೀಗಳಿಂದ ಅನುಗ್ರಹ ಭಾಷಣ ನೆರವೇರಿತು. ಶ್ರೀಗಳು ಹೆಬ್ಬಸೂರಿನಲ್ಲಿಯೇ ವಾಸ್ತವ್ಯ ಹೂಡಿದರು. ನಾಳೆ (ಗುರುವಾರ) ಹೆಬ್ಬಸೂರಿನಲ್ಲಿ ಕುಂಭಾಭಿಷೇಕ ನಡೆಯಲಿದೆ.



ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ, ಶೃಂಗೇರಿ ಶಂಕರ ಮಠದ ಆಡಳಿತಾಧಿಕಾರಿ ಗೌರಿಶಂಕರ್, ಹೆಬ್ಬಸೂರು ಗ್ರಾಮದ ಶೃಂಗೇರಿ ಶಾಖಾ ಮಠದ ಧರ್ಮಾಧಿಕಾರಿ ಶ್ರೀಧರಪ್ರಸಾದ್, ಪೂರ್ವಾಶ್ರಮದ ಶ್ರೀಗಳವರ ತಂದೆ ಕುಪ್ಪ ಶಿವಸುಬ್ರಹ್ಮಣ್ಯ ಅವಧಾನಿ, ತಾತ ಕೊಪ್ಪ ರಾಮಗೋಪಾಲ ಸೋಮಯಾಜಿ, ಅಜ್ಜಿ ಕಲ್ಪಕಾಂಬ, ತಾಯಿ ಸೀತಾ, ನಾಗಲಕ್ಷ್ಮೀ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಜಿ.ಎಂ.ಹೆಗಡೆ, ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ನಾಗರಾಜು, ಶಂಕರ ತತ್ವ ಪ್ರಸಾರ ಅಭಿಯಾನ ಸುರೇಶ್ ಎನ್.ಋಗ್ವೇದಿ, ಮುಖಂಡರಾದ ಬಾಲಸುಬ್ರಹ್ಮಣ್ಯ, ವೆಂಕಟಶೇಷಪ್ಪ, ಭೋಜರಾಜ್, ಮಂಜುನಾಥ್ ಪ್ರಸಾದ್, ಸರಲಾಂಬ, ಅಂಬಮ್ಮ, ಕೇಶವಮೂರ್ತಿ, ಶ್ರೀಧರ್ ಉಪಸ್ಥಿತರಿದ್ದರು.

ತೆಂಗಿನ ಸಸಿಗಳ ಮಾರಾಟ

ಚಾಮರಾಜನಗರ, ಮೇ 11– ತೋಟಗಾರಿಕೆ ಇಲಾಖೆಯು ಜಿಲ್ಲೆಯ ರೈತರಿಗೆ ಸುವರ್ಣಾವತಿ ತೋಟಗಾರಿಕೆ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ಇಲಾಖೆ ದರದಲ್ಲಿ ಪ್ರತಿ ಗಿಡಕ್ಕೆ 75 ರೂ. ರಂತೆ ಮಾರಾಟ ಮಾಡಲಾಗುತ್ತಿದೆ.ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ತೆಂಗು ನಾಟಿ ಮಾಡಲು ಯೋಗ್ಯವಾಗಿರುತ್ತದೆ. ಜಿಲ್ಲೆಯ ರೈತರು ತೆಂಗಿನ ಸಸಿಗಳನ್ನು ಖರೀದಿಸಲು ಚಾಮರಾಜನಗರ ತೋಟಗಾರಿಕೆ ಇಲಾಖೆ ಅಥವಾ ಸುವರ್ಣಾವತಿ ತೋಟಗಾರಿಕೆ ಕ್ಷೇತ್ರದ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಸಂಪರ್ಕಿಸಬಹುದು. ಮಾಹಿತಿಗಾಗಿ ದೂ.ಸಂ. 08226–222142, 7975515269, 9380076380 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ನೇಮಕ



ಚಾಮರಾಜನಗರ, ಮೇ 11– ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಜಿಲ್ಲಾಧ್ಯಕ್ಷರಾಗಿ ವಿ.ನಾಗರಾಜು ನೇಮಕಗೊಂಡಿದ್ದಾರೆ.

ಯಳಂದೂರು ತಾಲೂಕಿನ ವೈ.ಕೆ.ಮೋಳೆ ಗ್ರಾಮದ ನಿವಾಸಿ ಹಾಗೂ ಪತ್ರಕರ್ತರಾದ ನಾಗರಾಜು ಅವರನ್ನು ಜಿಲ್ಲಾಧ್ಯಕ್ಷರಾಗಿ ನೇಮಕ ಮಾಡಿ ಸಂಘದ ರಾಜ್ಯಾಧ್ಯಕ್ಷ ಪಿ.ರಾಜು ಆದೇಶ ಹೊರಡಿಸಿದ್ದಾರೆ. ನೊಂದಾಯಿತ ಕಟ್ಟಡ ಕಾರ್ಮಿಕರ ಕುಂದು–ಕೊರತೆಗಳನ್ನು ಆಲಿಸಿ ಕೇಂದ್ರ ಸಂಘದ ಗಮನಕ್ಕೆ ತಂದು ಕಾರ್ಮಿಕರು ಹಾಗೂ ಕಾರ್ಮಿಕ ಇಲಾಖೆಗೆ ಸೇತುವೆಯಾಗಿ ಕೆಲಸ ನಿರ್ವಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ನಾಳೆ ಚಾ.ನಗರಕ್ಕೆ ಚಾಮರಾಜೇಶ್ವರಸ್ವಾಮಿ ನೂತನ ರಥ ಆಗಮನ

ಚಾಮರಾಜನಗರ, ಮೇ 11– ಇತಿಹಾಸ ಪ್ರಸಿದ್ಧ ಚಾಮರಾಜನಗರದ ಶ್ರೀ ಚಾಮರಾಜೇಶ್ವರ ನೂತನ ರಥವು ಮೇ 13 ರಂದು ನಗರಕ್ಕೆ ಆಗಮನವಾಗಲಿದೆ.

ರಥದ ಆಗಮನದ ಹಿನ್ನೆಲೆಯಲ್ಲಿ ಬುಧವಾರ ಚಾಮರಾಜೇಶ್ವರ ದೇವಾಸ್ಥಾನದ ಆವರಣದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಹೊಸ ರಥದ ಮೆರವಣಿಗೆ ಇನ್ನಿತರ ಧಾರ್ಮಿಕ ಕೈಂಕರ್ಯಗಳ ಕುರಿತು ವಿವರವಾಗಿ ಚರ್ಚಿಸಲಾಯಿತು. ಜಿಲ್ಲೆಯ ಎಲ್ಲಾ ಜನತೆಗೂ ಮುಕ್ತ ಆಹ್ವಾನ ನೀಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಭೆಯಲ್ಲಿ ಮನವಿ ಮಾಡಲಾಯಿತು.



ಕಲಾ ತಂಡಗಳೊಂದಿಗೆ ಸ್ವಾಗತ: ಹೊಸ ರಥವು ಬೆಂಗಳೂರಿನ ಕಾಮಾಕ್ಷಿ ಪಾಳ್ಯದಲ್ಲಿ ನಿರ್ಮಾಣವಾಗಿದ್ದು, ಅಲ್ಲಿ ಮೇ 12 ರಂದು ಪೂಜೆ ಸಲ್ಲಿಸಿ, ಬಳಿಕ ರಥವು ಹೊರಡಲಿದೆ. ಮೇ 13ರಂದು ಬೆಳಗ್ಗೆ 9 ಗಂಟೆಗೆ ಚಾಮರಾಜನಗರದ ಆದಿಶಕ್ತಿ ದೇವಸ್ಥಾನದ ಬಳಿ ರಥ ಆಗಮಿಸಲಿದೆ. ಈ ವೇಳೆ ರಥಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸೇರಿದಂತೆ ನಗರಸಭೆಯ ಜನಪ್ರತಿನಿಧಿಗಳು, ಇತರೆ ಜನಪ್ರತಿನಿಧಿಗಳು ಪೂಜೆ ಸಲ್ಲಿಸಲಿದ್ದಾರೆ.

ಬಳಿಕ ವಿವಿಧ ಕಲಾತಂಡಗಳೊಡನೆ ರಥವು ಸಂತೇಮರಹಳ್ಳಿ ವೃತ್ತ ಡಿವಿಯೇಷನ್ ರಸ್ತೆ, ಪಚ್ಚಪ್ಪ ವೃತ್ತ (ಜೈ ಭುವನೇಶ್ವರಿ ವೃತ್ತ) ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಗುಂಡ್ಲುಪೇಟೆ ವೃತ್ತ, ಚಿಕ್ಕ ಅಂಗಡಿ ಬೀದಿ ಮೂಲಕ ಸಾಗಿ ದೇವಾಲಯದ ಸುತ್ತಲು ಪ್ರದಕ್ಷಿಣೆ ಹಾಕಿದ ನಂತರ ದೇವಸ್ಥಾನದ ಆವರಣದಲ್ಲಿ ರಥವನ್ನು ನಿಲ್ಲಿಸಲಾಗುತ್ತದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಸಭೆಯಲ್ಲಿ ಮುಖಂಡರಾದ ದುಗ್ಗಟ್ಟಿ ವೀರಭದ್ರಪ್ಪ, ಸುರೇಶ್ ನಾಯಕ, ಶ್ರೀನಿವಾಸ ಗೌಡ, ನಾಗರಾಜ್ ದೀಕ್ಷಿತ್, ರಾಮಕೃಷ್ಣ ಭಾರದ್ವಾಜ್, ರಾಜ್‌ಗೋಪಾಲ್, ಸಿ.ಎಂ. ಬಂಗಾರಸ್ವಾಮಿ, ಜಯಕುಮಾರ್, ಶ್ರೀನಿವಾಸ ಶೆಟ್ಟಿ, ವೆಂಕಟನಾಗಪ್ಪಶೆಟ್ಟಿ (ಬಾಬಣ್ಣ), ಚಿನ್ನಸ್ವಾಮಿ, ಮಹೇಶ್, ಮಾದಣ್ಣ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ರಾಜಣ್ಣ, ಮುಖಂಡರು, ಯಜಮಾನರು ಉಪಸ್ಥಿತರಿದ್ದರು

ವೃತ್ತಿಯಲ್ಲಿ ನೈಪುಣ್ಯತೆ ಸಾಧಿಸಲು ಶಾಸಕರ ಸಲಹೆ

ಕೊಳ್ಳೇಗಾಲ, ಮೇ 11– ಪಟ್ಟಣದ ಸವಿತಾ ಸಮಾಜ ಸಮುದಾಯ ಭವನದಲ್ಲಿ ಇತ್ತೀಚೆಗೆ ಬೆಂಗಳೂರಿನ ಯುವಚೇತನ ಸೇವಾ ಸಂಸ್ಥೆ ಹಾಗೂ ಕೊಳ್ಳೇಗಾಲ ತಾಲೂಕು ಸವಿತಾ ಸಮಾಜದಿಂದ ಕ್ಷೌರಿಕ ವೃತ್ತಿ ನೈಪುಣ್ಯ ತರಬೇತಿ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರಕ್ಕೆ ಚಾಲನೆ ನೀಡಿದ ಶಾಸಕ ಎನ್.ಮಹೇಶ್ ಮಾತನಾಡಿ, ಸಮಾನತೆಯ ಹರಿಕಾರ ಶ್ರೀಬಸವೇಶ್ವರರ ಜಯಂತಿ ಅಂಗವಾಗಿ ತಾಲೂಕು ಸವಿತಾ ಸಮಾಜದಿಂದ ಹಮ್ಮಿಕೊಂಡಿರುವ ವೃತ್ತಿ ನೈಪುಣ್ಯತೆ ಕಾರ್ಯಾಗಾರವು ಅತ್ಯಂತ ಅರ್ಥಪೂರ್ಣವಾಗಿದೆ. ಬದಲಾದ ಕಾಲಘಟ್ಟಕ್ಕೆ ಪೂರಕವಾಗಿ ವೃತ್ತಿ ನೈಪುಣ್ಯತೆ ಸಾಧಿಸುವ ಮೂಲಕ ಕಾಯಕಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂದರು.

ಸವಿತಾ ಸಮಾಜದ ತಾಲೂಕು ಅಧ್ಯಕ್ಷ ಹಾಗೂ ನಗರಸಭೆ ನಾಮ ನಿರ್ದೇಶಿತ ಸದಸ್ಯ ಸೋಮಣ್ಣ ಮಾತನಾಡಿ, ಬಂಡವಾಳ ಶಾಹಿಗಳಿಂದ ನಮ್ಮ ವೃತ್ತಿಗೆ ತುಂಬಲಾರದ ನಷ್ಟ ಉಂಟಾಗುತ್ತಿದ್ದು, ಸಮುದಾಯದ ಯುವಕರಿಗೆ ಉತ್ತಮವಾದ ತರಬೇತಿ ನೀಡಿ, ಅವರು ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುವುದನ್ನು ತಪ್ಪಿಸಲು ವಿಶೇಷ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.



ಕಾರ್ಯಾಗಾರದಲ್ಲಿ ಹೇರ್ ಕಲರಿಂಗ್, ಫೇಸ್ ವಾಷಿಂಗ್, ಮೆನ್ ಹೇರ್ ಕಟ್, ಬಿಸಿನೆಸ್ ಡೆವಲಪ್ ಮೆಂಟ್ ಮುಂತಾದ ವಿಷಯ ಕುರಿತು ಪ್ರಾಯೋಗಿಕವಾಗಿ ತಿಳಿಸಿ ಕೊಡಲಾಯಿತು. ಈ ವೇಳೆ ನಗರಸಭೆ ಅಧ್ಯಕ್ಷೆ ಸುಶೀಲಾ ಶಾಂತರಾಜು, ಸವಿತಾ ಸಮಾಜದ ಜಿಲ್ಲಾ ಅಧ್ಯಕ್ಷ ಚಿನ್ನಸ್ವಾಮಿ, ಯಳಂದೂರು ತಾಲೂಕು ಅಧ್ಯಕ್ಷ ಪಿ.ಶ್ರೀಕಂಠಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಮಹದೇವಶೆಟ್ಟಿ, ಕೊಳ್ಳೇಗಾಲ ತಾಲೂಕು ಸವಿತಾ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ದೊಡ್ಡತಾಯಮ್ಮ, ಕಾರ್ಯದರ್ಶಿ ಮಹೇಶ್ವರಿ, ಮುಖಂಡರಾದ ಹನೂರು ರಾಜು, ಸಿದ್ದರಾಜು, ಮಹೇಶ್, ಸುರೇಶ್, ನಾಗಣ್ಣ, ಮುತ್ತುರಾಜು, ಮಹೇಶ್, ರಾಚಪ್ಪ, ಮಂಜುನಾಥ್, ರವೀಂದ್ರ, ಗಿರೀಶ್ ಹಾಜರಿದ್ದರು.

ಪಿಎಸ್‌ಐ ಪರೀಕ್ಷೆ ಹಗರಣ: ಯೂತ್ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಶರತ್ ರಾಮಣ್ಣ ಸಿಐಡಿ ವಶಕ್ಕೆ

ಮಂಡ್ಯ,ಮೇ.11(ಮೋಹನ್‌ರಾಜ್)–ಪಿಎಸ್‌ಐ ಪರೀಕ್ಷೆ ಹಗರಣ ಇದೀಗ ಮಂಡ್ಯ ಜಿಲ್ಲೆಗೂ ಕಾಲಿಟ್ಟಿದ್ದು, ಹಗರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ನಾಗಮಂಗಲ ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆಪ್ತ ಶರತ್ ರಾಮಣ್ಣನನ್ನು ಸಿಐಡಿ ವಶಕ್ಕೆ ಪಡೆದಿದೆ.



ಪಿಎಸ್‌ಐ ಕೆಲಸದ ವಿಚಾರದಲ್ಲಿ ಮಧ್ಯವರ್ತಿಯಾಗಿದ್ದ ಆರೋಪ ಎದುರಿಸುತ್ತಿದ್ದ ಶರತ್‌ನನ್ನು ಸ್ಥಳೀಯ ಪೊಲೀಸರಿಗೆ ಯಾವುದೇ ಮಾಹಿತಿ ನೀಡದೇ ನಾಗಮಂಗಲಕ್ಕೆ ಬಂದಿದ್ದ ಸಿಐಡಿ ಅಧಿಕಾರಿಗಳು ನಾಗಮಂಗಲದ ನಿವಾಸದಲ್ಲೇ ವಶಕ್ಕೆ ಪಡೆದಿದ್ದಾರೆ.

ಪಿಎಸ್‌ಐ ಉದ್ಯೋಗ ಕೊಡಿಸುವ ನೆಪದಲ್ಲಿ ವ್ಯಕ್ತಿಯೊಬ್ಬರ ಬಳಿ ಹಣ ಸ್ವೀಕರಿಸಿದ್ದ ಎಂಬ ಆರೋಪ ಶರತ್ ಮೇಲೆ ಕೇಳಿ ಬಂದಿತ್ತು. ಈ ಬಗ್ಗೆ ಸಿಐಡಿ ಅಧಿಕಾರಿಗಳು ಸೋಮವಾರ ಬೆಳಗ್ಗೆ ಶರತ್ ನಿವಾಸಕ್ಕೆ ಆಗಮಿಸಿ ಕೆಲ ಹೊತ್ತು ವಿಚಾರಣೆ ನಡೆಸಿ, ವಶಕ್ಕೆ ಪಡೆದು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ ಎನ್ನಲಾಗಿದೆ. ಆದರೆ ಎರಡು ದಿನಗಳಿಂದ ಶರತ್ ನಾಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಇಂದು ಸ್ನೇಹಿತರು ಅವರ ನಿವಾಸದ ಬಳಿ ಹೋಗಿ ವಿಚಾರಿಸಿದಾಗ ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿರುವುದು ಬೆಳಕಿಗೆ ಬಂದಿದೆ.

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಶರತ್, ಕಾಂಗ್ರೆಸ್ ನಾಯಕರ ಜೊತೆಗೆ ತೆಗೆಸಿಕೊಂಡಿರುವ ಫೋಟೋಗಳು ಸಹ ವೈರಲ್ ಆಗಿದ್ದು, ಇತ್ತೀಚೆಗೆ ಹಗರಣದಲ್ಲಿ ಸಚಿವ ಅಶ್ವತ್ಥ್ ನಾರಾಯಣ್ ಸಹೋದರ ಭಾಗಿಯಾಗಿದ್ದಾನೆ ಎಂದು ಆರೋಪ ಮಾಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಕಾಂಗ್ರೆಸ್ ಮುಖಂಡರೇ ಹಗರಣದಲ್ಲಿ ಬಂಧನವಾಗುತ್ತಿರುವುದು ಮುಜುಗರಕ್ಕೀಡಾಗುವಂತೆ ಮಾಡಿದೆ.

ಗಂಜಾಂ ಶ್ರೀ ನಿಮಿಷಾಂಬದೇವಿ ವರ್ಧಂತೋತ್ಸವ, ವಿಶೇಷ ಪೂಜೆ



ಶ್ರೀರಂಗಪಟ್ಟಣ, ಮೇ 11(ವಿನಯ್ ಕಾರೇಕುರ)– ಪಟ್ಟಣದ ಗಂಜಾಂ ಗ್ರಾಮದಲ್ಲಿರುವ ಐತಿಹಾಸಿಕ ಆದಿದೇವತೆ ನಿಮಿಷಾಂಬ ದೇವಿಯ ಜಯಂತ್ಯೋತ್ಸವ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದರು. ಅಮ್ಮನವರ ಜಯಂತ್ಯೋತ್ಸವದ ಅಂಗವಾಗಿ ದೇವಾಲಯದಲ್ಲಿ ವಿಶೇಷ ಪೂಜೆ, ಹೋಮಗಳು ನಡೆದು ದೇವಾಲಯ ಸೇರಿದಂತೆ ದೇವಿಗೆ ವಿಶೇಷವಾಗಿ ಹೂವಿನ ಅಲಂಕಾರ, ದೀಪಾಲಂಕಾರ ಇತರ ಸೇವೆಗಳು ನಡೆದವು. ಬೆಳಗ್ಗೆ 8ಕ್ಕೆ ಮಹಾ ಸಂಕಲ್ಪ, ಕಲಶ ಸ್ಥಾಪನೆ, ಸಪ್ತಶತಿ ಪಾರಾಯಣ, ಕಲಶ ಪೂಜೆಯಿಂದ ಪ್ರಾರಂಭಗೊಂಡು ನಿಮಿಷಾಂಬ ಹೋಮ ಪೂರ್ಣಾಹುತಿಯೊಂದಿಗೆ 121 ಕಲಶಗಳ ಮಹಾಭಿಷೇಕ ಕಾರ್ಯಕ್ರಮ ನಡೆಯಿತು.

ಉಪವಿಭಾಗಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ ನೇತೃತ್ವದಲ್ಲಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಸೇರಿ ಅಧಿಕಾರಿ ವರ್ಗ ಈ ಕಾರ್ಯಕ್ರಮಗಳ ಉಸ್ತುವಾರಿ ವಹಿಸಿಕೊಂಡು ವಿವಿಧ ಪೂಜೆಯಲ್ಲಿ ಪಾಲ್ಗೊಂಡಿದ್ದರು. ದೇವಿಯ ದರ್ಶನಕ್ಕೆ ಆಗಮಿಸಿದ ಭಕ್ತರಿಗೆ ದೇವಾಲಯದ ವತಿಯಿಂದ ಪ್ರಸಾದ ವಿತರಣಾ ಕಾರ್ಯ ನಡೆಸಲಾಯಿತು.

ನಂತರ ಸಂಜೆ ದಕ್ಷಿಣ ಗಂಗೆ ಕಾವೇರಿ ಮಹಾಮಂಗಳಾರತಿ, ಪ್ರಾಕಾರೋತ್ಸವ ಸೇವೆಗಳು ವೈಭವಯುತವಾಗಿ ಜರುಗಿ ಭಕ್ತರು ವಿಶೇಷ ದರ್ಶನ ಪಡೆದರು. ವಿವಿಧ ಜನಪ್ರತಿನಿಧಿಗಳು ಹಾಗೂ ಉನ್ನತ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು. ದೇವಸ್ಥಾನವನ್ನು ವಿದ್ಯುದ್ದೀಪ ಹಾಗೂ ಹೂಗಳಿಂದ ಅಲಂಕರಿಸಲಾಗಿತ್ತು.

ಮಂಡ್ಯ ಪ್ರಧಾನ ಜಿಲ್ಲಾ, ಸತ್ರ ನ್ಯಾಯಾಧೀಶರಾಗಿ ಬಿ.ಜಿ.ರಮಾ ನೇಮಕ



ಮಂಡ್ಯ, ಮೇ 11– ಮಂಡ್ಯ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಪಿ. ವಸ್ತ್ರಮಠ ಅವರು ಕರ್ನಾಟಕ ರಾಜ್ಯ ಮೇಲ್ಮನವಿ ಪ್ರಾಧಿಕಾರಕ್ಕೆ ವರ್ಗಾವಣೆ ಹೊಂದಿದ್ದು, ತೆರವಾದ ಮಂಡ್ಯ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಸ್ಥಾನಕ್ಕೆ ಬಿ.ಜಿ. ರಮಾರವರು ನೇಮಕಗೊಂಡಿದ್ದಾರೆ.

ಸದರಿ ಅವರು ಈ ಹಿಂದೆ ರಾಮನಗರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಇಂದು ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

ಮಂಡ್ಯ, ಮೇ 11– ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ 20 ಅಂಶ ಕಾರ್ಯಕ್ರಮವು ಸೇರಿದಂತೆ 2021–22ನೇ ಸಾಲಿನ ಮಾರ್ಚ್ 2022 ರ ಅಂತ್ಯದವರೆಗಿನ ಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯನ್ನು ಮೇ 12 ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಎ.ಸಿ.ಶ್ರೀಕಂಠಯ್ಯ 25ನೇ ಪುಣ್ಯಸ್ಮರಣೆ

ಶ್ರೀರಂಗಪಟ್ಟಣ, ಮೇ 11(ವಿನಯ್ ಕಾರೇಕುರ)– ಸಮಾಜ ಮುಖಿ ಕೆಲಸಗಳಿಂದ ಮನೆ ಮಾತಾಗಿ, ನೇರ ನುಡಿಯಿಂದಲೇ ಹೆಸರುವಾಸಿಯಾದ ದಿವಂಗತ ಎ.ಸಿ. ಶ್ರೀಕಂಠಯ್ಯ ಅವರ 25ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಅಭಿಮಾನಿ ಬಳಗದವರು ಪಟ್ಟಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಣೆ ಕಾರ್ಯಕ್ರಮ ಸೇರಿ ಇನ್ನಿತರ ಕಾರ್ಯಕ್ರಮಗಳು ನಡೆಯಲಿವೆ ಎಂದು ಎ.ಸಿ.ಶ್ರೀಕಂಠಯ್ಯನವರ ಅಭಿಮಾನಿ ಬಳಗದ ಅಶೋಕ್ ತಿಳಿಸಿದ್ದಾರೆ.



ಕೊರೊನಾ ಹೆಸರಲ್ಲಿ ಬಿಜೆಪಿಯಿಂದ ಲೂಟಿ

ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ನಲಪಾಡ್ ಆರೋಪ

ಮಂಡ್ಯ,ಮೇ 11(ಮೋಹನ್‌ರಾಜ್)– ಕೊರೊನಾದಿಂದ ಮೃತಪಟ್ಟವರ ಹೆಣಗಳ ಮೇಲೆಯೂ ಬಿಜೆಪಿ ರಾಜಕಾರಣ ಮಾಡುತ್ತಿದ್ದು, ಕೇಂದ್ರ ಸರ್ಕಾರ ಕೊರೊನಾದಿಂದ 4.7 ಲಕ್ಷ ಮಂದಿ ಮೃತಪಟ್ಟಿದ್ದಾರೆ ಎಂದು ಮಾಹಿತಿ ನೀಡಿದೆ. ಆದರೆ ಡಬ್ಲ್ಯೂಹೆಚ್‌ಓ ಪ್ರಕಾರ ಭಾರತದಲ್ಲಿ 47 ಲಕ್ಷ ಮಂದಿ ಮೃತಪಟ್ಟಿದ್ದು, ಕೇಂದ್ರ ಸರ್ಕಾರ ಈ ಬಗ್ಗೆಯೂ ತಪ್ಪು ಮಾಹಿತಿ ನೀಡುವ ಮೂಲಕ ಇಡೀ ದೇಶದ ಜನರ ದಿಕ್ಕನ್ನು ತಪ್ಪಿಸಿದೆ ಎಂದು ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಹಮ್ಮದ್ ನಲಪಾಡ್ ಸರ್ಕಾರದ ವಿರುದ್ಧ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2 ವರ್ಷದಿಂದ ಇಡೀ ದೇಶ ಕೊರೊನಾದಿಂದ ಬಳಲಿ ಹೋಗಿದೆ. ಯುವ ಸಮುದಾಯ ಉದ್ಯೋಗಗಳನ್ನು ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಕೊರೊನಾದಿಂದ ಮೃತಪಟ್ಟವರಿಗೆ ಪರಿಹಾರ ನೀಡಬೇಕಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಬಿಜೆಪಿ ತಪ್ಪು ಮಾಹಿತಿ ನೀಡಿದೆ. ಕೊರೊನಾ ಸಂದರ್ಭ ಮಾಸ್ಕ್ ಸೇರಿದಂತೆ ಇತರ ಪರಿಕರಗಳ ಖರೀದಿಯಲ್ಲಿಯೂ ಭ್ರಷ್ಟಾಚಾರ ನಡೆಸಿದೆ. ಸಾವಿರಾರು ಕೋಟಿ ರೂ.ಗಳನ್ನು ಲೂಟಿ ಮಾಡಿದೆ ಎಂದು ದೂರಿದರು.



ರಾಜ್ಯದಲ್ಲಿ ಕೊರೊನಾ ಹಿನ್ನೆಲೆಯಲ್ಲಿ 40 ಸಾವಿರ ಮಂದಿ ಮೃತಪಟ್ಟಿದ್ದು, ಮೃತರ ಕುಟುಂಬಗಳಿಗೆ ಸರ್ಕಾರ ಪರಿಹಾರವನ್ನು ಸರಿಯಾಗಿ ವಿತರಿಸದೆ ತಾರತಮ್ಯ ನೀತಿ ಅನುಸರಿಸುತ್ತಿದೆ. ಅಲ್ಲದೆ ಸಾವಿನ ಮಾಹಿತಿಯನ್ನು ರಾಜ್ಯ ಸರ್ಕಾರ ಸರಿಯಾಗಿ ನೀಡುತ್ತಿಲ್ಲ. ಕೊರೊನಾದಿಂದ ಸಾವನ್ನಪ್ಪಿದವರ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡುವವರೆಗೂ ಹೋರಾಟ ನಡೆಸಲಾಗುತ್ತದೆಂದು ತಿಳಿಸಿದರು.

ಪಿಎಸ್‌ಐ ನೇಮಕಾತಿ ಪ್ರಕರಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಹೆಸರು ಕೇಳಿಬಂದಿದ್ದು, ಯಾರೇ ತಪ್ಪು ಮಾಡಿದರೂ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಆದರೆ ಈ ಹಗರಣದಲ್ಲಿ ಬಿಜೆಪಿಯ ಶಾಸಕರು ಮತ್ತು ಸಚಿವರು ಪಾಲ್ಗೊಂಡಿರುವ ಆರೋಪಗಳು ಕೇಳಿ ಬರುತ್ತಿದ್ದು, ಅವರ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು. ಗೃಹ ಸಚಿವ ಅರಗಜ್ಞಾನೇಂದ್ರ ಅರ್ಧಂಬರ್ಧ ಜ್ಞಾನವಿರುವ ಜ್ಞಾನೇಂದ್ರ. ಪಿಎಸ್‌ಐ ಹಗರಣದ ಬಗ್ಗೆ ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದು, ಅವರು ಜ್ಞಾನವಿರದ ಜ್ಞಾನೇಂದ್ರ ಆಗಿದ್ದಾರೆ ಎಂದು ಗೇಲಿ ಮಾಡಿದರು. ಗೋಷ್ಠಿಯಲ್ಲಿ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಐಶ್ವರ್ಯ, ಕಾಂಗ್ರೆಸ್ ಮುಖಂಡರಾದ ಗಣಿಗ ರವಿಕುಮಾರ್, ಸಿ.ಡಿ.ಗಂಗಾಧರ್, ವಿಜಯ್‌ಕುಮಾರ್, ಅಂಜನಾ ಶ್ರೀಕಾಂತ್, ನಹೀಮ್, ರಶ್ಮಿ, ರುದ್ರಪ್ಪ, ಸಿದ್ದರಾಮೇಗೌಡ ಇತರರಿದ್ದರು.

ಸ್ಮಶಾನ ಜಾಗ ಕ್ರಿಕೆಟ್ ಸಂಸ್ಥೆಗೆ ನೀಡಿದರೆ ರಾಜ್ಯ ಮಟ್ಟದ ಹೋರಾಟ

ಬಹುಜನ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಮೊಣ್ಣಪ್ಪ ಎಚ್ಚರಿಕೆ

ಮಡಿಕೇರಿ, ಮೇ 11– ಹೊದ್ದೂರು ಗ್ರಾಪಂ ವ್ಯಾಪ್ತಿಯ ಪಾಲೇಮಾಡುವಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೀಮಿತವಾದ 2 ಎಕರೆ ಸ್ಮಶಾನ ಜಾಗವನ್ನು ಯಥಾಸ್ಥಿತಿ ಕಾಯ್ದುಕೊಳ್ಳಬೇಕು. ಒಂದು ವೇಳೆ ಕ್ರಿಕೆಟ್ ಸಂಸ್ಥೆಗೆ ನೀಡಿದ್ದೇ ಆದಲ್ಲಿ ರಾಜ್ಯ ಮಟ್ಟದಲ್ಲಿ ಬೃಹತ್ ಹೋರಾಟವನ್ನು ರೂಪಿಸಬೇಕಾಗುತ್ತದೆ ಎಂದು ಬಹುಜನ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಮೊಣ್ಣಪ್ಪ ಎಚ್ಚರಿಕೆ ನೀಡಿದ್ದಾರೆ.

ಪಾಲೇಮಾಡುವಿನಲ್ಲಿ ಕಳೆದ 3 ದಿನಗಳಿಂದ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಪಾಲೇಮಾಡು ನಿವಾಸಿಗಳ ಸ್ವಾಧೀನದಲ್ಲಿರುವ ಸ್ಮಶಾನದ ಜಾಗವನ್ನು, ಜಿಲ್ಲಾಡಳಿತ ಏಕಾಏಕಿ ಕ್ರಿಕೆಟ್ ಸಂಸ್ಥೆಗೆ ನೀಡುವ ಮೂಲಕ ಬಡವರ ಆಸ್ತಿಯನ್ನು ಕಿತ್ತುಕೊಂಡಿದೆ. ಜೆಸಿಬಿ ಯಂತ್ರವನ್ನು ಬಳಸಿ ಸ್ಮಶಾನವನ್ನು ನಾಶ ಮಾಡುವ ಪ್ರಯತ್ನ ಮಾಡಲಾಗಿದೆ ಎಂದು ಆರೋಪಿಸಿದರು.

2009ರಲ್ಲಿ ಹೊದ್ದೂರು ಪಾಲೇಮಾಡು ಕಾನ್ಶಿರಾಂ ನಗರದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಮಂಜೂರಾದ 2 ಎಕರೆ ಸ್ಮಶಾನ ಜಾಗವನ್ನು ತಕ್ಷಣ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಅವರು, ಅಧಿಕಾರಿಗಳ ನಡೆ ಖಂಡನೀಯವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಮಶಾನ ಜಾಗ ನೀಡುವ ಕುರಿತು ಭರವಸೆ ನೀಡಬೇಕು. ತಪ್ಪಿದಲ್ಲಿ ರಾಜ್ಯ ಮಟ್ಟದ ಹೋರಾಟ ರೂಪಿಸಲಾಗುವುದೆಂದು ತಿಳಿಸಿದ ಮೊಣ್ಣಪ್ಪ, ಮುಂದೆ ಆಗುವ ಕಷ್ಟ, ನಷ್ಟಗಳಿಗೆ ಜಿಲ್ಲಾಡಳಿತವೇ ನೇರ ಹೊಣೆಯಾಗಬೇಕಾಗುತ್ತದೆ ಎಂದರು.



ಹೊದ್ದೂರು ಗ್ರಾಪಂ ಅಧ್ಯಕ್ಷೆ ಕುಸುಮಾವತಿ ಮಾತನಾಡಿ, ಸ್ಮಶಾನದ ಜಾಗಕ್ಕಾಗಿ ನ್ಯಾಯಯುತ ಹೋರಾಟ ನಡೆಸಿದ ನಮ್ಮನ್ನು ಕಾನೂನು ಬಾಹಿರವಾಗಿ ಬಂಧಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಾಲೇಮಾಡಿನ ನಿವಾಸಿಗಳು ಕಳೆದ 3 ದಿನಗಳಿಂದ ಕೂಲಿ ಕೆಲಸದಿಂದಲೇ ಜೀವನ ಸಾಗಿಸುವ ಮಂದಿ ಪ್ರತಿಭಟನಾ ನಿರತರಾಗಿದ್ದರೂ ಯಾರೂ ಗಮನಿಸುತ್ತಿಲ್ಲ ಮಹಿಳೆಯರು ಹಾಗೂ ಮಕ್ಕಳು ಕಷ್ಟ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಶಾಲಾ ಆರಂಭದ ದಿನಗಳು ಹತ್ತಿರವಾಗುತ್ತಿದ್ದು, ಗೊಂದಲದ ಪರಿಸ್ಥಿತಿ ಇದೆ. ಆದರೆ ಪಾಲೇಮಾಡಿನ ಸಮಸ್ಯೆಯನ್ನು ಬಗೆ ಹರಿಸಬೇಕಾದ ಜಿಲ್ಲಾಡಳಿತ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲವೆಂದು ಆರೋಪಿಸಿದರು. ಬಹುಜನ ಕಾರ್ಮಿಕರ ಸಂಘದ ಪ್ರಮುಖರು ಈ ಸಂದರ್ಭ ಹಾಜರಿದ್ದರು. ಸ್ಥಳೀಯ ನಿವಾಸಿಗಳ ಪ್ರತಿಭಟನೆ ಮುಂದುವರೆದಿದೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ,ಮೇ 11– ಮಡಿಕೇರಿ 66/11ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರ ಹೋಗುವ ಗಾಳಿಬೀಡು ಹಾಗೂ ಗದ್ದಿಗೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯ ನಡೆಸಬೇಕಿರುವುದರಿಂದ ಮೇ, 12 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು. ಆದ್ದರಿಂದ ಮಹದೇವಪೇಟೆ, ಉಕ್ಕುಡ, ಸಂಪಿಗೆಕಟ್ಟೆ, ಗದ್ದಿಗೆ, ಅಜಾದ್‌ನಗರ, ರಾಜರಾಜೇಶ್ವರಿನಗರ, ಭಗವತಿನಗರ, ಕಾನ್ವೆಂಟ್ ಜಂಕ್ಷನ್, ದೇವಸ್ತೂರು, ಹೆಬ್ಬೆಟಗೇರಿ, ಅಬಿಫಾಲ್ಸ್ ರೋಡ್, ಕೆ.ನಿಡುಗಣೆ, ಗಾಳಿಬೀಡು, ಕಾಲೂರು ಹಾಗೂ ಸುತ್ತಮುತ್ತ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ತಿಳಿಸಿದ್ದಾರೆ.

ಹಿಂದೂ ಯುವ ವಾಹಿನಿ ರಾಜ್ಯ ಉಪಾಧ್ಯಕ್ಷರಾಗಿ ಕುಲದೀಪ್ ಪೂಣಚ್ಚ

ಮಡಿಕೇರಿ,ಮೇ 11– ಹಿಂದೂ ಯುವ ವಾಹಿನಿ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾಗಿ ಕುಲದೀಪ್ ಪೂಣಚ್ಚ(ದೀಪು) ನೇಮಕಗೊಂಡಿದ್ದಾರೆ ಹಿಂದೂ ಯುವ ವಾಹಿನಿ ಸಂಘಟನೆಯ ಮುಖ್ಯ ಸಂರಕ್ಷಕರಾದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಆದೇಶದ ಮೇರೆಗೆ ಕರ್ನಾಟಕ ಪ್ರದೇಶ ಹಿಂದೂ ಯುವ ವಾಹಿನಿಯ ಪ್ರಭಾರಿ ಬಾಬಾ ವಿಠ್ಠಲ್ ಗಿರಿ ಮಹಾರಾಜ್ ಜೀ ಅವರು ಕುಲದೀಪ್ ಪೂಣಚ್ಚ ಅವರನ್ನು ಕರ್ನಾಟಕ ರಾಜ್ಯದ ಉಪಾಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ.



ಇಬ್ಬರು ಬೀಟೆ ಮರ ಕಳ್ಳರ ಬಂಧನ

ಸೋಮವಾರಪೇಟೆ, ಮೇ 11– ಕಾಫಿ ತೋಟದಲ್ಲಿ ಅಕ್ರಮವಾಗಿ ಬೀಟೆ ಮರ ಕಳ್ಳತನದ ಆರೋಪದಲ್ಲಿ ಈರ್ವರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಬಂಧಿಸಿದ್ದಾರೆ.

ಹೊಸತೋಟ ಗರಂದೂರು ಬಿ.ತೋಟ ನಿವಾಸಿ ಬಿ.ಎಲ್.ಆದಿತ್ಯ, ಬೇಳೂರು ಬಸವನಳ್ಳಿ ಗ್ರಾಮದ ಶಾಂತಕುಮಾರ್ ಬಂಧಿತ ಆರೋಪಿಗಳು. ಟಿಪ್ಪರ್‌ನಲ್ಲಿ ಬೆಲೆಬಾಳುವ ನಾಟಗಳನ್ನು ಸಾಗಾಟ ಮಾಡಲಾಗಿದ್ದು, ಉಳಿದ ಆರೋಪಿಗಳ ಬಂಧನಕ್ಕೆ ಅಧಿಕಾರಿಗಳು ಬಲೆ ಬೀಸಿದ್ದಾರೆ.

ಐಗೂರು ಗ್ರಾಮದ ಮೋಹನ್ ದಾಸಪ್ಪ ಅವರಿಗೆ ಸೇರಿದ ಗರಗಂದೂರು ಎ. ಎಸ್ಟೇಟ್‌ನಲ್ಲಿ ಒಂದು ಭಾರೀ ಗಾತ್ರ ಬೀಟೆ ಮರವನ್ನು ರಾತ್ರಿ ಕಡಿದ ಮರಗಳ್ಳರ ತಂಡ ನಾಟಗಳನ್ನು ಟಿಪ್ಪರ್‌ನಲ್ಲಿ ಸಾಗಿಸಿದ್ದಾರೆ. ಮಾಹಿತಿ ಪಡೆದ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡಿದ ಸಂದರ್ಭ, ಯೋಗ್ಯವಲ್ಲದ ನಾಟಗಳು ದೊರೆತ್ತಿವೆ. ಕೂಡಲೆ ಕಾರ್ಯಪ್ರವೃತ್ತರಾದ ಅರಣ್ಯ ಅಧಿಕಾರಿಗಳ ತಂಡ, ಆರೋಪಿಗಳನ್ನು ಬಂಧಿಸಿ ಮೊಕದ್ದಮೆ ದಾಖಲಿಸಿ, ಸೋಮವಾರಪೇಟೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಧೀಶರು ಆರೋಪಿಗಳಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದ್ದಾರೆ.



ಕಾರ್ಯಾಚರಣೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ.ನೆಹರು ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಎಚ್.ಪಿ. ಚೇತನ್, ಡಿಆರ್‌ಎಫ್‌ಓ ವೈ.ಕೆ. ಜಗದೀಶ್, ಎನ್.ಬಿ. ಸತೀಶ್ ಕುಮಾರ್, ಅರಣ್ಯ ರಕ್ಷಕರಾದ ಭರಮಪ್ಪ ಬಿ.ಜಿ. ಚೇತನ್, ಅರಣ್ಯ ವೀಕ್ಷಕ ವೀರಪ್ಪ, ಚಾಲಕರಾದ ನಂದೀಶ್ ಮತ್ತು ಸಂತೋಷ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಐಗೂರು ವ್ಯಾಪ್ತಿಯಲ್ಲಿ ಕಂಪೆನಿ ತೋಟಗಳಿದ್ದು, ಬೆಲೆಬಾಳುವ ಬೀಟೆ ಮರಗಳಿವೆ. ಈ ವ್ಯಾಪ್ತಿಯಲ್ಲಿ ಕುಖ್ಯಾತ ಮರಗಳ್ಳರ ತಂಡಗಳು ಇದ್ದು, ರಾತ್ರಿಯಾದಂತೆ ಕಾರ್ಯಾಚರಣೆಗೆ ಇಳಿಯುತ್ತವೆ. ಅಪರೂಪಕ್ಕೆ ಪ್ರಕರಣಗಳು ಬೆಳಕಿಗೆ ಬಂದರೂ, ಕುಖ್ಯಾತ ಮರಗಳ್ಳರನ್ನು ಅಧಿಕಾರಿಗಳು ಬಂಧಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮರಗಳ್ಳತನ ನಿರಂತರವಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಇಂದು ಮದ್ಯ ಮಾರಾಟಗಾರರ ಪ್ರತಿಭಟನೆ

ಮಡಿಕೇರಿ,ಮೇ.11: ಅಬಕಾರಿ ಇಲಾಖೆಯ ರಾಜ್ಯ ಆಯುಕ್ತರು ಇತ್ತೀಚೆಗೆ ಹೊರಡಿಸಿರುವ ಆದೇಶದಿಂದ ಜಿಲ್ಲೆಯಲ್ಲಿ ಮದ್ಯವನ್ನು ಇಂಡೆಂಟ್ ಮಾಡಲು ಸಾಧ್ಯವಾಗುತ್ತಿಲ್ಲ. ಮೇ 12 ಜಿಲ್ಲೆಯ 260 ಸನ್ನದುದಾರರು ಒಂದು ದಿನ ಮದ್ಯ ಖರೀದಿಸಲು ಇಂಡೆಂಟ್ ನೀಡುವುದಿಲ್ಲ. ಈ ಮೂಲಕ ರಾಜ್ಯದ ಎಲ್ಲೆಡೆ ಪ್ರತಿಭಟನೆ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿಯೂ ಪ್ರತಿಭಟನೆ ನಡೆಯಲಿದೆ ಎಂದು ಫೆಡರೇಷನ್ ಆಫ್ ವೈನ್ ಮರ್ಚೆಂಟ್ ಅಸೋಸಿಯೇಷನ್ ಕೊಡಗು ಜಿಲ್ಲೆಯ ಅಧ್ಯಕ್ಷ ಗುಮ್ಮಟೀರ ಕಿಲನ್ ಗಣಪತಿ ತಿಳಿಸಿದರು.

ಕೊಡಗು ಜಿಲ್ಲೆಯ ಜಿಲ್ಲಾ ಅಬಕಾರಿ ಉಪ ಆಯುಕ್ತ ಜಗದೀಶ್ ನಾಯಕ್ ಅವರಿಗೆ ಅಸೋಸಿಯೇಷನ್ ಪದಾಧಿಕಾರಿಗಳು ಮನವಿ ಪತ್ರ ನೀಡಿ ಸಮಸ್ಯೆ ಬಗೆ ಹರಿಸಲು ಒತ್ತಾಯಿಸಿದರು.

ಆನ್ ಲೈನ್ ವ್ಯವಸ್ಥೆಯಡಿ ಇಂಡೆಂಟ್ ಮಾಡುವ ವಿಚಾರದಲ್ಲಿ ಅನೇಕ ಸಮಸ್ಯೆಗಳಿರುವುದರಿಂದ ಇದನ್ನು ಸರಿಪಡಿಸುವಂತೆ ಒತ್ತಾಯಿಸಿ ಕಳೆದ ಹಲವು ದಿನಗಳಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಆದರೂ ಇಲಾಖೆ ಈ ಬಗ್ಗೆ ಕ್ರಮ ವಹಿಸಿಲ್ಲ. ಇದರಿಂದಾಗಿ ಕೊಡಗು ಜಿಲ್ಲೆಯ 260 ಸನ್ನದುದಾರರು ಮೇ 12ರಂದು ಯಾವುದೇ ಮದ್ಯವನ್ನು ಖರೀದಿ ಮಾಡದಿರಲು ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಗುಮ್ಮಟೀರ ಕಿಲನ್ ಗಣಪತಿ ಅಬಕಾರಿ ಅಧಿಕಾರಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಒಂದು ದಿನ ಇಂಡೆಂಟ್ ಮಾಡದೇ ಇರುವುದರಿಂದ ಸರ್ಕಾರಕ್ಕೆ ವ್ಯವಹಾರದಲ್ಲಿ ಕೋಟ್ಯಾಂತರ ವ್ಯತ್ಯಾಸವಾಗಲಿದೆ. ಹಾಗಾಗಿ ಕೂಡಲೇ ಈ ಬಗ್ಗೆ ಗಮನ ಹರಿಸುವಂತೆ ಅಬಕಾರಿ ಉಪ ಆಯುಕ್ತರಿಗೆ ಸಲ್ಲಿಸಿದ ಮನವಿಯಲ್ಲಿ ವಿವರಿಸಿದ್ದಾರೆ. ಮನವಿ ನೀಡುವ ಸಂದರ್ಭ ಅಸೋಸಿಯೇಷನ್ ಪದಾಧಿಕಾರಿಗಳಾದ ವಾಟೇರಿರ ದೀರಜ್ ಬಿ.ಎಮಹಾಬಲ, ದ್ಯಾನ್ ಸುಬ್ಬಯ್ಯ ಹಾಗೂ ಸುಮೇಶ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಭೋಗ್ಯಕ್ಕೆ ಮನೆ ಬೇಕಾಗಿದೆ
ಮೈಸೂರಿನ ಕುವೆಂಪುನಗರ, ರಾಮಕೃಷ್ಣನಗರ, ಸರಸ್ವತಿಪುರಂ, ಜಯನಗರ ಸುತ್ತಮುತ್ತ 7 ಕಿ.ಮೀ ವ್ಯಾಪ್ತಿಯಲ್ಲಿ 6 ಲಕ್ಷ ಮಿತಿಯಲ್ಲಿ ಉತ್ತಮ ಗಾಳಿ, ಬೆಳಕಿರುವ 2 ಬಿಹೆಚ್‌ಕೆ ಮನೆ (ಪೂರ್ವ/ಉತ್ತರ) ಭೋಗ್ಯಕ್ಕೆ ತಕ್ಷಣ ಬೇಕಾಗಿದೆ
9480769600
9900599391

ಗ್ರಾವೆಲ್ ಮಣ್ಣು, ಕೆಮ್ಮಣ್ಣು ಗೋಬರ್ ದೊರೆಯುತ್ತದೆ.
7259407518
8310220458

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

WANTED
Computer Teacher -2
English Teacher -2
9886654463

WANTED
Diploma or B.E (Civil) Male & Female Candidates, Freshers can also apply.
Mail ID: p.sanjay5511@gmail.com
9008366792

ಹೊಸ ಮನೆ ಬಾಡಿಗೆಗೆ ಭೋಗ್ಯಕ್ಕಿದೆ
30x40 ಅಳತೆಯಲ್ಲಿ ಕಟ್ಟಿರುವ 2 ರೂಂನ ಮನೆ ಎಲ್ಲಾ ಸೌಲಭ್ಯವಿದೆ. ಇಟಾಲಿಯನ್ ಕಿಚನ್, ಸೋಲಾರ್, Car Parking ಸೌಲಭ್ಯವಿದೆ.
8951195562 / 8867373626

JOB VACANCY
Wanted CNC Operator and Helper
9886087878
7259338667

FOR SALE
Hardware Plumbing Shop for Sale at Prime Location of Hebbal Mysore. Materials Worth 10.5 Lakhs, Advance 3 Lakhs, Interiors and Gadgets 2 Lakhs, Total Worth 15.5 Lakhs
8884073366

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಮನೆ ಕೆಲಸಗಳಲ್ಲಿ ಸಹಾಯ ಮಾಡಲು ಮಹಿಳೆ ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 5, ಸಂಬಳ 6000/– ಮತ್ತು ESI & PF (ಶಾಲೆ ಸುತ್ತಮುತ್ತ ಸಮೀಪದಲ್ಲೇ ವಾಸಿಸುವವರಿಗೆ ಆದ್ಯತೆ) ಸಂಪರ್ಕಿಸಿ:– ಜ್ಞಾನ ಗಂಗೋತ್ರಿ ಕಾನ್ವೆಂಟ್, ಇಂಗ್ಲೀಷ್ ಮಿಡೀಯಮ್, ರಾಜೇಂದ್ರನಗರ, ಮೈಸೂರು–570007
9243580672
9113980741

airtel WANTED
Sales Executive Salary: 10,000/- + Incentive up to 8,000/-. Contact:
9972728134

ಹೊಸ ಚೀಟಿಗಳ ಪ್ರಾರಂಭ
ಶ್ರೀ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

AMAZE

SUNZONE SOLAR SYSTEM
VM Double Road, Kuvempunagar, Mysuru
9845175443

ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

SITE FOR SALE
Jettihundi Layout DTCP Approved, Bogadi Gaddige Road, Beside Yesh Farm, Behind Sobha Retreat Layout, Ready to Registration.
9916021212 / 8762242134

ಗ್ರೀನ್‌ಟೆಚ್ ಲೇಡಿಸ್ ಪಾರ್ಲರ್
ಬ್ಯುಟಿಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರಣ್ಯಪುರಂ, ಮೈಸೂರು
8867482266
8746089729

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2. ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

REQUIRED
An experienced lady who can take care of kids 5 and 9 year old and carry out household works. Handsome salary. Timings: 8 am to 5 pm. Sunday Holiday.
Mob: 8310405371

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಿ ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸಮಯ: 9.00 am to 5.00 pm (Basic Salary + Incentives)
8904131762

WANTED FEMALE TELECALLERS
Language: Kannada & Others, Qualification: SSLC /PUC/Degree/Post Graduation, Salary: Rs.10,000 to Rs.15,000 Plus Incentive
9739015150 / 9535442888

ಹೋಂ ನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು, ಪುರುಷರು ವಿಧವೆ ವಿಚ್ಛೇದಿತೆಯರು ತಕ್ಷಣ ಬೇಕಾಗಿದ್ದಾರೆ. ಸಂಬಳ, ಊಟ, ವಸತಿಯೊಂದಿಗೆ 12,000–22,000, ಮೊದಲು ಬಂದವರಿಗೆ ಆದ್ಯತೆ
9035113222

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04045209698

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Ambari Travels
Mysore to Bangalore Drop or Pickup 9611337069

Vehicle	City Drop	Airport
Mini	Rs. 2,300/-	Rs. 2,600/-
Sedan	Rs. 2,600/-	Rs. 3,000/-
INNOVA	Rs. 3,600/-	Rs. 4,400/-

COVID-19 Sanitized Taxi's available for all Up and Down Trips and Local Trips

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC ,Dip,Degree	4 HOURS	8000/-
	8 HOURS	16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲೆ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5300
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ– S.M ಗೋಲ್ಡ್ ಕಂಪನಿ
8050518881

ಬೇಕಾಗಿದ್ದಾರೆ
ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ಮುಂಭಾಗ ವಾಟರ್ ಟ್ಯಾಂಕ್ ರಸ್ತೆ, ವಿಜಯನಗರದಲ್ಲಿರುವ ಸಸ್ಯಹಾರಿ ಕ್ಯಾಂಟೀನ್‌ಗೆ ಅಡುಗೆ ಭಟ್ಟರು ಮತ್ತು ಲೇಡೀಸ್ ಕ್ಲೀನಿಂಗ್ (ಬೆಳಿಗ್ಗೆ 6 ಗಂಟೆಯಿಂದ) ಮಾಡುವ ಕೆಲಸಗಾರರು ಬೇಕಾಗಿದ್ದಾರೆ. ರೂಂ ಸೌಲಭ್ಯವಿದೆ. ಕೆಲಸಕ್ಕೆ ಹಾಜರಾಗುವ ಸಮಯ ಮಧ್ಯರಾತ್ರಿ 2 ಗಂಟೆಯಿಂದ ಬೆಳಿಗ್ಗೆ 11 ಗಂಟೆಯವರೆಗೆ
8123559515
7019949808

ಸೈಟುಗಳು ಮತ್ತು ಮನೆ ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ, ಮೈಸೂರು
8050345574

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗಳಿಗೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕ ಇಲ್ಲ. ಸಂಬಳ: 8 ಗಂಟೆ ಕೆಲಸಕ್ಕೆ 12382/–. 12 ಗಂಟೆ ಕೆಲಸಕ್ಕೆ 15,000. ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್
ಲೋಕೇಶ – 8722844236
ಸಂದರ್ಶನ: CIPET ಕಾಲೇಜು ಹತ್ತಿರ ಮತ್ತು ಕೂರ್ಗಳ್ಳಿ ಪೆಟ್ರೋಲ್ ಬಂಕ್ ಹತ್ತಿರ. ಸಮಯ: 10 ರಿಂದ 12 ಗಂಟೆವರೆಗೆ

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಫ್ಯಾಕ್ಟರಿಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು 18 ರಿಂದ 30 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI. ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು. ESI ಮತ್ತು PF ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ). ಸಂಪರ್ಕಿಸಿ:
Mob: 8277047300

ನಿಮ್ಮ ತಾರಸಿ ಸೋರುತ್ತಿದೆಯೇ
ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ ಕರೆಮಾಡಿ.
VASANTHA BUILDERS
90350 12579, 95386 38587

ಮಾರುವವರು / ಕೊಳ್ಳುವವರು
20x30, 30x40, 40x60, 50x80 ಸೈಟು, ಹಳೇ ಮನೆ, ಹೊಸಮನೆ, ಡೂಪ್ಲೆಕ್ಸ್ ಮನೆ, ದಟ್ಟಗಳ್ಳಿ, ನ್ಯಾಯಾಂಗ ಬಡಾವಣೆ, ಸುತ್ತಮುತ್ತ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 9945042875

ಮನೆಯಿಂದಲೇ ಕೆಲಸ
ಕನ್ನಡ, ಇಂಗ್ಲೀಷ್ ಫಾರಂ ಫಿಲ್ಲಿಂಗ್ ಹಾಗೂ ಡೇಟಾ ಎಂಟ್ರಿ ಕೆಲಸಗಳು ಗಳಿಸಿ ತಿಂಗಳಿಗೆ 15,000/– ದಿಂದ 24,000/– ಗೃಹಿಣಿಯರು, ನಿವೃತ್ತರು, ವಿದ್ಯಾರ್ಥಿಗಳು
9663321516 / 9353497350

ಹಳೆಯ ಮನೆ ಮತ್ತು ಪಕ್ಕದ ಖಾಲಿ ನಿವೇಶನ ಮಾರಾಟಕ್ಕಿವೆ
ಸ್ಥಳ: ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಅಳತೆ: ಮನೆ ಅಂದಾಜು 80x50, ನಿವೇಶನ ಅಂದಾಜು 80x50, ಬಸ್ ನಿಲ್ದಾಣ, ಆಸ್ಪತ್ರೆ, ಶಾಲಾ ಕಾಲೇಜುಗಳು, ಪೋಸ್ಟ್ ಆಫೀಸ್, ಧಾರ್ಮಿಕ ಕೇಂದ್ರಗಳು, ವ್ಯಾಪಾರ ಮತ್ತು ವಹಿವಾಟು ಕೇಂದ್ರಗಳು ಮತ್ತು ಊರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳು ಒಂದೂವರೆ ಕಿಲೋಮೀಟರ್ ಪರಿಧಿಯಲ್ಲಿವೆ. ಮನೆ ಹಾಗೂ ನಿವೇಶನದ ಮಾರಾಟದ ಬೆಲೆ : 1.25 ಕೋಟಿ, ಬೆಲೆಯ ಬಗ್ಗೆ ಮಾತುಕತೆಗೆ ಅವಕಾಶವಿದ್ದು ಮಾರುವ ಮತ್ತು ಕೊಳ್ಳುವ ಇಬ್ಬರು ಒಮ್ಮತಕ್ಕೆ ಬರಲು ಅನುಕೂಲಕರ ಸನ್ನಿವೇಶವಿದೆ. ಮಧ್ಯವರ್ತಿಗಳಿಗೆ ಖಂಡಿತ ಅವಕಾಶವಿರುವುದಿಲ್ಲ.
9341228665 / 9845573719

ತಕ್ಷಣ ಬೇಕಾಗಿದ್ದಾರೆ
ಕಂಪನಿಯಲ್ಲಿ ಹೆಲ್ಪರ್ ಆಗಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅನುಭವ ಉಳ್ಳವರು / ಇಲ್ಲದವರು.
ವಿಳಾಸ: ಜಿ.ಡಿ. ಇಂಡಸ್ಟ್ರೀಸ್ (ಗೊಂಬೆ ಫ್ಯಾಕ್ಟರಿ) #217, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು–18
9686118219, 7976103331
ಸಂಬಳ: 7000 to 13000
WANTED FEMALE HELPERS

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
*Two Wheeler Technician (ದ್ವಿಚಕ್ರ ವಾಹನದ ಮೆಕಾನಿಕ್)
ಕೂಡಲೇ ಸಂಪರ್ಕಿಸಿ:
+91 9739549252
Email id: vijoysankar@gmail.com

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಆಫೀಸ್ ಕೆಲಸ
ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ಮ್ಯಾನೇಜರ್ ಹುದ್ದೆಗೆ ಮಹಿಳೆಯರು ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವವಿರಬೇಕು. ಆಕರ್ಷಕ ಸಂಬಳ
7483960098

SITE FOR SALE 30x40
ಪೂರ್ವಾಭಿಮುಖ, ಜ್ಞಾನಭಾರತಿ ಲೇಔಟ್, ದಡದಹಳ್ಳಿ, ಮೈಸೂರು. ಮುಡಾ ಖಾತೆ ಆಗಿದೆ. ಸಂಪರ್ಕಿಸಿ:
9342123373

JOB OPENINGS FOR FEMALES (DAY SHIFT)
Telecalling & Marketing Executives required, Basic Salary 12,000/- Plus Incentives, Language required: English / Hindi, Work Location: Hebbal 1st Stage, Mysore
9035678000 / 9742916401

AFFIDAVIT
I, Vinod M., S/o K.V. Mani, residing at No. 260, 3rd Main Road, Subhash Nagar, Mysuru, do hereby absolutely renounce the abandon the use of my minor child (07 years) former name Advik Vinod in lieu thereof have assumed the new name as Aadvik Vinod. I declare in front of Notary L.N. Rajendran on 9.5.2022, that I have changed my minor child name from Advik Vinod to Aadvik Vinod.
Sd/- Vinod M.

WANTED
Experienced Housekeeping Supervisor is required for a reputed hospital in Mysore. Salary: Rs. 20,000/-. Contact with original documents.
M/s. Karnataka Security Agency
No. 513, Honna Complex, Near Lakshmi Talkies, K.N. Agrahara, Mysuru-24
Ph: 0821-4247385
Mob: 9480420666

ಬೇಕಾಗಿದ್ದಾರೆ
ವಿಜಯನಗರದ ಜನಪ್ರಿಯ ಸಲೂನ್‌ಗೆ ಯುನಿಸೆಕ್ಸ್ ಕೇಶ ವಿನ್ಯಾಸಕರು ಮತ್ತು ಬ್ಯೂಟಿಷಿಯನ್ ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 9611065365

WANTED
Marketing Executive for FMCG Distribution. Good salary for experienced candidate.
Contact:
Mob: 8792321257

SITES FOR SALE
20x30 - 13.20 Lakhs
30x40 - 26.40 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limits) 1.5 kms from J P Nagar Ring Road.
8660105902

ಇಂದೇ ಸಂಪರ್ಕಿಸಿ
ಮೈಸೂರು ನಂಜನಗೂಡು, ಕಡಕೊಳ, ಹೆಬ್ಬಾಳ್ ಮುಂತಾದ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Line Incharge, Maintance ಮತ್ತು Receptionist, Data Entry, Assistant Admin, Telecallers ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000–38,000 (ESI+PF+OT) ಸೇರಿ.
9980850141 / 9980630131

ಬಾಡಿಗೆ / ಭೋಗ್ಯ
2 BHK, ಶ್ರೀರಾಂಪುರ, ರಿಂಗ್ ರೋಡ್ ಸರ್ಕಲ್ ಹತ್ತಿರ, H.D. Kote Road.
Mob: 9448217546

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ). ಸಂಬಳ: 14000 ದಿಂದ 16000. (ESI, PF ಸೌಲಭ್ಯ ಇರುತ್ತದೆ).
Mob: 8050699742

FOR SALE
1) 30x40 attach Brahmins Layout 12 lks
2) 30x40 Karle Habitat, Opp University Layout
3) 43 x66 G+1 Saraswathipuram
4) 40x60 JP Nagar, 5) 20x30 Sathagalli 2nd stage. 6) 30x40 G+floor New House Bogadi Near Hari Vidyalaya
PRAKRUTHI PROPERTIES
90359 90359, 95386 90359

ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
9611234363
9611786861

WANTED
PUC, D.Ed., passed Lady Teachers (2 Nos) for English Medium Primary Class (Math & Science). Nursery Trained Lady Teacher (1 No.) for English Medium Class (Candidates with Computer Knowledge Preferred.)
Contact: Chairman, Gayathri English Higher Primary School, Gayathripuram, Mysore.
9845666296

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ಹೆಬ್ಬಾಳು ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ 45 ವರ್ಷದೊಳಗೆ, ಸಂಬಳ: 15,500/– (8 Hours, W/o) ESI, PF ಮತ್ತು ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

GOLDEN OPPORTUNITY
We hire retired state & Central Govt. Officials, businessmen & Home makers for the post of Agency Partners in a AAA Grade reputed organisation, Mysore. Benefits include handful salary and incentives (In Lakhs)
Contact :
9448376423

ಬೇಕಾಗಿದ್ದಾರೆ
1) Night Shift ನಲ್ಲಿ ಕಾರ್ಯನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು.
2) ಫೀಲ್ಡ್ ಆಫೀಸರ್ (ಅನುಭವ ಹೊಂದಿರಬೇಕು)
9686422400 / 9242406261

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ಸಂಬಳ: 14,700/– (8 Hours, W/o), ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620777819 / 9538567819

WANTED IMMEDIATELY
VIVUS HOSPITAL
Daswal, Madikeri
Email: vivuscoorg@vivushealth.net.
Physician - M.D. Gen.Med. (Fresher's can apply)
Accommodation available.
9845829458 / 9945032357

SITE FOR SALE
in Anand Nagar, Near Sharadadevi Nagar 20x30 North Facing, Cost: 30 Lakhs
Contact 7411093332
Owner: 8660486231

ಬೇಕಾಗಿದ್ದಾರೆ
* Front Office Executives
* ರೂಮ್ ಬಾಯ್ಸ್
* ಹೌಸ್ ಕೀಪಿಂಗ್ ಲೇಡೀಸ್
* ಹೌಸ್ ಕೀಪಿಂಗ್ ಸೂಪರ್‌ವೈಸರ್

ನಗರದ ಹೃದಯ ಭಾಗದಲ್ಲಿರುವ ಹೆಸರಾಂತ ಹೋಟೆಲ್‌ವೊಂದಕ್ಕೆ ಊಟ, ವಸತಿ ಹಾಗೂ ಆಕರ್ಷಕ ವೇತನವಿರುತ್ತದೆ., ಸಂಪರ್ಕಿಸಿ:
0821-4262294 / 8310000936

WANTED
JNANADEEPA FIRST GRADE COLLAGE
Gangothri Layout, Mysore
Lecturer in Kannada - 01 Post
Lecturer in English - 01 Post
Lecturer in Commerce - 03 Post
Submit Resume on or Before 13/05/2022
9113039008
0821-2343955

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಹುಡುಗರು, ಸೇಲ್ಸ್‌ಗಾಗಿ ಹುಡುಗ, ಹುಡುಗಿಯರು SSLC / PUC ವಿದ್ಯಾರ್ಹತೆಯಿದ್ದು, ಅನುಭವವಿರುವವರು ಹಾಗೂ ಮೈಸೂರು ನಗರದ ಕಂಪನಿಗಳಲ್ಲಿ ಸೆಕ್ಯೂರಿಟಿ ಗಾರ್ಡ್ಸ್‌ಗಳು ಕೆಲಸ ಮಾಡಲು ಬೇಕಾಗಿದ್ದಾರೆ.
9035050656 / 9035050653

ಪ್ರಮಾಣ ಪತ್ರ
ಮೈಸೂರು ಸಿಟಿ–570008, ಅಶೋಕಪುರಂ, ಬಿ.ಆರ್.ಅಂಬೇಡ್ಕರ್ ಕಾಲೋನಿ, 13ನೇ ಕ್ರಾಸ್, ಮನೆ ನಂ.40 ರಲ್ಲಿ ವಾಸವಾಗಿರುವ ಲೇಟ್ ಕುಪ್ಪರವರ ಮಗನಾದ ಶ್ರೀ ರವಿಕುಮಾರ್.ಕೆ ಆದ ನಾನು ನನ್ನ ಎಲ್ಲಾ ದಾಖಲಾತಿಯಲ್ಲಿ ನನ್ನ ಹೆಸರನ್ನು ರವಿಕುಮಾರ್.ಕೆ ಬಿನ್ ಲೇಟ್ ಕುಪ್ಪ ಎಂದು ಸರಿಪಡಿಸಿಕೊಂಡಿದ್ದು, ನನ್ನ ಬ್ಯಾಂಕ್ ದಾಖಲಾತಿಯಲ್ಲಿ ನನ್ನ ಹೆಸರನ್ನು ರವಿಕುಮಾರ್.ಕೆ ಎಂದು ತಂದೆ ಅವರ ಹೆಸರನ್ನು ಲೇಟ್ ಕುಪ್ಪ ಎಂದು ಸರಿಪಡಿಸಬೇಕೆಂದು, ಮಲ್ಲಿಕಾರ್ಜುನಸ್ವಾಮಿ, ನೋಟರಿ, ಮೈಸೂರು ಇವರ ಮುಂದೆ ಪ್ರಮಾಣಕರಿಸುತ್ತೇನೆ. ಸಹಿ/–ರವಿಕುಮಾರ್.ಕೆ

HOUSE FOR RENT
4 BHK with Car Parking, 4th Cross, Sunnadakeri, Mysore.
8050056100

WANTED HOUSE FOR RENT
2/3 Bedrooms and 2 Bath Rooms (Vegetarian) Around Nivedith Nagar, KHB (HIG) Vijayanagar 4th Stage, Jayalakshmipuram.
(Brokers Excuse)
8867004540 / 9449837309

ಬೇಕಾಗಿದ್ದಾರೆ
ಮೈಸೂರಿನ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು B.E (Mechanical), Diploma (Mechanical) & ITI (Fitter, Turner & Electrician), ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ., ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ: Send Resume to lgsecurity.kushi05@gmail.com
9845395975 / 9632081498

TECHERS REQUIRED
A.K.Academy (English Medium 2022-2023) Bannimantap, 'B' Layout, Mysore-570015.
1) NST / Montessori Trained
2) PUC, D.Ed (Arts / Science)
3) B.Sc, B.Ed (CBZ & PCMB)
4) Diploma in Computer /BCA
(Timing 10.30am to 1.00pm)
8861977636

ಬೇಕಾಗಿದ್ದಾರೆ
ಶ್ರೀ ಜನ ಸಾಕ್ಷಿ ಕ್ರಿಯೇಶನ್
ಕಿರುಚಿತ್ರ ಮತ್ತು ಕಿರುತೆರೆಯಲ್ಲಿ ನಟಿಸಲು ನಟ–ನಟಿಯರು, ಸಹಕಲಾವಿದರು ಬೇಕಾಗಿದ್ದಾರೆ.
ವಿಳಾಸ: ನಂ.1823/2ಸಿ, 1ನೇ ಮಹಡಿ, ಎಂ.ಎಂ.ರಸ್ತೆ, ಟೆರಿಶಿಯನ್ ಕಾಲೇಜು ಎದುರು, ಮೈಸೂರು–570011
8618570673 / 9008381014

ತಕ್ಷಣ ಬೇಕಾಗಿದ್ದಾರೆ
ಆಲ್‌ರೌಂಡರ್ ಭಟ್ಟರು Veg & Non Veg Helper ಹುಡುಗರು ಬೇಕಾಗಿದ್ದಾರೆ. ಬೋಗಾದಿ ರಸ್ತೆ, ಮೈಸೂರು.
9353672819

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೋರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಪಂ॥ ಎಸ್.ಮಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಗೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ, ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುವಂತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಖಾಯಂ ವಿಳಾಸ ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 8 ರಲ್ಲಿ

ಕೊಡಗಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಭೂ ಪರಿವರ್ತನೆಯಿಂದ

ಕಾವೇರಿ ನದಿಯ ಮಾರಣಹೋಮ

ಭೂ ಪರಿವರ್ತನೆಯಿಂದ ನೈಸರ್ಗಿಕ ಗಡಿನಾಡು ಕೊಡಗಿಗೆ ಆಪತ್ತು: ಕೊಡಗು ಸಂರಕ್ಷಣಾ ವೇದಿಕೆ ಆತಂಕ ● ನಿರ್ಲಕ್ಷ್ಯ ವಹಿಸಿದರೆ ಚುನಾವಣೆ ಬಹಿಷ್ಕರಿಸುವ ನಿರ್ಧಾರದ ಎಚ್ಚರಿಕೆ ● ಈಗಾಗಲೇ ಕೊಡಗಿನ ವಾತಾವರಣ ಬದಲಾವಣೆಯಿಂದ ಬೆಳೆಗಳ ಮೇಲೆ ಪರಿಣಾಮ

ಮೈಸೂರು, ಮೇ 11(ಆರ್‌ಕೆ)– ಕರ್ನಾಟಕದಾದ್ಯಂತ ಕೃಷಿ ಭೂಮಿಯ ಭೂ ಪರಿವರ್ತನೆಯನ್ನು ಮೂರು ದಿನಗಳಲ್ಲಿ ಅನುಮೋದಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಇತ್ತೀಚೆಗೆ ಪ್ರಕಟಿಸಿದ ಬಗ್ಗೆ ಕೊಡಗು ಸಂರಕ್ಷಣಾ ವೇದಿಕೆ ತೀವ್ರ ಕಳವಳ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರವು ಕರ್ನಾಟಕ ಭೂಕಂದಾಯ ಕಾಯ್ದೆಗೆ ಅಗತ್ಯವಾದ ತಿದ್ದುಪಡಿಗಳನ್ನು ತರಲಿದೆ ಎಂದು ಹೇಳಿರುವುದು, ಇದರಿಂದ ಕಾವೇರಿ ನದಿಯ ಪ್ರಮುಖ ಜಲಾನಯನ ಪ್ರದೇಶವಾದ ಕೊಡಗಿಗೆ ಆಪತ್ತು ಎದುರಾಗಲಿದೆ ಎಂದು ಕೊಡಗು ಸಂರಕ್ಷಣಾ ವೇದಿಕೆ ಆತಂಕ ವ್ಯಕ್ತಪಡಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೊಡಗು ಸಂರಕ್ಷಣಾ ವೇದಿಕೆ ಅಧ್ಯಕ್ಷ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಕೊಡಗಿನ ನಗರೀಕರಣದಿಂದ ಕಾವೇರಿ ನದಿ ನೀರಿನ ಹರಿವಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಮೈಸೂರು, ಬೆಂಗಳೂರು ಮತ್ತು ಕರ್ನಾಟಕದ ಇತರೆ ಪ್ರದೇಶ ಮತ್ತು ತಮಿಳುನಾಡಿನ ರೈತರು ಸೇರಿದಂತೆ 8 ಕೋಟಿ ಜನರು ಕಾವೇರಿ ನದಿಯನ್ನು ಅವಲಂಬಿಸಿದ್ದಾರೆ. ಕೊಡಗಿನ ಭವಿಷ್ಯದ ನಿರಂತರ ನಗರೀಕರಣವು ಕಾವೇರಿ ನದಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸಲು ಈಗಾಗಲೇ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಇದರ ಬಗ್ಗೆ ಅಧ್ಯಯನ ನಡೆಸಿ ವರದಿಯನ್ನೂ ನೀಡಿದೆ ಎಂದರು.

ಕೊಡಗಿನಲ್ಲಿ ಸೈಟ್‌ಗಳು ಮತ್ತು ಲೇಔಟ್‌ಗಳಿಗಾಗಿ ದೊಡ್ಡ ಪ್ರಮಾಣದ ಭೂ ಪರಿವರ್ತನೆಯಿಂದಾಗಿ ಕೊಡಗು ಜಿಲ್ಲೆಗೆ ರಾಜ್ಯ ಮತ್ತು ಹೊರ ರಾಜ್ಯದಿಂದ ಜನರು ಬಂದು ಇಲ್ಲಿ ಸ್ಥಿರ ವಾಸ್ತವ್ಯ ಹೂಡುವುದರಿಂದ ಕಾವೇರಿ ನದಿಯ ತೀರದಲ್ಲಿ ಅವೈಜ್ಞಾನಿಕವಾದ ಕಾರ್ಯಕ್ರಮಗಳು ನಡೆಯುವುದರಿಂದ ನದಿ ಪಾವಿತ್ರ್ಯತೆಯನ್ನು ಕಳೆದುಕೊಳ್ಳುತ್ತದೆ. ರಾಜ್ಯಗಳಲ್ಲಿ ಕುಡಿಯುವ ಶುದ್ಧ ನೀರು ಹಾಗೂ ಕೃಷಿ ಮತ್ತು ಕೈಗಾರಿಕೆಗಳು ತೀವ್ರತರವಾದ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಡಗಿನ ಭೂ ಪರಿವರ್ತನೆಗೆ ಈಗಾಗಲೇ ಡಿಸಿ ನೇತೃತ್ವದ ಸಮಿತಿ ನೀಡಿರುವ ಎನ್‌ಒಸಿಯಡಿ ಭೂಪರಿವರ್ತನೆಗೆ ಮಾನ್ಯತೆ ನೀಡುವುದಿಲ್ಲ ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಕೊಡಗಿನಲ್ಲಿ ಭೂ ಪರಿವರ್ತನೆಯ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವ ಪ್ರಸ್ತಾವನೆಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ. ನಮ್ಮ ವಿಧಾನಪರಿಷತ್ ಸದಸ್ಯರಾದ ವೀಣಾ ಅಚ್ಚಯ್ಯ ಮತ್ತು ಸುಜಾ ಕುಶಾಲಪ್ಪ ಕೂಡ ಕೊಡಗಿನಲ್ಲಿ ಭೂಪರಿವರ್ತನೆಗೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.



ಮೈಸೂರಿನಲ್ಲಿ ಕೊಡಗು ಸಂರಕ್ಷಣಾ ವೇದಿಕೆ ಅಧ್ಯಕ್ಷ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ ವೇದಿಕೆ ಸದಸ್ಯರಾದ ಅಣ್ಣೀರ ಹರೀಶ್ ಮಾದಪ್ಪ, ಜಮ್ಮಡ ಗಣೇಶ್ ಅಯ್ಯಣ್ಣ, ಕರ್ನಲ್ (ನಿವೃತ್ತ) ಚೆಪ್ಪುಡಿರ ಪಿ.ಮುತ್ತಣ್ಣ ಇದ್ದಾರೆ.

ಕೊಡಗಿನ ನಗರೀಕರಣವು ಕಾವೇರಿ ಹರಿವಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಂಡ್ಯ ಮತ್ತು ಮೈಸೂರು ಭಾಗದ ರೈತರು ತೀವ್ರ ಬರ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಇದು ಅನೇಕರನ್ನು ಆತ್ಮಹತ್ಯೆಗೂ ತಳ್ಳಬಹುದು. ಇದರ ಜವಾಬ್ದಾರಿ ಸರ್ಕಾರ ಹೊರುತ್ತದೆಯೇ ಎಂದು ಪ್ರಶ್ನಿಸಿದರು.

ಹೆಕ್ಟೇರ್ ಲೆಕ್ಕದಲ್ಲಿ ಭೂ ಪರಿವರ್ತನೆ ಮಾಡುವುದರಿಂದ ಮರಗಿಡಗಳು ನಾಶವಾಗಿ ವಾತಾವರಣದಲ್ಲಿ ಏರುಪೇರಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕಾರಣ 2017ರಿಂದೀಚೆಗೆ ಮಳೆಗಾಲ, ಚಳಿಗಾಲದಲ್ಲಿ ವಾತಾವರಣದಲ್ಲಿ ಆದ ಬದಲಾವಣೆಯಿಂದ ಕೊಡಗಿನ ಕೃಷಿಕರು ನಂಬಿರುವ ಕಾಫಿ ಹಾಗೂ ಭತ್ತದ ಬೆಳೆಯಲ್ಲಿ ಬಹಳ ವ್ಯತ್ಯಯವುಂಟಾಗಿದೆ. ಅಲ್ಲದೆ, ಕರಿಮೆಣಸು ಸಂಪೂರ್ಣ ನಾಶವಾಗುತ್ತಿದೆ. ಅಷ್ಟೇ ಅಲ್ಲದೆ ಕೊಡಗು ಪರ್ವತ ಪ್ರದೇಶಗಳಿಂದ ಕೂಡಿದ್ದಲ್ಲದೆ ಗಡಿ ಪ್ರದೇಶವೂ ಆಗಿರುವುದರಿಂದ ಪರ್ವತ ಶ್ರೇಣಿಗಳು ನಾಶವಾದರೆ ಮತ್ತೊಮ್ಮೆ ಕಂಡು ಕೇಳರಿಯದ ಪ್ರಕೃತಿ ವಿಕೋಪ ಕಾಣಬೇಕಾಗುತ್ತದೆ. ಜೊತೆಗೆ ಭಯೋತ್ಪಾದಕತೆಗೂ ತಾಣವಾಗುವುದನ್ನು ಅಲ್ಲಗಳೆಯಲಾಗುವುದಿಲ್ಲ ಎಂದರು.

ಸರ್ಕಾರ ಆಯಾ ಜಿಲ್ಲೆಗಳ ವಾಸ್ತವತೆಯನ್ನು ಅರಿತು ಯೋಜನೆಗಳನ್ನು ರೂಪಿಸಬೇಕೇ ಹೊರತು ಗಾಜಿನ ಮನೆಯಲ್ಲಿ ಕುಳಿತು ರೂಪಿಸುವ ಯೋಜನೆಗಳಿಂದ ಜಿಲ್ಲೆ, ರಾಜ್ಯ, ದೇಶಕ್ಕೆ ಹಾನಿಯಾಗಬಹುದು ಎಂಬ ಕಳವಳ ವ್ಯಕ್ತಪಡಿಸಿದರು. ಈಗಾಗಲೇ ರಾಜ್ಯದಲ್ಲಿ ಒಂದೇ ಕಾನೂನು ಹೊರಡಿಸಿದ ಪರಿಣಾಮವಾಗಿ ಕಂದಾಯ ಇಲಾಖೆಯಲ್ಲಿ ಪೌತಿ ಖಾತೆ ಕಡತಗಳು ಸಾವಿರಾರುಗಟ್ಟಲೆ ವಿಲೇವಾರಿ ಆಗದೆ ಉಳಿದಿದ್ದು, ಸರ್ಕಾರದ ನಿಯಮಗಳೇ ಇದಕ್ಕೆ ಕಾರಣ ಎಂದು ದೂರಿದರು.

ಕೊಡಗಿನಲ್ಲಿ ಪಟ್ಟೆದಾರ ಪದ್ಧತಿ ಚಾಲ್ತಿಯಲ್ಲಿತ್ತು. ಆದರೆ ಒಂದು ಮನೆ ಹೆಸರಿನಡಿಯಲ್ಲಿ ಹಲವು ಕುಟುಂಬಗಳು ಬರುತ್ತವೆ. ಇದೆಲ್ಲದಕ್ಕೂ ಒಬ್ಬ ಹಿರಿಯ ವ್ಯಕ್ತಿ ಪಟ್ಟೆದಾರನಾಗಿರುತ್ತಾನೆ. ಆತ ಮರಣ ಹೊಂದಿದ ನಂತರ ಕುಟುಂಬದ ಎಲ್ಲಾ ಸದಸ್ಯರ ಆಸ್ತಿಯು ಕೇವಲ ಪಟ್ಟೆದಾರನ ಮಕ್ಕಳ ಹೆಸರಿಗೆ ತನ್ನಿಷ್ಟಕ್ಕೆ ತಾನೇ ವರ್ಗಾವಣೆ ಆಗುವುದರಿಂದ ಕುಟುಂಬದ ಇತರ ಸದಸ್ಯರು ಆಸ್ತಿ ಕಳೆದುಕೊಂಡು ಅನಾಥರಾಗುವ ಸನ್ನಿವೇಶವನ್ನು ಸರ್ಕಾರವೇ ತಂದೊಡ್ಡಿದೆ. ಇದೆಲ್ಲವನ್ನೂ ನೋಡಿದಾಗ ನಮಗೆ ತಿಳಿದಂತೆ ಕೊಡಗಿನಲ್ಲಿ ಕೆಲ ವರ್ಷದಿಂದೀಚೆಗೆ ಬಹಳಷ್ಟು ಭೂ ಪರಿವರ್ತನೆಗಳಾಗಿದ್ದು, ಬೇನಾಮಿ ಹೆಸರಿನಲ್ಲಿ ರಾಜಕಾರಣಿಗಳು ಆಸ್ತಿಗಳನ್ನು ಹೊಂದಿ, ಇದರಲ್ಲಿ ಶಾಮೀಲಾಗಿದ್ದಾರೆಯೇ ಎಂಬ ಸಂಶಯ ವ್ಯಕ್ತವಾಗುತ್ತಿದೆ ಎಂದು ದೂರಿದರು.

ಹಾಗಾಗಿ ಭೂ ಪರಿವರ್ತನೆಗೆ ಸಹಕರಿಸದ ಜಿಲ್ಲಾಧಿಕಾರಿಗಳನ್ನು ಆಗಿಂದಾಗಲೇ ವರ್ಗಾವಣೆ ಮಾಡುವ ಹುನ್ನಾರದಲ್ಲಿ ಈ ಶಾಸಕರು, ಮಂತ್ರಿಗಳ ಕೈವಾಡವಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಹೀಗಾಗಿ ಈ ಸಂಬಂಧ ವೇದಿಕೆಯು ಈಗಾಗಲೇ ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ಇದರ ತನಿಖೆಗೆ ವಿಶೇಷ ತಂಡ ರಚಿಸುವಂತೆ ಕೋರಲು ನಿರ್ಧರಿಸಿದ್ದೇವೆ ಎಂದು ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ತಿಳಿಸಿದರು.

ನಮ್ಮ ಶಾಸಕರು ಪೌತಿ ಖಾತೆಗಳಲ್ಲಿ ಆಗುತ್ತಿರುವ ತೊಂದರೆಗಳು, ಭೂ ಪರಿವರ್ತನೆಯಿಂದ ಆಗುವ ದುಷ್ಪರಿಣಾಮಗಳು ಹಾಗೂ ವಿದ್ಯುತ್ ಸಮಸ್ಯೆ, ಕಾಡುಪ್ರಾಣಿಗಳಿಂದ ಮಾನವನಿಗೆ ಆಗುತ್ತಿರುವ ತೊಂದರೆಗಳು, ನದಿಗಳು ಮಲೀನವಾಗುತ್ತಿರುವುದು ಮುಂತಾದ ಸಮಸ್ಯೆಗಳಿಗೆ ತಕ್ಷಣ ಗಮನ ಹರಿಸಬೇಕು. ಈ ವಿಚಾರದಲ್ಲಿ ಸರ್ಕಾರದ ಗಮನ ಸೆಳೆಯಲು ವಿಫಲವಾಗಿರುವ ಜನಪ್ರತಿನಿಧಿಗಳು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಬಗ್ಗೆ ಮತ್ತೆ ನಿರ್ಲಕ್ಷ್ಯ ವಹಿಸಿದರೆ ಮುಂದಿನ ಚುನಾವಣೆಗಳನ್ನು ಬಹಿಷ್ಕರಿಸುವ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ಸಹ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಸದಸ್ಯರಾದ ಕರ್ನಲ್ (ನಿವೃತ್ತ) ಚೆಪ್ಪುಡಿರ ಪಿ.ಮುತ್ತಣ್ಣ, ಜಮ್ಮಡ ಗಣೇಶ್ ಅಯ್ಯಣ್ಣ, ಅಣ್ಣೀರ ಹರೀಶ್ ಮಾದಪ್ಪ ಉಪಸ್ಥಿತರಿದ್ದರು.

ಕ್ರೈಂ ಬಾಕ್ಸ್

ವೈನ್ ಸ್ಟೋರ್ ಖರೀದಿ ವಿಷಯದಲ್ಲಿ ಉದ್ಯಮಿಗೆ ಕೊಲೆ ಬೆದರಿಕೆ: ಪ್ರಕರಣ ದಾಖಲು

ಮೈಸೂರು, ಮೇ 11– ವೈನ್ ಸ್ಟೋರ್ ಮಾರಾಟ ಮಾಡುವುದಾಗಿ ತಿಳಿಸಿ ಉದ್ಯಮಿಯೊಬ್ಬರಿಂದ 20 ಲಕ್ಷ ರೂ. ಪಡೆದು ಮೋಸ ಮಾಡಿದ್ದಲ್ಲದೆ, ಹಣ ವಾಪಸ್ ಕೇಳಿದಾಗ ಕೊಲೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ತಿ.ನರಸೀಪುರದ ವೈನ್ ಸ್ಟೋರ್ ಮಾಲೀಕ ಮತ್ತು ಅವರ ಸ್ನೇಹಿತನ ವಿರುದ್ಧ ಮೈಸೂರಿನ ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಚಾಮರಾಜಪುರಂ ಪ್ರಥಮ್ ಗೀತಾಂಜಲಿ ಅಪಾರ್ಟ್‌ಮೆಂಟ್ ನಿವಾಸಿ ಧನರಾಜ್ ಎಂಬುವವರೇ ದೂರು ದಾಖಲಿಸಿದವರಾಗಿದ್ದು, ತನ್ನ ದೊಡ್ಡಪ್ಪನ ಮಗ ಪುಟ್ಟರಾಜು ಎಂಬುವರು ತನಗೆ ಶಿವಣ್ಣ ಎಂಬಾತನನ್ನು 2019ರ ಜೂನ್‌ನಲ್ಲಿ ಪರಿಚಯ ಮಾಡಿಸಿ, ಶಿವಣ್ಣ ತಿ.ನರಸೀಪುರದ ಹಳೇ ಬಸ್ ನಿಲ್ದಾಣ ರಸ್ತೆಯಲ್ಲಿರುವ ಶ್ರೀನಿವಾಸ ವೈನ್ಸ್ ಮಾಲೀಕರಾಗಿದ್ದು, ವೈನ್ ಸ್ಟೋರ್ ಅನ್ನು ಮಾರಾಟ ಮಾಡಲಿದ್ದಾರೆ ಎಂದು ತಿಳಿಸಿದ್ದರು. ಅದರಂತೆ 2019ರ ಆ.7ರಂದು ಶಿವಣ್ಣ ತನ್ನಿಂದ 20 ಲಕ್ಷ ರೂ. ಪಡೆದಿದ್ದು, ವೈನ್ ಸ್ಟೋರ್‌ನ ಪರವಾನಗಿ ತನ್ನ ಹೆಸರಿಗೆ ವರ್ಗಾಯಿಸಿಕೊಡಲು 2020ರ ಜೂನ್‌ವರೆಗೆ ಸಮಯ ಬೇಕಾಗುತ್ತದೆ ಎಂದಿದ್ದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಅವರು ವೈನ್ ಸ್ಟೋರ್‌ಅನ್ನು ತಮ್ಮ ವಶಕ್ಕೆ ನೀಡದೇ, ತಕ್ಷಣ ಹಣವನ್ನು ಸಹ ಕೊಡದೇ ತಾನು ನೀಡಿದ್ದ 20 ಲಕ್ಷವನ್ನು ಬಡ್ಡಿ ಸಮೇತ 1 ವರ್ಷದೊಳಗೆ ನೀಡುವುದಾಗಿ ತಿಳಿಸಿದ್ದರು. ಈ ಸಂಬಂಧ ಏ. 25ರಂದು ಸಂಜೆ ಸಂಭ್ರಮ ಹೋಟೆಲ್ ಎದುರು ತನ್ನ ಸ್ನೇಹಿತರಾದ ಶ್ರೀನಿವಾಸ್ ಮತ್ತು ನಾರಾಯಣ್ ಸಮ್ಮುಖದಲ್ಲಿ ಪಂಚಾಯಿತಿ ಸೇರಿದ್ದು, ಈ ವೇಳೆ ಪುಟ್ಟರಾಜು ಮತ್ತು ಶಿವಣ್ಣ ಅವಾಚ್ಯ ಪದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಧನರಾಜ್ ಮೇ 9ರಂದು ದೂರು ಸಲ್ಲಿಸಿದ್ದಾರೆ. ವೈನ್ ಸ್ಟೋರ್ ಮಾಲೀಕ ಶಿವಣ್ಣ ಮತ್ತು ಅವರ ಸ್ನೇಹಿತ ಪುಟ್ಟರಾಜು ವಿರುದ್ಧ ಭಾರತೀಯ ದಂಡ ಸಂಹಿತೆ 406, 420, 504, 506ರಡಿ ಪ್ರಕರಣ ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೆಂಗಳೂರು ಇಲ್ಲವೇ ಕಾಶ್ಮೀರ ಜೈಲಿಗೆ ನನ್ನ ಶಿಫ್ಟ್ ಮಾಡಿ

ಮೈಸೂರಲ್ಲಿ ಸೆರೆ ಸಿಕ್ಕ ಉಗ್ರ ಫಹಾದ್ ಬೇಡಿಕೆ

ಮೈಸೂರು, ಮೇ 11(ಆರ್‌ಕೆ)– ತನ್ನನ್ನು ಬೆಂಗಳೂರು ಇಲ್ಲವೇ ಕಾಶ್ಮೀರ ಜೈಲಿಗೆ ಸ್ಥಳಾಂತರಿಸುವಂತೆ ಧಾರವಾಡ ಜೈಲಿನಲ್ಲಿರುವ ಪಾಕ್ ಉಗ್ರ ಫಹಾದ್ ಅಲಿ ಹೊಸ ಬೇಡಿಕೆ ಇಟ್ಟಿದ್ದಾನೆ.

ಮೈಸೂರಲ್ಲಿ ಬಂಧಿತನಾಗಿರುವ ಅಲಿ ಸದ್ಯ ಕಿಮ್ಸ್ ಆಸ್ಪತ್ರೆಯ ಜೈಲು ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ತನ್ನನ್ನು ಬೆಂಗಳೂರು ಅಥವಾ ಕಾಶ್ಮೀರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವಂತೆ ಆಗ್ರಹಿಸಿ ಉಪವಾಸ ನಡೆಸುತ್ತಿದ್ದು, ಅಸ್ವಸ್ಥನಾದ ಕಾರಣ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 2006ರಲ್ಲಿ ಮೈಸೂರಿನ ಹಿನಕಲ್ ರಿಂಗ್ ರಸ್ತೆಯಲ್ಲಿ ಫಹಾದ್ ಅಲಿ ಮತ್ತು ಮೊಹಮದ್ ಹುಸೇನ್‌ನನ್ನು ಪೊಲೀಸರು ಬಂಧಿಸಿದ್ದರು. 15 ವರ್ಷಗಳ ಕಾಲ ಮೈಸೂರು ಜೈಲಿನಲ್ಲಿದ್ದ ಅವರನ್ನು 2021ರಲ್ಲಿ ಧಾರವಾಡ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಇದೀಗ ಹೊಸ ವರಸೆ ಆರಂಭಿಸಿರುವ ಫಹಾದ್, ಬೇರೆ ಜೈಲಿಗೆ ಶಿಫ್ಟ್ ಮಾಡುವಂತೆ ಒತ್ತಾಯಿಸುತ್ತಿದ್ದಾನೆ ಎನ್ನಲಾಗಿದೆ.

ಮೈಸೂರಲ್ಲಿ 3 ದ್ವಿಚಕ್ರ ವಾಹನ ಕಳವು

ಮೈಸೂರು, ಮೇ 11– ಮೈಸೂರು ನಗರದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಮೂರು ದ್ವಿಚಕ್ರ ವಾಹನಗಳು ಕಳವಾಗಿರುವ ಬಗ್ಗೆ ವರದಿಯಾಗಿದೆ.



ಹೆಚ್.ಡಿ.ಕೋಟೆಯ ಹ್ಯಾಂಡ್ ಪೋಸ್ಟ್‌ನಲ್ಲಿ ಗೋಬಿ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಎನ್.ಮಹದೇವಸ್ವಾಮಿಯವರ ತಂದೆ ಅನಾರೋಗ್ಯದಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರ ನೋಡಲು ಬಂದಿದ್ದ ಮಹದೇವಸ್ವಾಮಿ ತಮ್ಮ ಹೀರೋ ಹೋಂಡಾ ಸ್ಪ್ಲೆಂಡರ್ ಪ್ರೊ ಬೈಕ್ (ಕೆ.ಎ.09–ಇಡಿ6473)ಅನ್ನು ಕೆ.ಆರ್.ಆಸ್ಪತ್ರೆಯ ಮೇನ್ ಗೇಟ್‌ನಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ಮೇ 5ರಂದು ಮಧ್ಯಾಹ್ನ ಪಾರ್ಕ್ ಮಾಡಿದ್ದು, ಈ ಬೈಕನ್ನು ಕಳವು ಮಾಡಲಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕ್ಟೀವ್ ಹೋಂಡಾ: ಹೆಬ್ಬಾಳ ಕೈಗಾರಿಕಾ ಬಡಾವಣೆಯ ಕಂಪನಿಯೊಂದರಲ್ಲಿ ಟ್ಯಾಕ್ಸ್ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುವ ಜೆ.ಕೃಷ್ಣ ಅವರು ಕೆಆರ್‌ಎಸ್ ರಸ್ತೆಯ ರೈಲ್ವೆ ಗೇಟ್ ಬಳಿ ಫಾಸ್ಟ್ ಫುಡ್ ಅಂಗಡಿ ನಡೆಸುತ್ತಿದ್ದಾರೆ. ಅವರು ಏ.30ರಂದು ಸಂಜೆ 7.30ರಲ್ಲಿ ಅಂಗಡಿ ಮುಂಭಾಗ ತಮ್ಮ ಆಕ್ಟೀವ್ ಹೋಂಡಾ (ಕೆ.ಎ.09–ಹೆಚ್‌ಎ9959) ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದರು. ರಾತ್ರಿ 8.30ರಲ್ಲಿ ಬಂದು ನೋಡಿದಾಗ ಅದು ಕಳುವಾಗಿರುವುದು ತಿಳಿದಿದೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಜಾಜ್ ಪಲ್ಸರ್: ಮೈಸೂರಿನ ಖಾಸಗಿ ಆಸ್ಪತ್ರೆಯೊಂದರ ಉದ್ಯೋಗಿ ಎನ್.ಆರ್.ಪರಮೇಶ್ ಅವರು ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿರುವ ತಮ್ಮ ಮನೆ ಮುಂದೆ ಮೇ 5ರ ರಾತ್ರಿ ನಿಲ್ಲಿಸಿದ್ದ ಬಜಾಜ್ ಪಲ್ಸರ್ 220 ಬೈಕ್(ಕೆ.ಎ.09–ಹೆಚ್‌ವಿ 3435) ಮರುದಿನ ಬೆಳಗ್ಗೆ ನೋಡಿದರೆ ಕಳವಾಗಿರುವುದು ಗೊತ್ತಾಗಿದೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಹುಮಾನದ ಆಸೆಗೆ ಬಿದ್ದು 1.05 ಲಕ್ಷ ಕಳೆದುಕೊಂಡ ರೈಲ್ವೆ ಉದ್ಯೋಗಿ

ಮೈಸೂರು, ಮೇ 11– ಬಹುಮಾನದ ಆಸೆಗಾಗಿ ರೈಲ್ವೆ ಇಲಾಖೆ ಸಿಬ್ಬಂದಿಯೊಬ್ಬರು 1.05 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಮೈಸೂರಿನ ಸೆನ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುವೆಂಪುನಗರ ಕೆ–ಬ್ಲಾಕ್‌ನಲ್ಲಿ ವಾಸವಿರುವ ರೈಲ್ವೆ ಇಲಾಖೆ ಸಿಬ್ಬಂದಿ ಆರ್.ರಾಘವೇಂದ್ರ ರಾವ್ ಹಣ ಕಳೆದು ಕೊಂಡವರಾಗಿದ್ದು, ಇವರಿಗೆ ಬಹುಮಾನ ಬಂದಿರುವುದಾಗಿ ಮೆಶ್ಯೋ ಆನ್‌ಲೈನ್ ಶಾಪಿಂಗ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಪೋಸ್ಟ್‌ಕಾರ್ಡ್‌ವೊಂದು ಬಂದಿದೆ.

ಮೇ 4ರಂದು ವ್ಯಕ್ತಿಯೋರ್ವ 8583958405 ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ್ದಾನೆ. ತಾನು ಮೆಶ್ಯೋ ಆನ್‌ಲೈನ್ ಶಾಪಿಂಗ್ ಪ್ರೈವೇಟ್ ಲಿಮಿಟೆಡ್‌ನಿಂದ ಕರೆ ಮಾಡುವುದಾಗಿ ತಿಳಿಸಿ, ಬಹುಮಾನ ಪಡೆಯಲು ಹಣ ಜಮೆ ಮಾಡಬೇಕೆಂದು ಎರಡು ಬ್ಯಾಂಕ್ ಖಾತೆಗಳಿಗೆ ಒಟ್ಟು 1,05,200 ರೂ.ಗಳನ್ನು ಜಮೆ ಮಾಡಿಸಿಕೊಂಡು ಮೋಸ ಮಾಡಲಾಗಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಮೈಸೂರು ನಗರ ಸೆನ್ ಕ್ರೈಂ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಂಪನಿ ಮಾಜಿ ಚಾಲಕನಿಂದ ಲಕ್ಷಾಂತರ ರೂ. ತಡೆಗೋಡೆ ಸಾಮಗ್ರಿ ಕಳವು

ಮೈಸೂರು, ಮೇ 11–ಮೈಸೂರಿನ ಹೆಬ್ಬಾಳು ಕೈಗಾರಿಕಾ ಬಡಾವಣೆಯಲ್ಲಿರುವ ರೋಡ್ ಸೇಫ್ಟಿ ಕಂಪನಿಯೊಂದರ ಮಾಜಿ ಚಾಲಕ 1.20 ಲಕ್ಷ ರೂ. ಮೌಲ್ಯದ ತಡೆಗೋಡೆ ಸಾಮಗ್ರಿಗಳನ್ನು ಕಳವು ಮಾಡಿರುವ ಪ್ರಕರಣ ನಡೆದಿದೆ.

ಅಲ್ಲಿನ ರಾಣಿ ಮದ್ರಾಸ್ ರಸ್ತೆಯಲ್ಲಿರುವ ವಿಸ್ರಾ ರೋಡ್ ಸೇಫ್ಟಿ ಕಂಪನಿಯಲ್ಲಿ ಕೆರೆಗಳಿಗೆ ತಡೆಗೋಡೆ ನಿರ್ಮಿಸುವ ಸಲುವಾಗಿ ಲಕ್ಷಾಂತರ ರೂ. ಮೌಲ್ಯದ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ. ಮೇ 3ರಂದು ನೋಡಿದಾಗ ಸಾಮಗ್ರಿಗಳು ಕಳುವಾಗಿರುವುದು ಗೊತ್ತಾಯಿತು.

ಸಿಸಿ ಕ್ಯಾಮರಾ ಪರಿಶೀಲಿಸಲಾಗಿ ಇದೇ ಸಂಸ್ಥೆಯಲ್ಲಿ ಈ ಹಿಂದೆ ಚಾಲಕನಾಗಿದ್ದ ಮಂಜು ಎಂಬಾತ ತನ್ನ ಇಬ್ಬರು ಸಹಚರರೊಂದಿಗೆ ಸಾಮಗ್ರಿಗಳನ್ನು ಕಳವು ಮಾಡಿರುವುದು ಪತ್ತೆಯಾಗಿದೆ. ಈ ಸಂಬಂಧ ಕಂಪನಿ ಮಾಲೀಕ ಹೆಚ್.ಎಸ್. ಸೋಮಶೇಖರ್ ಮೇ 9ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸಿದ್ದಲಿಂಗಪುರದಲ್ಲಿ ಬಾರ್ ಬಾಗಿಲು ಮೀಟಿ ನಗದು ಕಳವು

ಮೈಸೂರು, ಮೇ 11– ಮೈಸೂರಿನ ಸಿದ್ಧಲಿಂಗಪುರದಲ್ಲಿರುವ ಎಸ್.ಕೆ.ಬಾರ್ ಅಂಡ್ ರೆಸ್ಟೋರೆಂಟ್ ಬಾಗಿಲು ಮೀಟಿ ಒಳಗೆ ನುಗ್ಗಿರುವ ಖದೀಮರು 70 ಸಾವಿರ ರೂ. ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಮೇ 8 ರಂದು ಬೆಳಗ್ಗೆ 7 ಗಂಟೆ ಸಮಯದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಮುಂಭಾಗ ಸ್ವಚ್ಛತಾ ಕಾರ್ಯ ನಡೆಸಲು ತೆರಳಿದ್ದ ರಾಜೇಂದ್ರ ಎಂಬಾತ ನೋಡಿದಾಗ ಬಾಗಿಲು ಮೀಟಿರುವುದು ಗೊತ್ತಾಗಿದೆ. ಆತ ನೀಡಿದ ಮಾಹಿತಿ ಮೇರೆಗೆ ತೆರಳಿ ಒಳಗೆ ನೋಡಿದಾಗ ಕ್ಯಾಷ್ ಬಾಕ್ಸ್‌ನಲ್ಲಿದ್ದ 70 ಸಾವಿರ ರೂ.ಗಳನ್ನು ಕಳವು ಮಾಡಿರುವುದು ತಿಳಿದು ಬಂತು ಎಂದು ಬಾರ್ ಮಾಲೀಕ ದಿನೇಶ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ ಗುರುವಾರ 12 ಮೇ 2022

ಸಣ್ಣಪುಟ್ಟ ಸಮಾಜಗಳು ಮುಖ್ಯವಾಹಿನಿಗೆ ಬರಲು ಆರೋಗ್ಯ, ಶಿಕ್ಷಣಕ್ಕೆ ಆದ್ಯತೆ ಅಗತ್ಯ



ಹುಣಸೂರು, ಮೇ 11(ಕೆಕೆ)–ಸಣ್ಣಪುಟ್ಟ ಸಮಾಜಗಳು ಮುಖ್ಯವಾಹಿನಿಗೆ ಬರಬೇಕಾದರೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ತಾಲೂಕಿನ ಉದ್ದೂರ್‌ಕಾವಲ್ ಗ್ರಾಮ ಪಂಚಾಯಿತಿಯ ನಂಜಾಪುರ ಗ್ರಾಮದಲ್ಲಿ ಶ್ರೀ ಶಿವಜ್ಯೋತಿ ಗಾಣಿಗರ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣಪುಟ್ಟ ಸಮಾಜಗಳು ಸದೃಢವಾಗಬೇಕು. ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೆಚ್ಚಿನ ಅನುದಾನ ಬಿಡುಗಡೆ ಮಾಡಿದ್ದರು. ಎಲ್ಲಾ ಸಮಾಜಗಳು ಮುಖ್ಯವಾಹಿನಿಗೆ ಬರುವ ದೃಷ್ಟಿಯಿಂದ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರು. ಸಣ್ಣಪುಟ್ಟ ಜನಾಂಗಗಳು ಸಮುದಾಯ ಭವನವನ್ನು ನಿರ್ಮಿಸಿಕೊಳ್ಳಲು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ್ದರು ಎಂದರು.

ಪ್ರಾಥಮಿಕ ಶಿಕ್ಷಣ ಸಂಘದ ನಿರ್ದೇಶಕ ಬಸವರಾಜು ಮಾತನಾಡಿ, ಸಣ್ಣ ಸಮುದಾಯಗಳು ಗುಂಪುಗಾರಿಕೆ ಬಿಟ್ಟು, ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಲು ಪೋಷಕರು ಮುಂದಾಗಬೇಕು. ಪ್ರತಿಯೊಬ್ಬರಿಗೆ ಒಂದಲ್ಲ ಒಂದು ಸಮಸ್ಯೆ ಇರುತ್ತದೆ. ಸಮಸ್ಯೆಗಳನ್ನು ಬದಿಗಿಟ್ಟು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಜನಾಂಗದ ಗ್ರಾ.ಪಂ. ಸದಸ್ಯರಿಗೆ ಸನ್ಮಾನ: ಹುಣಸೂರು ತಾಲೂಕಿನ ಗಾಣಿಗ ಜನಾಂಗದ ಗ್ರಾಪಂ ಸದಸ್ಯರಾದ ಗೌರಿ ಪುರದ ಗೋವಿಂದ ಶೆಟ್ಟಿ, ಧರ್ಮಾಪುರದ ಮಹದೇವ್, ತರಿಕಲ್‌ನ ಹೇಮಾವತಿ .ಎಂ.ಆರ್, ಹನಗೋಡಿನ ರತ್ನಶ್ರೀಧರ್, ಜಯಲಕ್ಷ್ಮಿ, ನಂಜಾಪುರ ಮನು ಕುಮಾರ್, ಸುಭಾಸ್ ಕಾಲೋನಿ ರಮೇಶ್, ವಡ್ಡಂಬಾಳಿನ ರವಿ ಸೇರಿದಂತೆ 14 ಜನ ಜನಾಂಗದ ಸದಸ್ಯರನ್ನು ನಂಜಾಪುರ ಗಾಣಿಗ ಯುವ ಬಳಗದಿಂದ ಸನ್ಮಾನಿಸಲಾಯಿತು. ಉಪನ್ಯಾಸಕ ಪುಟ್ಟಶೆಟ್ಟಿ, ಸ್ಕಂದ ಲೈಫ್ ಸೈನ್ಸ್ ಪ್ರೈವೇಟ್ ಲಿ.ನ ಅಧ್ಯಕ್ಷ ಡಾ. ಯೋಗೇಶ್, ಕೆಎಸ್‌ಎಸ್ ಅಧಿಕಾರಿ ಕೆ.ಎಸ್.ಕುಮಾರ್, ಮಾತನಾಡಿದರು. ಗ್ರಾಪಂ ಸದಸ್ಯರಾದ ಮನುಕುಮಾರ್, ವೀರಭದ್ರಸ್ವಾಮಿ, ಪದ್ಮಮ್ಮ, ಗಾಣಿಗ ಸಮಾಜದ ಗೌರವಾಧ್ಯಕ್ಷ ಶಿವಣ್ಣ, ಗುತ್ತಿಗೆದಾರ ನಾಗರಾಜು, ಉದ್ಯಮಿ ಕೃಷ್ಣ ಪ್ರಕಾಶ್, ಗ್ರಾಪಂ ಮಾಜಿ ಸದಸ್ಯ ಚಂದ್ರಶೇಖರ್, ಸೋಮಶೇಖರ್, ನಂಜುಂಡಸ್ವಾಮಿ, ಸಂಘದ ಉಪಾಧ್ಯಕ್ಷ ಪುಟ್ಟಮಾದಶೆಟ್ಟಿ ನಿರ್ದೇಶಕರಾದ ಶೇಖರ್.ಪಿ, ನಾಗರಾಜು, ಸತೀಶ್, ಶಿವಕುಮಾರ್ ಮತ್ತಿತರರು ಹಾಜರಿದ್ದರು.

ಮಾದೇಗೌಡನಹುಂಡಿ ಕೃಷಿ ಪತ್ತಿನ ಸಂಘದ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ

ಹೆಚ್.ಎನ್.ದೇವರಾಜು ಅಧ್ಯಕ್ಷ, ಉಪಾಧ್ಯಕ್ಷರಾಗಿ ನಾಗೇಂದ್ರ ಅವಿರೋಧ ಆಯ್ಕೆ



ತಿ.ನರಸೀಪುರ, ಮೇ11(ಎಸ್‌ಎಸ್) – ತಾಲೂಕಿನ ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹುನುಗನಹಳ್ಳಿಯ ಹೆಚ್.ಎನ್.ದೇವರಾಜು, ಉಪಾಧ್ಯಕ್ಷರಾಗಿ ಮಾದೇಗೌಡನಹುಂಡಿ ಗ್ರಾಮದ ನಾಗೇಂದ್ರ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷ–ಉಪಾಧ್ಯಕ್ಷರಾಗಿದ್ದ ಎನ್.ಅನಿಲ್ ಕುಮಾರ್ ಹಾಗೂ ವೆಂಕಟೇಶ್ ಒಡಂಬಡಿಕೆಯಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ತೆರವಾಗಿದ್ದ ಸ್ಥಾನಕ್ಕೆ ಮುಂದಿನ ನಾಲ್ಕು ವರ್ಷಗಳ ಅವಧಿಗೆ ಸಂಘದ ಕಚೇರಿಯಲ್ಲಿಂದು ಚುನಾವಣೆ ನಡೆಯಿತು. ಎರಡು ಪ್ರತ್ಯೇಕ ಸ್ಥಾನಗಳಿಗೆ ತಲಾ ಒಬ್ಬೊಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರಿಂದ ಇಮ್ಮಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಭಾಮಣಿ ಘೋಷಿಸಿದರು.

ನಿರ್ದೇಶಕರಾದ ವೆಂಕಟೇಶ್, ಸಿ.ನಾಗರಾಜು, ಹೆಚ್.ಎನ್.ರಾಜೇಶ್, ಶ್ರೀನಿವಾಸ, ಅನಿಲ್ ಕುಮಾರ್, ಗುರು, ನಾಗಮ್ಮ, ಅಂಬರೀಶ್, ನಾಗಮ್ಮ ಕೋಂ ಚೆಲುವೇಗೌಡ ಹಾಜರಿದ್ದು, ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ಸೂಚಿಸಿದರು.

ಈ ವೇಳೆ ಮುಖಂಡರಾದ ಎಸ್.ಚನ್ನೇಗೌಡ, ರಾಜು, ಸುರೇಶ್, ವೆಂಕಟೇಶ್, ನಂಜುಂಡಸ್ವಾಮಿ, ಮೆಲ್ಲಹಳ್ಳಿ ಗ್ರಾಪಂ ಸದಸ್ಯರಾದ ಶಂಕರ್, ಪ್ರಶಾಂತ್, ರಾಮಕೃಷ್ಣ, ಶಿವಣ್ಣ, ಬಾಬು, ಎಂ.ಮಾದೇಗೌಡ, ಶ್ರೀನಿವಾಸ್, ಚಂದ್ರು,ರಂಗಾಚಾರಿ ಹುಂಡಿ ಸುನೀಲ್, ನರಸೇಗೌಡ, ಚುಂಚೇಗೌಡ, ಸಂಘದ ಸಿಇಓ ರಾಜೇಶ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 **ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ):** ಬೆ.9.30ಕ್ಕೆ, ಮ.12ಕ್ಕೆ, ಮ.2.25ಕ್ಕೆ, ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 2 **ದ್ವಿಮುಖ (ಕ):** ಬೆ.10.30ಕ್ಕೆ, **ಅವತಾರ ಪುರುಷ (ಕ):** ಮ.1.15ಕ್ಕೆ, ರಾ.7.15ಕ್ಕೆ, **ಕೆಜಿಎಫ್ 2 (ಕ):** ಮ.3.55ಕ್ಕೆ, **ಸಿಬಿಐ 5: ದಿ ಬ್ರೈನ್ (ಮ):** ರಾ.10ಕ್ಕೆ.

ಸ್ಕ್ರೀನ್ 3 **ಪುರುಷೋತ್ತಮ (ಕ):** ಬೆ.10.15ಕ್ಕೆ, **ಟಕ್ಕರ್ (ಕ):** ಮ.1.15ಕ್ಕೆ, **ರನ್‌ವೇ 34 (ಹಿಂ):** ಸಂ.4ಕ್ಕೆ, **ದಿ ಕನ್ವರ್ಷನ್ (ಹಿಂ):** ರಾ.7ಕ್ಕೆ, **ಮಕಲ್ (ಮ):** ರಾ.9.50ಕ್ಕೆ.

ಸ್ಕ್ರೀನ್ 4 **ಕೆಜಿಎಫ್ 2(ಕ):** ಬೆ.10ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ, **ಐಂಗಾರನ್ (ತ):** ಮ.1.15ಕ್ಕೆ, **ಅವತಾರ ಪುರುಷ (ಕ):** ಸಂ.4ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1 **ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ):** ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 **ಕೆಜಿಎಫ್ 2(ಕ):** ಬೆ.9.40ಕ್ಕೆ, ಮ.3.40ಕ್ಕೆ, ರಾ.9.50ಕ್ಕೆ, **ಅವತಾರ ಪುರುಷ (ಕ):** ಮ.12.55ಕ್ಕೆ, ರಾ.7.05ಕ್ಕೆ.

ಸ್ಕ್ರೀನ್ 3 **ಡಾಕ್ಟರ್ ಸ್ಟ್ರೇಂಜ್(ಇಂ):** ಬೆ.9.30ಕ್ಕೆ, ಮ.3.35ಕ್ಕೆ, **ಕೆಜಿಎಫ್ 2 (ಕ):** ಮ.12.10ಕ್ಕೆ, ಸಂ.6.15ಕ್ಕೆ, **ಡಾಕ್ಟರ್ ಸ್ಟ್ರೇಂಜ್ (ಹಿಂ):** ರಾ.9.40ಕ್ಕೆ.

ಸ್ಕ್ರೀನ್ 4 **ಅವತಾರ ಪುರುಷ (ಕ):** ಬೆ.10.15ಕ್ಕೆ, **ಟಕ್ಕರ್ (ಕ):** ಮ.1.05ಕ್ಕೆ, **ಐಂಗಾರನ್ (ತ):** ಮ.3.50ಕ್ಕೆ, **ಪುರುಷೋತ್ತಮ (ಕ):** ಸಂ.6.40ಕ್ಕೆ, **ಸಿಬಿಐ (ಮ):** ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 **ಪುರುಷೋತ್ತಮ (ಕ):** ಬೆ.10.30ಕ್ಕೆ, **ಅವತಾರ ಪುರುಷ (ಕ):** ಮ.1.30ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ.

ಸ್ಕ್ರೀನ್ 2 **ಅವತಾರ ಪುರುಷ (ಕ):** ಬೆ.10.30ಕ್ಕೆ.

ಸ್ಕ್ರೀನ್ 3 **ಡಾಕ್ಟರ್ ಸ್ಟ್ರೇಂಜ್ (ಇಂ):** ಬೆ.10.30ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ.

ಸ್ಕ್ರೀನ್ 4 **ಟಕ್ಕರ್ (ಕ):** ಬೆ.10.30ಕ್ಕೆ, ಸಂ.4.05ಕ್ಕೆ, **ಪುರುಷೋತ್ತಮ (ಕ):** ಮ.1ಕ್ಕೆ, **ಸಿಬಿಐ 5: ದಿ ಬ್ರೈನ್ (ಮ):** ಸಂ.6.30ಕ್ಕೆ, ರಾ.9.45ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, **ಆರ್‌ಆರ್‌ಆರ್ (ಕ):** ರಾ.9.30ಕ್ಕೆ, **ಕೆಜಿಎಫ್ 2 (ಹಿಂ):** ಬೆ.10.45ಕ್ಕೆ, ಸಂ.6ಕ್ಕೆ, **ಆರ್‌ಆರ್‌ಆರ್ (ತೆ):** ಮ.2.15ಕ್ಕೆ, **ಬೀಸ್ಟ್ (ತ):** ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, **ಲವ್ ಮಾಕ್ಟೇಲ್ 2 (ಕ):** ಮ.12.25ಕ್ಕೆ, ಮ.3.05ಕ್ಕೆ, **ರಾಧೇಶ್ಯಾಮ್ (ತೆ):** ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, **ದಿ ಬ್ಯಾಟ್‌ಮ್ಯಾನ್ (ಇಂ):** ಬೆ.11.55ಕ್ಕೆ, ಸಂ.5.55ಕ್ಕೆ, **ಗಂಗೂಬಾಯ್ ಕಾಠಿಯಾವಾಡಿ (ಹಿಂ):** ರಾ.9.30ಕ್ಕೆ, **ಎದರ್ಕುಂ ತುನಿಂದವನ್ (ತ):** ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆಚಾರ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕೆಜಿಎಫ್ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಯ್ಯಂಗಾರನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಟಕ್ಕರ್ (ಕ)	4 ಪ್ರದರ್ಶನಗಳು

ಕವಲಂದಾ ಬೋಲೋತೆ ಛೋಟಾ ಪಾಕಿಸ್ತಾನ್ ಘೋಷಣೆ ಪ್ರಕರಣ

ಆರೋಪಿಗಳ ಜಾಮೀನು ಅರ್ಜಿ ವಜಾ

ನಂಜನಗೂಡು, ಮೇ 11– ತಾಲೂಕಿನ ಕವಲಂದೆ ಗ್ರಾಮದಲ್ಲಿ ಕಳೆದ ರಂಜಾನ್ ಹಬ್ಬದ ಸಂದರ್ಭದಲ್ಲಿ ಮುಸ್ಲಿಮರು ಪಾರ್ಥನೆ ಸಲ್ಲಿಸಲು ಮಸೀದಿಗೆ ತೆರಳುವ ವೇಳೆ 'ಕವಲಂದಾ ಬೋಲೋತೆ ಛೋಟಾ ಪಾಕಿಸ್ತಾನ್' ಎಂದು ವೀಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಆರೋಪಿಗಳ ಜಾಮೀನು ಅರ್ಜಿಯನ್ನು ನಂಜನಗೂಡು ನಗರದ ಒಂದನೇ ಎಸಿಜೆ ಮತ್ತು ಜೆಎಂಎಂಸಿ ನ್ಯಾಯಾಲಯ ವಜಾಗೊಳಿಸಿದೆ.

ಕವಲಂದೆ ಗ್ರಾಮದ ಅನಾನ್ ಅಲಿಖಾನ್ ಮತ್ತು ಫಯಾಜ್ ಷರೀಫ್ ವಿರುದ್ಧ ಕವಲಂದೆ ಪೊಲೀಸರು ಜಾತಿ ಮತ್ತು ಧರ್ಮಗಳ ನಡುವೆ ಅಶಾಂತಿ ಉಂಟು ಮಾಡುವ ಆಪಾದನೆ ಮೇಲೆ ಬಂಧಿಸಿದ್ದರು. ನಂಜನಗೂಡು ಒಂದನೇ ಎಸಿಜೆ ಮತ್ತು ಜೆಎಂಎಂಸಿ ನ್ಯಾಯಾಲಯದ ನ್ಯಾಯಾಧೀಶ ಎ.ಶ್ರೀಧರ್ ಬುಧವಾರ ಆರೋಪಿಗಳ ಜಾಮೀನು ಅರ್ಜಿಯನ್ನು ವಜಾಗೊಳಿಸಿದರು. ಸರ್ಕಾರಿ ಅಭಿಯೋಜಕ ಪುರುಷೋತ್ತಮ್ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು ಎಂದು ಸಿಪಿಐ ಲಕ್ಷ್ಮಿಕಾಂತ್ ತಳವಾರ್ ತಿಳಿಸಿದ್ದಾರೆ.

ನಾಳೆ ಬೆಂಗಳೂರಿನಲ್ಲಿ ನಡೆಯುವ 'ಜಲಧಾರೆ' ಯಶಸ್ವಿಗೊಳಿಸಿ

ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕ ಮನವಿ



ಹೆಚ್.ಡಿ.ಕೋಟೆ, ಮೇ 11(ಮಂಜು)– ಕೋಟೆ, ಸರಗೂರು, ತಾಲೂಕಿನಿಂದ' ಜೆಡಿಎಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೆಂಗಳೂರಿನಲ್ಲಿ ಮೇ 13ರಂದು ನಡೆಯಲಿರುವ ಜಲಧಾರೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜೆಡಿಎಸ್ ಮುಖಂಡ, ಸಮಾಜ ಸೇವಕ ಕೆ.ಎಂ.ಕೃಷ್ಣ ನಾಯಕ ಮನವಿ ಮಾಡಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನ ಖಾಸಗಿ ಕಲ್ಯಾಣ ಮಂಟಪದಲ್ಲಿ ಜಲಧಾರೆ ಪೂರ್ವಭಾವಿ ಸಭೆ ಕುರಿತು ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಜಲಧಾರೆ ಕಾರ್ಯಕ್ರಮಕ್ಕೆ ಕೋಟೆ, ಸರಗೂರು, ತಾಲೂಕಿನಿಂದ ಪಕ್ಷದ ಕಾರ್ಯಕರ್ತರು, ಮುಖಂಡರು ಅಭಿಮಾನಿಗಳನ್ನು, ಹೆಚ್ಚಿನ ಸಂಖ್ಯೆಯಲ್ಲಿ ಕರೆತರಬೇಕು ಎಂದು ಸಂಪೂರ್ಣ ಜವಾಬ್ದಾರಿ ನನಗೆ ವಹಿಸಿದ್ದಾರೆ. ಸುಮಾರು ನೂರು ಬಸ್ಸುಗಳಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರುಗಳು ಅಭಿಮಾನಿಗಳು ತೆರಳುತ್ತಿದ್ದು, ಆ ಮೂಲಕ ಕುಮಾರಸ್ವಾಮಿ ಅವರ ಕೈ ಬಲಗೊಳಿಸೋಣ ಎಂದರು. ಕಾರ್ಯಕ್ರಮ ಅಂದು ಬೆಂಗಳೂರಿನ ನೆಲಮಂಗಲದಲ್ಲಿ ಮಧ್ಯಾಹ್ನ 4ಗಂಟೆಗೆ ನಡೆಯುವ ಕಾರಣ ತಾಲೂಕಿನಿಂದ 8 ಗಂಟೆಗೆ ಬಸ್ಸುಗಳು ಹೊರಡಲಿವೆ ಎಂದು ತಿಳಿಸಿದರು.

ವಿಧಾನಸಭಾ ಚುನಾವಣೆಯ ಟಿಕೆಟ್ ಅನ್ನು ಮಾಜಿ ಪ್ರಧಾನಮಂತ್ರಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಮಾಜಿ ಸಚಿವರಾದ ಸಾರಾ ಮಹೇಶ್ ಒಗ್ಗೂಡಿ ಪಕ್ಷದ ಅಭ್ಯರ್ಥಿ ಹೆಸರನ್ನು ಘೋಷಿಸಲಿದ್ದಾರೆ ಗಾಳಿಸುದ್ದಿಗಳಿಗೆ ಯಾರೂ ತಲೆಕೆಡಿಸಿಕೊಳ್ಳಬಾರದು. ಶೀಘ್ರದಲ್ಲೇ ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ತಾಲೂಕಿನಲ್ಲಿ ಬೃಹತ್ ಕಾರ್ಯಕರ್ತರು, ಮುಖಂಡರ ಸಮಾವೇಶ ನಡೆಸಿ ಸದ್ಯದಲ್ಲೇ ನೂತನ ಕಚೇರಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು, ಹಿರಿಯ ಮುಖಂಡ ಕೆ.ಜಿ.ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದಾಸೇಗೌಡ, ಮಾಜಿ ಅಧ್ಯಕ್ಷ ಶಂಕರಲಿಂಗೇಗೌಡ, ಶಂಭುಗೌಡ, ರಘು, ಮಾಯಪ್ಪ, ಜಿತೇಂದ್ರ, ಉಮೇಶ, ಸುಂದರಣ್ಣ, ವೈಕುಂಠ ನಾಯಕ, ಗಣೇಶ್, ಶಿವಯ್ಯ, ಗ್ಯಾಸ್ ಪ್ರಕಾಶ್, ಕಾಳ ಅಪ್ಪಾಜಿ, ಗೋವಿಂದೇಗೌಡ, ಕೆಂಪೇಗೌಡ, ವಕೀಲ ಪ್ರಶಾಂತ್, ಪ್ರಸನ್ನ, ನಟರಾಜ್ ಗೋವಿಂದರಾಜು, ಇನ್ನು ನೂರಾರು ಕಾರ್ಯಕರ್ತರು ಹಾಜರಿದ್ದರು.

ಸರಗೂರಿನಲ್ಲಿ ಶಂಕರಾಚಾರ್ಯರ ಜಯಂತಿ ಆಚರಣೆ



ಸರಗೂರು, ಮೇ 11 (ನಾಗೇಶ್)– ಜಪ ಮಾಡುವ ಬ್ರಾಹ್ಮಣರು ಅನುಷ್ಠಾನ ಮಾಡುವಷ್ಟು ಕಾಲ ಜಿತೇಂದ್ರಿಯರಾಗಿರಬೇಕು ಎಂದು ಬ್ರಾಹ್ಮಣ ವಿಪ್ರ ಸಮಾಜದ ಹಿರಿಯ ಮುಖಂಡ ಎಸ್.ನಾರಾಯಣ್ ಅಭಿಪ್ರಾಯಪಟ್ಟರು.

ಪಟ್ಟಣದ ಬ್ರಾಹ್ಮಣ ಶ್ರೀರಾಮಮಂದಿರದಲ್ಲಿ ಆದಿಗುರು ಶ್ರೀಶಂಕರಾಚಾರ್ಯರ ಜಯಂತಿಯಲ್ಲಿ ಅವರು ಮಾತನಾಡಿ, ಬ್ರಾಹ್ಮಣರು ಸದಾ ಕಾಲವು ಗುರುಗಳು ಉಪದೇಶಿಸಿದ ಮಂತ್ರ ಜಪವನ್ನು ಮಾಡಿಕೊಂಡು ಕಷ್ಟ ಕಾರ್ಪಣ್ಯಗಳಿಗೆ ನಗುಮುಖದಿಂದ ಭಕ್ತರ ಬೇಡಿಕೆಯನ್ನು ದೇವರಮಂದಿಟ್ಟರೆ, ಪ್ರತ್ಯಕ್ಷ ಫಲ ನೀಡುವುದರಲ್ಲಿ ಸಂಶಯವಿಲ್ಲ ಎಂದರು. ಈ ವೇಳೆ ಆದಿಗುರು ಶ್ರೀಶಂಕರಾಚಾರ್ಯರ ಭಾವಚಿತ್ರಕ್ಕೆ ವಿವಿಧ ಹೂವಿನಿಂದ ಅಲಂಕರಿಸಿ, ಮಹಾಮಂಗಳಾರತಿ ಮಾಡಲಾಯಿತು. ವೇದ ಮಾತಾ ಶ್ರೀ ಗಾಯತ್ರಿ ಬ್ರಾಹ್ಮಣ ಸಮಾಜದ ತಾಲೂಕು ಅಧ್ಯಕ್ಷ ಶಾಂಭುಮೂರ್ತಿ, ಪುರೋಹಿತರಾದ ಹರೀಶ್, ಗೋಪಿ, ಸಮಾಜದ ಮುಖಂಡರಾದ ಎಸ್. ನಾರಾಯಣ್, ಶ್ರೀವತ್ಸ, ಸುಕೃತ್ ಭಾರದ್ವಾಜ್ ಇನ್ನಿತರರು ಭಾಗವಹಿಸಿದ್ದರು.

ಸರ್ಕಾರ ಇಲ್ಲದಿದ್ದರೆ ಶಾಸಕ ಗ್ರಾಪಂ ಸದಸ್ಯರಿಗಿಂತ ಕೀಳು

ಶಾಸಕ ಕೆ. ಮಹದೇವ್ ಬೇಸರ



ಪಿರಿಯಾಪಟ್ಟಣ, ಮೇ 11 (ವೀರೇಶ್)– ಶಾಸಕನಾದರೂ ಸರ್ಕಾರವಿಲ್ಲದಿದ್ದರೆ ಆಯಾ ಶಾಸಕ ಗ್ರಾಪಂ ಸದಸ್ಯರಿಗಿಂತ ಕೀಳು ಎಂದು ಶಾಸಕ ಕೆ ಮಹದೇವ್ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ದೊಡ್ಡಬೇಲಾಳು ಗ್ರಾಮದಲ್ಲಿ 14 –15ನೇ ಹಣಕಾಸು ನಿಧಿಯಲ್ಲಿ ನೂತನವಾಗಿ 9 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಗ್ರಾಮ ಪಂಚಾಯ್ತಿ ಕಟ್ಟಡದ ನೂತನ ಸಭಾಂಗಣ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಅಧಿಕಾರ ವಹಿಸಿಕೊಂಡು 4 ವರ್ಷಗಳಾಗುತ್ತ ಬಂದಿದ್ದು, 2 ವರ್ಷಗಳ ಕಾಲ ಕೊರೊನಾ ಹಾಗೂ 1 ವರ್ಷ ಅತಿವೃಷ್ಟಿಯಿಂದ ಯಾವುದೇ ಅಭಿವೃದ್ಧಿ ಕಾರ್ಯ ನಡೆಯಲಿಲ್ಲ. ನಾನಾದರೂ ಎಷ್ಟು ತಾನೇ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಇಲ್ಲ. ಸರ್ಕಾರ ಇಲ್ಲದಿದ್ದರೆ ನಾವು ತಾಲೂಕಿನ ಅನುದಾನಕ್ಕಾಗಿ ಎಷ್ಟೆಲ್ಲ ಪರಿಪಾಟಲು ಅನುಭವಿಸಬೇಕಾಗುತ್ತದೆ ಎಂಬುದು ನಮಗೆ ಮಾತ್ರ ಗೊತ್ತು ನಮ್ಮ ಸ್ಥಿತಿ ಯಾವ ಕಟ್ಟಕಡೆಯ ರಾಜಕಾರಣಿಗಳಿಗೂ ಬೇಡ ಎಂದು ವಿಷಾದಿಸಿದರು. ದೊಡ್ಡಬೇಲಾಳು ಗ್ರಾಮದಲ್ಲಿ ಈಗಾಗಲೇ ಸಾಕಷ್ಟು ಕೆಲಸವಾಗಿದೆ. ಆದರೂ ಸಹ ಗ್ರಾಮಸ್ಥರು ಇನ್ನೂ ಕೆಲಸ ಬಾಕಿ ಇದೆ ಎಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅನುದಾನದ ಕೊರತೆಯಿಂದ ಹಂತ ಹಂತವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಪಟ್ಟಣ ವ್ಯಾಪ್ತಿಗೆ ಸಿಗುವಂತ ಸೌಲಭ್ಯಗಳನ್ನು ಗ್ರಾಪಂ ವ್ಯಾಪ್ತಿಗೂ ವಿಸ್ತರಿಸಬೇಕು ಎಂಬುದೇ ನಮ್ಮ ಗುರಿಯಾಗಿದ್ದು, ನನ್ನ ಅವಿರತ ಶ್ರಮದಿಂದಾಗಿ ತಾಲೂಕಿನಾದ್ಯಂತ ಆದಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿದ್ದರೂ ಸಹ ಇನ್ನೂ ಬೆಟ್ಟದಷ್ಟು ಬಾಕಿ ಇದೆ. ಇದಕ್ಕೆ ಈ ಹಿಂದೆ ಆಳಿದ ಶಾಸಕರ ನಿರ್ಲಕ್ಷ್ಯವೇ ಕಾರಣ ಎಂದು ದೂರಿದರು. ತಾಲೂಕಿನಲ್ಲಿ ವಿದ್ಯುತ್ ಸಮಸ್ಯೆ ಅತೀ ಹೆಚ್ಚಾಗಿದ್ದು, ತಕ್ಷಣವೇ ಇದರ ಬಗ್ಗೆ ಗಮನಹರಿಸಿ ಸರಿಪಡಿಸಬೇಕೆಂದು ಚೆಸ್ಕಾಂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಇಓ ಕೃಷ್ಣಕುಮಾರ್ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ಸ್ವಾಮಿಗೌಡ, ನಾಗೇಂದ್ರ, ಮಹದೇವ, ಕೃಷ್ಣಾಚಾರ್, ಅಬ್ಬಾಸ್ ನಾಗಣ್ಣ, ಫಯಾಜ್ ಮತ್ತಿತರರು ಹಾಜರಿದ್ದರು.

ರಾಜ್ಯ ರೈತ ಸಂಘ-ಹಸಿರುಸೇನೆ ಹೋಬಳಿ ಘಟಕ ಉದ್ಘಾಟನೆ



ಹುಲ್ಲಹಳ್ಳಿ, ಮೇ 11(ಚಿನ್ನಸ್ವಾಮಿ)– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆಯ ಹುಲ್ಲಹಳ್ಳಿ ಹೋಬಳಿ ಘಟಕ ಉದ್ಘಾಟಿಸಲಾಯಿತು.

ಗ್ರಾಮದ ಜೋಯಿಸ್ ವೃತ್ತದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹರಳಪುರ ಮಂಜೇಗೌಡ, ರೈತನು ವರ್ಷಪೂರ ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ ರೈತ ಆತ್ಮಹತ್ಯೆ ದಾರಿ ಹಿಡಿಯುತ್ತಿದ್ದಾನೆ ಆದ್ದರಿಂದ ಸರ್ಕಾರ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಬೇಕು ಎಂದು ಒತ್ತಾಯಿಸಿದರು. ರೈತರ ಬೇಡಿಕೆ ಈಡೇರುವವರೆಗೂ ನಮ್ಮ ಸಂಘದ ಹೋರಾಟ ನಿರಂತರವಾಗಿರುತ್ತದೆ ಎಂದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷ ಮಹೇಶ್, ಮಾಜಿ ಗ್ರಾಪಂ ಅಧ್ಯಕ್ಷ ಮದರಾಜ್, ಗ್ರಾಪಂ ಸದಸ್ಯ ಮಲ್ಲಿಕಾರ್ಜುನ, ಕೃಷಿ ಟ್ರಾಕ್ಟರ್ ಮಾಲೀಕರ ಸಂಘದ ಅಧ್ಯಕ್ಷ ದುಗ್ಗಹಳ್ಳಿ ಶಿವನಾಗಪ್ಪ, ಶ್ರೀಕಂಠೇಶ್ವರ ಆಗ್ರೋ ಮಾಲೀಕ ಸೋಮಶೇಖರ್, ತಾಲೂಕು ರಾಜ್ಯ ರೈತ ಸಂಘ ಹಸಿರುಸೇನೆ ಅಧ್ಯಕ್ಷ ರೇಣುಕಮೂರ್ತಿ, ಗ್ರಾಪಂ ಸದಸ್ಯರಾದ ಕಣೇನೂರು ಜಗದೀಶ್, ತಾಲೂಕು ಮಾಜಿ ಅಧ್ಯಕ್ಷ ಚಾಮರಾಜ್, ಹೋಬಳಿ ಘಟಕದ ಅಧ್ಯಕ್ಷ ನಂದೀಶ್ ಇತರರಿದ್ದರು.

ಮೊತ್ತ ಗ್ರಾಮದ ಬೀರೇಶ್ವರ ದೇಗುಲ ಉದ್ಘಾಟನೆ



ಮಲ್ಕುಂಡಿ, ಮೇ 11(ಚನ್ನಪ್ಪ)–ನಂಜನಗೂಡು ತಾಲೂಕಿನ ಮೊತ್ತ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬೀರೇಶ್ವರ ದೇವಸ್ಥಾನವನ್ನು ಶಾಸಕ ಬಿ.ಹರ್ಷವರ್ಧನ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ದೇವರನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿದಾಗ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಗ್ರಾಮೀಣ ಭಾಗದ ಜನರು ಯಾವುದೇ ಹಬ್ಬ ಹರಿದಿನಗಳಲ್ಲಿ ಹೊಸ ಬಟ್ಟೆ ಧರಿಸಿ ದೇವಾಲಯಗಳಿಗೆ ಹೋಗಿ ಪೂಜಿಸಿ ಅವರ ಕಷ್ಟಗಳನ್ನು ಪರಿಹರಿಸುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ಇದರಿಂದ ಅವರ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯಲಿದೆ. ಮೊತ್ತ ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ 80 ಲಕ್ಷ ರೂ. ಅನುದಾನ ನೀಡಲಾಗಿದೆ. ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ವರುಣಾ ಕ್ಷೇತ್ರದ ಶಾಸಕ ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಹೆಚ್.ಎಂ. ಕೆಂಡಗಣ್ಣಪ್ಪ, ದಾಸೇಗೌಡ, ರಾಜು, ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ ಸೇರಿದಂತೆ ಪ್ರಮುಖರಿದ್ದರು.

ಶಿಕ್ಷಣ ನೀಡುವ ಗುರುಗಳು ಕಣ್ಣಿಗೆ ಕಾಣುವ ದೇವರು



ತಿ.ನರಸೀಪುರ, ಮೇ 11(ಎಸ್‌ಎಸ್)– ದೇಶಕ್ಕೆ ಅನ್ನ ಕೊಡುವ ರೈತ, ಗಡಿ ಕಾಯೋ ಯೋಧ ಹಾಗೂ ಶಿಕ್ಷಣ ನೀಡುವ ಗುರುಗಳು ಕಣ್ಣಿಗೆ ಕಾಣುವ ದೇವರು ಎಂದು ಪುರಸಭಾ ಸದಸ್ಯ ಅರ್ಜುನ್ ರಮೇಶ್ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ 14 ವರ್ಷಗಳ ಕಾಲ ಸೇವೆ ಸಲ್ಲಿಸಿ ಕೆ.ಆರ್.ನಗರ ಸರ್ಕಾರಿ ಮಹಿಳಾ ಕಾಲೇಜಿಗೆ ವರ್ಗಾವಣೆಗೊಂಡ ಡಾ.ನಾಗರತ್ನಮ್ಮ ಹಾಗೂ ಕೊಳ್ಳೇಗಾಲ ಕಾಲೇಜಿಗೆ ವರ್ಗವಾದ ಸಹ ಪ್ರಾಧ್ಯಾಪಕಿ ಪ್ರೇಮಕುಮಾರಿ ಅವರನ್ನು ಕಾಲೇಜಿನಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.

ಒಬ್ಬ ವಿದ್ಯಾರ್ಥಿ ಒಳ್ಳೆಯವನಾಗಿ ಹೆಸರು ಗಳಿಸಬೇಕಾದರೆ ಎಷ್ಟು ಕಷ್ಟ ಪಡಬೇಕೋ ಆತನಿಗೆ ಶಿಕ್ಷಕರಿಂದಲೂ ಉತ್ತಮ ಸಹಕಾರ ಸಿಗಬೇಕು. ಪೋಷಕರು ತಮ್ಮ ಮಕ್ಕಳ ಸಾಧನೆ ಬಗ್ಗೆ ಹೆಮ್ಮೆ, ಗರ್ವದಿಂದ ಮಾತನಾಡುತ್ತಾರೆ ಎಂದರೆ ಅದರಲ್ಲಿ ಅಧ್ಯಾಪಕರ ಶ್ರಮ ಇರುತ್ತದೆ ಎಂದರು.

ಕಾಂಪೌಂಡ್ ನಿರ್ಮಾಣಕ್ಕೆ 7 ಲಕ್ಷ: ಇತ್ತೀಚೆಗೆ ಪುರಸಭೆಯಲ್ಲಿ ನಡೆದ ತುರ್ತು ಸಭೆಯಲ್ಲಿ 24.10ರ ಎಸ್‌ಎಫ್‌ಸಿ ಯೋಜನೆಯಡಿ ಪರಿಶಿಷ್ಟರಿಗೆ ಮೀಸಲಾಗಿರುವ 7 ಲಕ್ಷ ಹಣವನ್ನು ನನ್ನ ಮನವಿ ಮೇರೆಗೆ ಕಾಲೇಜು ಕಾಂಪೌಂಡ್ ನಿರ್ಮಾಣಕ್ಕೆ ಮೀಸಲಿಡಲು ಸದಸ್ಯರೆಲ್ಲರೂ ಸಮ್ಮತಿಸಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನಕ್ಕೆ ಶಾಸಕ ಅಶ್ವಿನ್ ಕುಮಾರ್ ಅವರಲ್ಲಿ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ವರ್ಗಾವಣೆಗೊಂಡ ಪ್ರಾಂಶುಪಾಲೆ ಡಾ.ನಾಗರತ್ನಮ್ಮ ಸಹ ಪ್ರಾಧ್ಯಾಪಕಿ ಪ್ರೇಮಾ ಕುಮಾರಿ ಮಾತನಾಡಿದರು. ಇದೇ ವೇಳೆ ಇವರನ್ನು ಸನ್ಮಾನಿಸಲಾಯಿತು. ಕಾಲೇಜು ಪ್ರಾಂಶುಪಾಲ ಹೆಚ್.ವಿ.ಉದಯಕುಮಾರ್, ಸಹಪ್ರಾಧ್ಯಾಪಕಿ ಮಾಧವಿ, ಕನ್ನಡ ಸಹಪ್ರಾಧ್ಯಾಪಕ ಮಂಜುನಾಥ್, ಕಚೇರಿ ಸಿಬ್ಬಂದಿ ನಂಜುಂಡಸ್ವಾಮಿ, ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಉಪಾಧ್ಯಕ್ಷ ಸಿದ್ದುಂಡಿ ಗೋವಿಂದರಾಜು, ಖಜಾಂಚಿ ಬಿ.ಎಲ್.ಮಹದೇವ, ಪ್ರದೀಪ್ ಮತ್ತಿತರರಿದ್ದರು.

ಚಿರತೆ ದಾಳಿಗೆ ಕರು ಬಲಿ

ಭೇರ್ಯ, ಮೇ 11– ಚಿರತೆ ದಾಳಿಗೆ ಹಸುವಿನ ಕರು ಬಲಿ ಆಗಿರುವ ಘಟನೆ ಸಾಲಿಗ್ರಾಮ ತಾಲೂಕಿನ ಬೆಟ್ಟಹಳ್ಳಿ ನಡೆದಿದೆ. ಗ್ರಾಮದ ಸ್ವಾಮೀಗೌಡ ಅವರ ಕೊಟ್ಟಿಗೆಯಲ್ಲಿದ್ದ ಕರುವನ್ನು ಮಂಗಳವಾರ ರಾತ್ರಿ ಚಿರತೆ ಎಳೆದೊಯ್ದು ತಿಂದು ಹಾಕಿದೆ.

ಗ್ರಾಮ ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದ್ದು, ಇದು ಸೇರಿ ಮೂರು ಕರು ಚಿರತೆಗೆ ಬಲಿಯಾಗಿದೆ ಎಂದು ಗ್ರಾಮದ ಮುಖಂಡ ಅರುಣ್ ಆತಂಕ ವ್ಯಕ್ತಪಡಿಸಿದರು.

ಚಿರತೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ನಿರ್ಲಕ್ಷ್ಯವಹಿಸಿದ್ದು, ಜಮೀನಿನಲ್ಲಿ ಕೆಲಸಕ್ಕೆ ತೆರಳಲು ಕೂಲಿಕಾರರು, ರೈತರು ಭಯಪಡುವಂತಾಗಿದೆ. ಸಂಬಂಧಪಟ್ಟ ಮೇಲಾಧಿಕಾರಿಗಳು ಗಮನ ಹರಿಸಿ, ಸಂತ್ರಸ್ತ ರೈತ ಸ್ವಾಮೀಗೌಡ ಅವರಿಗೆ ಅರಣ್ಯ ಇಲಾಖೆಯಿಂದ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮಾರ್ಷ್ ಅಬ್ಬರ; ರಾಜಸ್ಥಾನ್ ವಿರುದ್ಧ ಡೆಲ್ಲಿಗೆ ಜಯ

ಮುಂಬೈ, ಮೇ 11– ಮಿಚೆಲ್ ಮಾರ್ಷ ಹಾಗೂ ನಾಯಕ ಡೇವಿಡ್ ವಾರ್ನರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ 8 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಈ ಮೂಲಕ ಪ್ಲೇ–ಆಫ್ ಕನಸು ಜೀಂವತವಾಗಿರಿಸಿದೆ. 12 ಪಂದ್ಯಗಳಲ್ಲಿ ಆರನೇ ಗೆಲುವು ದಾಖಲಿಸಿರುವ ಡೆಲ್ಲಿ ಒಟ್ಟು 12 ಅಂಕಗಳೊಂದಿಗೆ ಐದನೇ ಸ್ಥಾನ ಕಾಯ್ದುಕೊಂಡಿದೆ.



ಇಲ್ಲಿನ ಡಾ.ಡಿವೈ ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ 58ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 160ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು. ತಂಡದ ಪರವಾಗಿ ಜೋಸ್ ಬಟ್ಲರ್ 7, ಯಶಸ್ವಿಜೈಸ್ವಾಲ್ 19, ರವಿಚಂದ್ರನ್ ಅಶ್ವಿನ್ 50, ದೇವದತ್ತ್ ಪಡಿಕ್ಕಲ್ 48, ಸಂಜು ಸಾಮ್ಸನ್ 6, ರಿಯಾನ್‌ಪರಾಗ್ 9, ಡುಸೆನ್ 12, ಬೌಲ್ಟ್ 3ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಡೆಲ್ಲಿ ಪರವಾಗಿ ಚೇತನ್ ಸಕರಿಯ, ಎನ್ರಿಚ್ ನಾಕಿಯಾ ಹಾಗೂ ಮಿಚೆಲ್ ಮಾರ್ಷ್ ತಲಾ ಎರಡು ವಿಕೆಟ್ ಪಡೆದರು. 161ರನ್‌ಗಳ ಗುರಿ ಬೆನ್ನತ್ತಿದ್ದ ಡೆಲ್ಲಿ ಕ್ಯಾಪಿಟಲ್ಸ್ 18.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 161ರನ್ ಗಳಿಸುವ ಮೂಲಕ ಗೆಲುವಿನ ಸಂಭ್ರಮ ಆಚರಿಸಿತು. ತಂಡದ ಪರವಾಗಿ ಡೇವಿಡ್ ವಾರ್ನರ್ 52, ಮಿಚೆಲ್ ಮಾರ್ಷ 89, ರಿಷಬ್‌ಪಂತ್ 13ರನ್ ಗಳಿಸಿದರು. ಬೌಲಿಂಗ್‌ನಲ್ಲಿ ರಾಜಸ್ಥಾನ್ ಪರ ಚಾಹಲ್, ಬೌಲ್ಟ್ ತಲಾ ಒಂದೊಂದು ವಿಕೆಟ್ ಪಡೆದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಮಿಚೆಲ್ ಮಾರ್ಷ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಕೆ.ಆರ್.ನಗರ ಪಟ್ಟಣದಲ್ಲಿರುವ ಶಾಸಕರ ಕಚೇರಿಯಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಉಚಿತವಾಗಿ ಸಾ.ರಾ.ಸ್ನೇಹ ಬಳಗದ ಕಾರ್ಯದರ್ಶಿ ಸಿ.ಜೆ.ಆನಂದ್ ನೋಟ್‌ಬುಕ್ ವಿತರಿಸಿದರು. ಈ ವೇಳೆ ಪುರಸಭಾ ಸದಸ್ಯ ಜಗದೀಶ್, ಸಾ.ರಾ.ಸ್ನೇಹ ಬಳಗದ ನಿರ್ದೇಶಕರಾದ ಮಹೇಶ್, ಹರೀಶ್, ವಿದ್ಯಾರ್ಥಿಗಳಾದ ಕೃಷ್ಣಮೂರ್ತಿ, ಸಂದೀಪ್ ಕುಮಾರ್, ಮೋಹನ್, ನಂದಿನಿ, ಸಾತ್ವಿಕ್, ಸೇರಿದಂತೆ ಹಲವರು ಹಾಜರಿದ್ದರು.

25ನೇ ವರ್ಷದ ಪುಣ್ಯ ಸ್ಮರಣೆ



ಶ್ರೀ ಎ.ಸಿ ಶ್ರೀಕಂಠಯ್ಯ ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು.

ಸನ್ಮಾರ್ಗದಲ್ಲಿ ದಣಿದಿರಿ...

ನಿಮ್ಮ ಹೆಸರು ಅಜರಾಮರ...

ನಿಮ್ಮ ಸ್ಮರಣೆಯಲ್ಲಿ....

ಪಾರ್ವತಮ್ಮ ಶ್ರೀಕಂಠಯ್ಯ, ಮಾಜಿ ಶಾಸಕರು, ರವೀಂದ್ರ ಶ್ರೀಕಂಠಯ್ಯ, ಶಾಸಕರು
ಹಾಗೂ ಕುಟುಂಬ ವರ್ಗ ಮತ್ತು ದಿ॥ ಎ.ಸಿ ಶ್ರೀಕಂಠಯ್ಯ ರವರ ಅಭಿಮಾನಿಗಳು